ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

Blog: janashakthi.wordpress.com e-mail: js_weekly@yahoo.com

ಸಂಪುಟ 5 ಸಂಚಿಕೆ 49
ಡಿಸೆಂಬರ್ 04, 2011
ಪುಟ 16 ರೂ. 5/-







ರೈತರ ಬದುಕಿನ ಮೇಲೆ ಭೂಸ್ವಾಧೀನವೆಂಬ ಬುಲ್ಡೋಜರ್



ಬಳ್ಳಾರಿ ಉಪ ಚುನಾವಣೆ : ಸೋಲಲೇಬೇಕಾದ ಮೂವರು



ಜನತೆಯ ಸಂಕಟಗಳಿಗೆ ಕುರುಡಾದ ಸರ್ಕಾರ



ಯುರೋ ಬಿಕ್ಕಟ್ಟು : ಮೂರು ಸರ್ಕಾರಗಳ ಬಲಿ



ರಾಯಚೂರು : 'ಬಾಲ ಮುತ್ತೈದೆ'ಯರ ಬಲಿಗೆ ಕೊನೆಯಲ್ಲಿ?

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಾಳೆಗಾರಿ ಮೌಲ್ಯಗಳು ಮತ್ತು ಮೂಢನಂಬಿಕೆಗಳು ತಾಂಡವವಾಡುತ್ತಿರುವ ಉತ್ತರ ಕರ್ನಾಟಕದ ಪ್ರದೇಶದಲ್ಲಿ ಅಮಾಯಕ ಹೆಣ್ಣುಮಕ್ಕಳ ಜೀವಕ್ಕೆ ರಕ್ಷಣೆಯೇ ಇಲ್ಲದಂತಾಗಿದೆ. ನಿಧಿಗಾಗಿ ನರಬಲಿಯಂತಹ ಕ್ರೂರ ಪ್ರಕರಣಗಳು ನಡೆಯುತ್ತಿದ್ದು, ಬಾಲಕಿ ಹನುಮಂತಿಯ ಸಾವುಕೂಡಾ ನರಬಲಿ ಎಂಬುದಕ್ಕೆ ಹಲವಾರು ಕುರುಹುಗಳು ಇಲ್ಲಿ ಕಾಣುತ್ತಿವೆ. ದುರಂತವೆಂದರೆ ಪೊಲೀಸು, ಆಡಳಿತ ಇವುಗಳ ರಕ್ಷಣೆಗೆ ನಿಂತಿರುವುದು.



'ಬಾಲಮುತ್ತೈದೆ'ಯರ ಬಲಿಗೆ ಕೊನೆಯೆ ಇಲ್ಲವೆ?

ಮಲ್ಲಯ್ಯ ಜಾಲಹಳ್ಳಿ

ಪಾಳೆಗಾರಿಕೆಯ ಪ್ರತಿರೂಪವಾಗಿರುವ ರಾಯಚೂರು ಜಿಲ್ಲೆಯಲ್ಲಿ ಅದರ ಕ್ರೂರ ಆಚರಣೆಯ ಕುರುಹುಗಳನ್ನು ಆಗಾಗ ಹೊರಗೆಡವುತ್ತಲೇ ಇರುತ್ತದೆ. ಅಂತಹ ಆಚರಣೆಗಳಲ್ಲಿ ಬಹಳಷ್ಟು ಮುಚ್ಚಿ ಹೋಗುತ್ತವೆ. ಅವುಗಳಲ್ಲಿ ಅಲ್ಲೊಂದು-ಇಲ್ಲೊಂದು ಪ್ರಕರಣಗಳು ಮಾತ್ರ ಬಯಲಿಗೆ ಬರುತ್ತವೆ. ಅಂತಹ ಪ್ರಕರಣಗಳಲ್ಲಿ ಒಂದು ಹನುಮಂತಿ ಈಚನಾಳ ಪ್ರಕರಣೆ

ಹನುಮಂತಿ ತಂದೆ ಅಮರಪ್ಪ ಸಾ॥ ಈಚನಾಳ ತಾ॥ ಲಿಂಗಸೂನೂರು ಈಚನಾಳ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿಯಾಗಿದ್ದಳು. ಆಕೆಯ ತಂದೆ ಅಮರಪ್ಪನಿಗೆ ಸ್ವಲ್ಪ ಭೂಮಿ ಇದೆ. ಜೊತೆಗೆ ಕುರಿ-ಆಡುಗಳನ್ನು ಸಾಕಿಕೊಂಡಿದ್ದಾರೆ. ಹನುಮಂತಿಯ ತಂದೆ ಅಮರಪ್ಪ ತಾಯಿ ಅಮರವ್ವ ಶಾಂತ ಸ್ವಭಾವದವರಾಗಿದ್ದು ಶ್ರಮಜೀವಿಗಳು. ಮಗಳಿಗೆ ವಿದ್ಯೆ ಕಲಿಯುವಲ್ಲಿ ಆಸಕ್ತಿ ಇದ್ದುದರಿಂದ ಶಾಲೆಗೆ ಕಳಿಸುತ್ತಿದ್ದರು. ಹನುಮಂತಿ ದಿನಾಲು ಬೆಳಿಗ್ಗೆ ಎದ್ದು ಗ್ರಾಮದಿಂದ ದೂರದಲ್ಲಿ ಇರುವ ತಮ್ಮ ಕುರಿಹಟ್ಟಿಯನ್ನು ಸ್ವಚ್ಛಗೊಳಿಸಲು ಹೋಗುತ್ತಿದ್ದಳು. ಈ ಕುರಿಹಟ್ಟಿಯು ನಾಗಪ್ಪ ಪೂಜಾರಿ ಎಂಬುವವರ ಹೊಲದ ಹತ್ತಿರ ಇದೆ.

ಎಂದಿನಂತೆ 24-09-2011ರಂದು ಬೆಳಿಗ್ಗೆ ಎದ್ದು ಕುರಿಹಟ್ಟಿ ಸ್ವಚ್ಛಗೊಳಿಸಲು ಹೋಗಿದ್ದಾಳೆ. ಕುರಿಹಟ್ಟಿಯನ್ನು ಸ್ವಚ್ಛಗೊಳಿಸಿದ ನಂತರ ನಾಗಪ್ಪ ಪೂಜಾರಿಯ ಸೊಸೆಯನ್ನು ಮಾತನಾಡಿಸಿದ್ದಾಳೆ. ನಾಗಪ್ಪ ಪೂಜಾರಿಯ ಸೊಸೆ ಕೊಟ್ಟ ಚಹ ಕುಡಿದಿದ್ದಾಳೆ. ಪರೀಕ್ಷೆ ಕಟ್ಟಬೇಕಾಗಿದೆ ಹೋಗುತ್ತೇನೆ ಎಂದು ಹನುಮಂತಿ ನಾಗಪ್ಪ ಪೂಜಾರಿಯ ಸೊಸೆ ಕೊಟ್ಟ ಚಹ ಕುಡಿದು ಹೋಗಿದ್ದಾಳೆ. ಆದರೆ ಮನೆಗೆಂದು ಹೇಳಿ ಹೊರಟ ಹನುಮಂತಿ ಎಂದಿನಂತೆ ಮನೆಮುಟ್ಟಲಿಲ್ಲ. ತಾಯಿ ಅಮರವ್ವ ಮಗಳಿಗಾಗಿ ಇಡೀದಿನ ಕಾದಿದ್ದಾಳೆ. ಸಂಜೆಯಾದರೂ ಬಾರದೆ ಇದ್ದಾಗ ಹುಡುಕಿದ್ದಾಳೆ. ಹನುಮಂತಿಯ ಸಹಪಾಠಿಗಳನ್ನು ಕೇಳಿದಾಗ ಹನುಮಂತಿ ಪರೀಕ್ಷೆ ಕಟ್ಟಲು ಬರಲಿಲ್ಲವೆಂದು ಹೇಳಿದ್ದಾರೆ. ಹನುಮಂತಿಯ ತಂದೆ,ತಾಯಿ,ತಂಗಿಯರು ಮತ್ತು ಚಿಕ್ಕಪ್ಪ ಸೇರಿ ರಾತ್ರಿ ಸಹ ಹುಡುಕಿದ್ದಾರೆ. ಎಲ್ಲೂ ಪತ್ತೆಯಾಗಲಿಲ್ಲ. ಮರುದಿನವೂ ಹುಡುಕಿದ್ದಾರೆ. ಸಿಕ್ಕಲಿಲ್ಲವಾದ್ದರಿಂದ 26-09-2011ರಂದು ಲಿಂಗಸೂಗೂರಿಗೆ ಹೋಗಿ ಪೋಲಿಸರಿಗೆ ದೂರು ಸಲ್ಲಿಸಲು ಮನೆಯವರೆಲ್ಲಾ ಮಾತಾಡಿಕೊಂಡಿದ್ದಾರೆ.

ಆದರೆ 26-09-2011ರಂದು ಬೆಳಿಗ್ಗೆ ನಾಗಪ್ಪ ಪೂಜಾರಿಯ ಸೊಸೆ ಬಂದು ತಮ್ಮ ಬಾವಿಯಲ್ಲಿ ಹನುಮಂತಿ ಹೆಣ ಇದೆ ಎಂದು ಹೇಳಿದ್ದಾಳೆ. ತಾಯಿ ಅಮರವ್ವ ಹೋಗಿ ಮುಟ್ಟುವಷ್ಟರಲ್ಲಿ ಶವ ಮೇಲೆ ಎತ್ತಿ ಇಟ್ಟಿದ್ದಾರೆ. ತಾಯಿ ಅಮರವ್ವನನ್ನು ಹನುಮಂತಿ ಶವ ಸರಿಯಾಗಿ ನೋಡಲು ಬಿಟ್ಟಿಲ್ಲ. ಆನಾಹೊಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಡಾಕ್ಟರ್ ಅಮರೇಶ್ ಬಂದಿದ್ದಾರೆ. ಆದರೆ ಶವವನ್ನು ಪೋಸ್ಟಮಾರ್ಟಂ ಮಾಡದೆ ಕೇವಲ ನೋಡಿಕೊಂಡು ಹೋಗಿದ್ದಾರೆ. ಪೋಲಿಸರು ಸೇರಿದಂತೆ ಕೆಲವರು ಶವವನ್ನು ಸುಡಲು ಆತುರ ಪಟ್ಟಿದ್ದಾರೆ. ಆದರೆ ಹನುಮಂತಿಯ ಚಿಕ್ಕಪ್ಪ ಶವವನ್ನು ಸುಡಲು ಕೊಡದೆ ತಾನೆ ಬಂಡಿಯಲ್ಲಿ ಹಾಕಿಕೊಂಡು ಹೋಗಿ ಮಣ್ಣು ಮಾಡಿದ್ದಾರೆ. ಮಣ್ಣು ಮಾಡುವಾಗ ಹನುಮಂತಿಯ ಎಡಗಣ್ಣು ಇಲ್ಲದಿರುವುದು, ಬಾಯಲ್ಲಿ ಹಲ್ಲುಗಳು ಇಲ್ಲದಿರುವುದು ಗೊತ್ತಾಗಿದೆ. ಆತ ಹನುಮಂತಿಯನ್ನು ಯಾರೋ ಬಲಾತ್ಕಾರ ಮಾಡಿ ಕೆಡಸಿ ಹಗರಣ ಬಯಲಿಗೆ ಬರಬಾರದೆಂದು ಕೊಂದು ಬಾವಿಗೆ ಹಾಕಿರಬೇಕೆಂದು ಅಂದುಕೊಂಡಿದ್ದಾನೆ.

ಹನುಮಂತಿ ಕಾಣದ ಬಗ್ಗೆ ಪೋಲಿಸರಿಗೆ ದೂರು ಕೊಡಲು ತೀರ್ಮಾನಿಸಿದ ತಕ್ಷಣ ಆಕೆಯ ಶವ ಬಾವಿಯಲ್ಲಿ ಕಂಡದ್ದು, ಎಂದೂ ತೋಟಕ್ಕೆ ಹೋಗದ ನಾಗಪ್ಪ ಪೂಜಾರಿಯ ಸೊಸೆ ಅಂದು ತೋಟಕ್ಕೆ ಹೋಗಿ ಬಾವಿಯಲ್ಲಿ ಶವ ಕಂಡದ್ದು, ಡಾಕ್ಟರ್ ಶವ ಪರೀಕ್ಷೆ ಮಾಡದೆ ಇರುವುದು, ಪೋಲಿಸರು ಹೆಣ ಸುಡಲು ಒತ್ತಾಯಿಸಿದ್ದು ಮತ್ತು ಹನುಮಂತಿಯ ಕಣ್ಣು ಹಾಗೂ ಹಲ್ಲುಗಳು ನಾಶವಾದದ್ದು ಹೀಗೆ ಹತ್ತಾರು ಅನುಮಾನಾಸ್ಪದ ಸುದ್ದಿಗಳು ಈಚನಾಳ ಗ್ರಾಮದಲ್ಲಿ ಹರಡಿವೆ. ಇದು ಪತ್ರಿಕೆಯಲ್ಲಿ ಸಹ ಕೊಲೆಶಂಕೆ ಎಂದು ಪ್ರಕಟವಾಗಿದೆ.

ವಿದ್ಯಾರ್ಥಿನಿಯ ಕೊಲೆಶಂಕೆ ಎಂದು ಪತ್ರಿಕೆಯಲ್ಲಿ ಪ್ರಕಟವಾದ ತಕ್ಷಣ ಎಸ್.ಎಫ್.ಐ. ತಾಲೂಕ ಸಮಿತಿಯವರು ಪೋಲಿಸ ಠಾಣೆಗೆ ಹೋಗಿ ವಿಚಾರಿಸಿದ್ದಾರೆ. ಪೋಲಿಸರು ಅದು ಕೊಲೆಯಲ್ಲವೆಂದೂ ಬಹುಶಃ ನೀರು ಕುಡಿಯಲು ಹೋಗಿ ಜಾರಿಬಿದ್ದು ಸತ್ತಿರಬೇಕೆಂದೂ ವಾದಿಸಿದ್ದಾರೆ. ಕೇಸು ದಾಖಲಾತಿ ತೋರಿಸಿ ಎಂದಾಗ 'ಸಂಶಯಾಸ್ಪದ ಸಾವು (ಯುಡಿಆರ್)' ಎಂದು ದಾಖಲಿಸಿದ್ದಾಗಿ ತೋರಿಸಿದ್ದಾರೆ. ಪೋಲಿಸರ ವರ್ತನೆ ಸಹ ಅನುಮಾನಾಸ್ಪದವಾಗಿ ಕಂಡದ್ದರಿಂದ 29-09-2011ರಂದು ವಿದ್ಯಾರ್ಥಿಗಳು ಪ್ರತಿಭಟಿಸಿ ಅದನ್ನು ಕೊಲೆ ಮೊಕದ್ದಮೆಯಾಗಿ ಪರಿವರ್ತಿಸಲು ಒತ್ತಾಯಿಸಿದ್ದಾರೆ. ನಂತರ ಜನವಾದಿ ಮಹಿಳಾ ಸಂಘಟನೆಯವರು ಮತ್ತು ವಾಲ್ಮಿಕಿ ಸಮಾಜದವರು ಸಹ ಒತ್ತಾಯ ಮಾಡಿ ಹೋರಾಟ ಮಾಡಿದ್ದಾರೆ. ಆದರೆ ಪೋಲಿಸರು ಯಾವುದೋ ಒತ್ತಡಕ್ಕೆ ಮಣಿದು ಸುಮ್ಮನಿದ್ದಾರೆ.

ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಕಾ॥ ಕೆ.ಎಸ್.ಸರಸ್ವತಿಯವರು ನಿಯೋಗದೊಂದಿಗೆ ಹೋಗಿ ಹನುಮಂತಿಯ ತಾಯಿ ಅಮರವ್ವನೊಂದಿಗೆ ಮಾತನಾಡಿದಾಗ ಆಕೆ ನಿಸ್ಸಹಾಯಕಳಾಗಿ ತಾನು ಬಡವಳು, ಕೈಗೆ ಬಂದ ಮಗಳನ್ನು ಕಳೆದುಕೊಂಡಾಗಿದೆ. ಈಗ ಏನು ಮಾಡಿ ಏನು ಪ್ರಯೋಜನ ಎಂದು ನಿರಾಶೆ ವ್ಯಕ್ತಪಡಿಸಿದ್ದಾರೆ. ಆದರೆ ಜನವಾದಿ ಮಹಿಳಾ ಸಂಘಟನೆಯ ಮುಖಂಡರು, ದೇವದಾಸಿ ವಿಮೋಚನಾ ಸಂಘದ ಶಾಂತಾಬಾಯಿ ನಾಗರಾಳ್ ಬಿಸಿಯೂಟ ಸಂಘದ ಕಮಲಮ್ಮ ಇಅವರೆಲ್ಲಾ ಧೈರ್ಯ ತುಂಬಿದಾಗ ಅಮರವ್ವ ಪುನಃ ಕೇಸ್ ಮಾಡಲು ಒಪ್ಪಿದ್ದಾಳೆ. ಮತ್ತು ತನ್ನ ಮಗಳಿಗೆ ಚುಡಾಯಿಸುತ್ತಿದ್ದ ದೇವಪ್ಪ ಮತ್ತು ಹನುಮಂತ ಸೇರಿ ಅತ್ಯಾಚಾರ ಮಾಡಿ ಕೊಲೆ ಮಾಡಿರಬೇಕೆಂದು ಶಂಕೆ ವ್ಯಕ್ತಪಡಿಸಿದ್ದಾಳೆ. ಮೂರೂ ಸಂಘಟನೆಗಳ ಮುಖಂಡರು ಸೇರಿ 6-10-2011ರಂದು 'ಮರುದೂರು' ಅಮರವ ಆಸಕ್ತಿ ಮುಖಾಂತರ ದಾಖಲಿಸಿದ್ದಾರೆ. ಆದರೆ ಈ ಕೇಸನ್ನು ಮುಚ್ಚಿಹಾಕುವಲ್ಲಿ ಆಸಕ್ತಿ ಇದ್ದ ಪೋಲಿಸರು ದೇವಪ್ಪನ್ನಾಗಲೀ ಅಥವಾ ಹನುಮಂತನ್ನಾಗಲೀ ಬಂಧಿಸಲಿಲ್ಲ, ವಿಚಾರಿಸಲಿಲ್ಲ. ಈಬಗ್ಗೆ ಮುಖಂಡರು ವಿಚಾರಿಸಿದರೆ ಸಿಕ್ಕಿಲ್ಲವೆಂಬ ಹಾರಿಕೆಯ ಉತ್ತರ ಬರುತ್ತಿತ್ತು. ಆದರೆ ಛಲಬಿಡದ ಮಹಿಳಾ ಮುಖಂಡರು ಹೋರಾಟ ಮುಂದುವರೆಸಿದ್ದಾರೆ. 14-10-2011ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಶ್ರೀಮಾನ್ ಸಿ.ಸಿ.ಪಾಟೀಲರು ರಾಯಚೂರಿಗೆ ಬಂದಾಗ ಸಂಗಾತಿಗಳಾದ ಪದ್ಮ,ಸರಸ್ವತಿ ಮತ್ತು ಮಲ್ಲಯ್ಯ ಜಾಲಹಳ್ಳಿಯವರು ಹೋಗಿ ಮನವಿಪತ್ರ ಸಲ್ಲಿಸಿದ್ದಾರೆ.

ಇಂತಹ ಎಲ್ಲಾ ಒತ್ತಡಗಳ ಪರಿಣಾಮವಾಗಿ ಜಿಲ್ಲಾಧಿಕಾರಿಗಳು 'ಶವ ಮರುಪರೀಕ್ಷೆ'ಗೆ ಆದೇಶ ನೀಡಿದ್ದಾರೆ. ಹೀಗಾಗಿ 28-10-2011ರಂದು ತಹಶೀಲ್ದಾರ ಶೇಖರಪ್ಪಶೀವಾಲ ಸಮ್ಮುಖದಲ್ಲಿ ಒಂದು ತಿಂಗಳು 2ದಿನದ ಹಿಂದೆ ಹೂತಿದ್ದ ಶವ ಹೊರತೆಗೆಯಲಾಗಿದೆ. ತಾಲೂಕ ವೈದ್ಯಾಧಿಕಾರಿ ನೇತೃತ್ವದಲ್ಲಿ ವೈದ್ಯರುಗಳಾದ ಈಶ್ವರ ಸವದಿಮುದ್ಗಲ, ಎಸ್.ಎಸ್. ಮೋರೆ ರೋಡಲಬಂಡ(ಯುಕೆಪಿ) ಮತ್ತು ಗಿರಿಯಮ್ಮ ಆನಆಹೊಸರು ಶವಮರುಪರೀಕ್ಷೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಂಗಾತಿಗಳಾದ ಕೆ.ಎಸ್.ಸರಸ್ವತಿ, ಶಾಂತಾಬಾಯಿ ನಾಗರಾಳ್, ಕಮಲಮ್ಮ, ಹನುಮಂತಪ್ಪ ವಾಲೆಗಾರ, ಮೌನೇಶ್‌ಹಿರೇತಿಕ್ಕಿಹಾಳ, ಪರಶುರಾಮ ಹಲ್ಕಾವಟಿಗಿ, ಕೆ.ಶಿವಾನಂದ, ಕೆ.ರಂಗನಾಥ ಮುಂತಾದವರಿದ್ದು ಕಣ್ಣಾರೆ ನೋಡಿದ್ದಾರೆ. ಪತ್ರಿಕೆಯವರು ನೋಡಿದ್ದಾರೆ. ಹನುಮಂತಿಯ ಶವದಲ್ಲಿ ಎಡಗಣ್ಣು, ಎಡಭಾಗದ ಹಲ್ಲುಗಳು, ಎಡಮೊಲೆ, ಎಡಗೈ ಹೆಬ್ಬೆರಳು ಎಡಗಾಲಿನ ಹೆಬ್ಬೆರಳು ಇಲ್ಲ ಎಂಬುದನ್ನು ಎಲ್ಲರೂ ಗಮನಿಸಿದ್ದಾರೆ.

ಇದೆಲ್ಲಾ ಗಮನಿಸಿದಾಗ ಇದು ಅತ್ಯಾಚರ ಮುಚ್ಚಿಹಾಕಲು ಮಾಡಿದ ಕೊಲೆ ಎಂಬುದಕ್ಕಿಂತಲೂ ನಿಧಿಗಾಗಿ 'ಬಾಲಮುತ್ತೈದೆ ಬಲಿ' ಕೊಡಲಾಗಿದೆ ಎಂಬಂತೆ ತೋರುತ್ತದೆ. *

ಸಂಪಾದಕೀಯ

ಬೇಕಿದೆ ಲೋಕಾಯುಕ್ತಕ್ಕೆ ಬಲ

ಪ್ರಮುಖ ಭೂ ಹಾಗೂ ಗಣಿ ಹಗರಣಗಳನ್ನು ಬಯಲಿಗೆಳೆದು ಭ್ರಷ್ಟಾಚಾರದ ಭಯಾನಕ ಸ್ವರೂಪವನ್ನು ದೇಶದ ಜನರೆದುರು ಅನಾವರಣಗೊಳಿಸಿದ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಮೇಲೆ ತೀವ್ರತರ ಧಾಳಿ ಆರಂಭಗೊಂಡಿರುವುದು ಆತಂಕದ ವಿಷಯವಾಗಿದೆ. ಅಧಿಕಾರಸ್ಥ ಬಿಜೆಪಿಯ ಎಲ್ಲಾ ಬಣಗಳು,ವಿರೋಧ ಪಕ್ಷಗಳಲ್ಲೊಂದಾಗಿರುವ ಜೆಡಿ ಎಸ್ ಪಕ್ಷವೂ ಸೇರಿದಂತೆ ಅವರವರದ್ದೇ ಕಾರಣಗಳಿಗಾಗಿ ವಿರೋಧಿಸುವಲ್ಲಿ ಒಂದಾಗಿವೆ. ಕೆಲವು ಬಿಜೆಪಿ ನಾಯಕರು ಲೋಕಾಯುಕ್ತ ಸಂಸ್ಥೆಯನ್ನೇ ಮುಚ್ಚಬೇಕೆಂಬುವವರೆಗೂ ವಾದಿಸುತ್ತಿರುವುದು ಅವರ ನಿಜ ಉದ್ದೇಶಗಳನ್ನು ಸಾರುತ್ತಿದೆ. ಅಲ್ಲಿ ಲೋಪ ದೋಷಗಳು ಇಲ್ಲವೆಂದೇನಲ್ಲ,ಆದರೆ ಅಂತಹವರಿಗೆ ಸಂಸ್ಥೆಯ ಮಿತಿಗಳು, ಇರಬಹುದಾದ ದೋಷಗಳನ್ನು ಸರಿಪಡಿಸಿ ಬಲಪಡಿಸಬೇಕೆಂಬ ಯಾವ ಕಾಳಜಿಯೂ ಇಲ್ಲ. ತಮ್ಮ ಹಗರಣಗಳನ್ನು ಮುಚ್ಚಿ ಹಾಕಿಕೊಳ್ಳುವ ಸ್ವೇಚ್ಚಾಚಾರದ ದುಷ್ಟತನವೇ ಅವರಲ್ಲಿ ಎದ್ದು ಕಾಣುತ್ತಿದೆ.

ಅದೇನೇ ಕೊರತೆಗಳಿದ್ದರೂ ಲೋಕಾಯುಕ್ತ ಸಂಸ್ಥೆ ವಿಶೇಷವಾಗಿ ಈ ಒಂದು ದಶಕದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಆಡಳಿತ ವ್ಯವಸ್ಥೆಯೊಳಗಿನ ಭ್ರಷ್ಟಾಚಾರವನ್ನು ಎತ್ತಿ ತೋರಿಸುವಲ್ಲಿ ಹಿಂದಿನ ಲೋಕಾಯುಕ್ತ ನ್ಯಾ. ವೆಂಕಟಾಚಲಯ್ಯನವರು ಯಶಸ್ವಿಯಾಗಿದ್ದರೆ, ನ್ಯಾ.ಸಂತೋಷ್ ಹೆಗ್ಡೆ ಮತ್ತವರ ತಂಡ ಗಣಿ ಹಾಗೂ ಭೂ ಹಗರಣಗಳನ್ನು ಬಯಲಿಗೆಳೆದು ಉದ್ಯಮಿಗಳು, ರಾಜಕಾರಣಿಗಳು,ಅಧಿಕಾರಶಾಹಿ ಗಳ ನಂಟಿನ ಇಡೀ ವ್ಯವಸ್ಥೆಯತ್ತ ಗಮನ ಸೆಳೆದರು, ಹತ್ತಾರು ಹಗರಣ ಅವ್ಯವಹಾರಗಳನ್ನು ಹೊರ ತರುವಲ್ಲಿ ಲೋಕಾಯುಕ್ತದ ಸಾಮರ್ಥ್ಯವನ್ನು ತೆರೆದು ತೋರಿದರು. ಇದರ ಪರಿಣಾಮವಾಗಿ ಜನಾರ್ದನರೆಡ್ಡಿಯಂತಹ ಉದ್ಯಮಿ ರಾಜಕಾರಣಿಗಳು, ಮಾಜಿ ಮುಖ್ಯಮಂತ್ರಿ,ಮಂತ್ರಿಗಳು, ಶಾಸಕರು ,ಹಲವು ಬಿಜೆಪಿ ನಾಯಕರೂ ಜೈಲು ಸೇರಬೇಕಾಗಿ ಬಂತು. ಇನ್ನಷ್ಟು ಸೇರಲಿದ್ದಾರೆ. ಸಂಸ್ಥೆಯ ಗೌರವ ಹೆಚ್ಚಾಗಿದೆ.ವಿಶ್ವಾಸ ಹುಟ್ಟಿಸಿದೆ. ಇದು ಭ್ರಷ್ಟರಿಗೆ ನಡುಕ ಹುಟ್ಟಿಸಿರುವುದು ನಿಜ. ಆದ್ದರಿಂದಲೇ ತಮ್ಮ ತಪ್ಪಿನ ಬಗ್ಗೆ ಕಿಂಚಿತ್ತೂ ಅಳುಕಿಲ್ಲದ ಇವರು, ಅವರ ತಾಳಕ್ಕೆ ತಕ್ಕಂತೆ ಕುಣಿಯದ ಸಂಸ್ಥೆಯ ವಿರುದ್ಧವೇ ಧಾಳಿ ನಡೆಸಿದ್ದಾರೆ. ಆಡಳಿತದಲ್ಲಿರುವ ಬಿಜೆಪಿಯು ಸಂವಿಧಾನಾತ್ಮಕವಾಗಿ ಕರ್ತವ್ಯ ನಿರ್ವಹಿಸುವ ಇಂತಹ ಸಂಸ್ಥೆಗಳ ಮೇಲೆ ನಿರಂತರ ಆಕ್ರಮಣಗೈಯ್ಯುತ್ತಾ ಬಂದಿರುವುದು ಉಲ್ಲೇಖನೀಯ.



ಇಲ್ಲೊಂದು ದುಷ್ಟ ಕೂಟವೇ ಕಾರ್ಯಪ್ರವೃತ್ತವಾಗಿರುವಲ್ಲಿ ಅನುಮಾನವಿಲ್ಲ. ಕಳೆದ ನಾಲ್ಕು ತಿಂಗಳ ಹಿಂದೆ ಮಾಡಿದ್ದ ಲೋಕಾಯುಕ್ತದಲ್ಲಿ ಅಧಿಕಾರಿಯಾಗಿದ್ದ ಮಧುಕರಶೆಟ್ಟಿ ಯವರ ಸಂದರ್ಶನವನ್ನು ಈಗ ಪ್ರಕಟಿಸಿ ರಾಡಿ ಎಬ್ಬಿಸಿ ಭ್ರಷ್ಟರು ಧಾಳಿ ನಡೆಸಲು ಅನುವು ಮಾಡಿಕೊಟ್ಟಿರುವ ಕನ್ನಡ ಪ್ರಭ ಪತ್ರಿಕೆಯ ಉದ್ದೇಶ ವಾದರೂ ಏನು? ಗಣಿ ಹಗರಣದಲ್ಲಿ ಸಂಪಾದಕ ವಿ. ಭಟ್ಟ ಹಣ ಪಡೆದ ಬಗ್ಗೆ ಪ್ರಸ್ತಾಪವಿರುವುದೇ?. ಹಾಗಾದರೆ ಇದರ ಮಾಲೀಕ ರಾಷ್ಟ್ರದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನ ನಡೆಸುತ್ತಿರುವುದರ ಅರ್ಥವಾದರೂ ಏನು?. ಇಧೇ ಪತ್ರಿಕೆಯನ್ನು ಅನಂತ್ ಕುಮಾರ್ ಬಣ ಯಡಿಯೂರಪ್ಪನವರ ವಿರುದ್ಧ ಬಳಸುತ್ತಿರಲಿಲ್ಲವೇ . ಹಾಗಾದರೆ ಜೈಲ್ನಿಂದ ಜಾಮೀನಿನ ಮೇಲೆ ಹೊರ ಬಂದ ತಕ್ಷಣ ಬಂಡಾಯವೇಳದಂತೆ ಮತ್ತು ಹಗರಣಗಳನ್ನು ಮುಚ್ಚಿ ಹಾಕಲು ಈ ಮಾಜಿ ಸಿ.ಎಂ.ರೊಂದಿಗಿನ ಯುದ್ಧ ವಿರಾಮದ ರಾಜೀ ಸಂಧಾನದ ಫಲಶೃತಿಯೇ ಇದು ?.

ನೂರಾರು ರಾಜಕೀಯ ನಾಯಕರು, 683 ಅಧಿಕಾರಿಗಳು ಭಾಗಿಯಾಗಿರುವ ಅಕ್ರಮ ಗಣಿಗಾರಿಕೆ ಕುರಿತ ವರದಿಯನ್ನು ಸರಕಾರ ಒಪ್ಪಿಕೊಳ್ಳುತ್ತಿಲ್ಲ ಹಾಗೂ ಕ್ರಮವನ್ನೇ ತೆಗೆದುಕೊಳ್ಳದೇ ಸಾಯಿಸಲು ಮುಂದಾಗಿದೆ. ಆದ್ದರಿಂದಲೇ ತೆರವಾಗಿರುವ ಲೋಕಾಯುಕ್ತ ಸ್ಥಾನಕ್ಕೆ ನೇಮಕಗೊಳಿಸಲು ರಾಜ್ಯಪಾಲರ ಸೂಚನೆಯಂತೆ ಕಳಂಕವಿಲ್ಲದ ಬೇರೊಬ್ಬರ ಹೆಸರನ್ನೂ ನೀಡುತ್ತಿಲ್ಲ. ಆದರೆ ಈಗಾಗಲೇ ಅಕ್ರಮವಾಗಿ ನಿವೇಶನ ಪಡೆದ ಆರೋಪವಿರುವ ನ್ಯಾ. ಬನ್ನೂರಮಠರವರನ್ನೇ ನೇಮಿಸಲು ಒತ್ತಾಯಿಸುವುದರಲ್ಲಿ ಸ್ವ ಹಿತವಿಲ್ಲವೇ ?. ಕಳಂಕವಿಲ್ಲದಿರುವವರು ಸಿಗುವುದು ಅಸಾಧ್ಯವೆನ್ನುವ ಮುಖ್ಯ ಮಂತ್ರಿಗಳ ಹೇಳಿಕೆ ರಾಜ್ಯದ ಜನತೆಗೆ, ನ್ಯಾಯಾಂಗಕ್ಕೆ ಬಗೆವ ಅವಮಾನವಾಗಿದೆ. ಸರಕಾರದ ಈ ಕ್ರಮಗಳು ಮುಂದೆ ಸಂವಿಧಾನಾತ್ಮಕ ಬಿಕ್ಕಟ್ಟನ್ನು ಹುಟ್ಟಿಸದೇ ಇರಲಾರದು. ಆದ್ದರಿಂದ ಬಿಜೆಪಿಗೆ ಲೋಕಾಯುಕ್ತರಿಲ್ಲದ ಲೋಕಾಯುಕ್ತ ಇರಲಿ ಎಂಬ ಅನಿಸಿಕೆಯೂ ಇದೆ. ಇಂತಹ ಸನ್ನಿವೇಶದಲ್ಲಿ ನ್ಯಾ. ಬನ್ನೂರಮಠ್ ರವರು ಲೋಕಾಯುಕ್ತ ಸ್ಥಾನವನ್ನು ನಿರಾಕರಿಸುವುದು ಗೌರವಯುತದ್ದಾಗಿದೆ.

ವಿಚಿತ್ರವೆಂದರೆ ಇದುವರೆಗೂ ಬಿಜೆಪಿಯ ಹಗರಣಗಳನ್ನು ಹೊರ ತಂದ ಜೆ ಡಿ ಎಸ್ ನಾಯಕರು ಈಗ ಬಿಜೆಪಿಯೊಂದಿಗೆ ಲೋಕಾಯುಕ್ತರ ಮೇಲೆ ಧಾಳಿ ನಡೆಸುತ್ತಿರುವುದು ಸಂದರ್ಭಸಾದಕತನಕ್ಕೆ ಮತ್ತೊಂದು ನಿದರ್ಶನ. ಮಾಜಿ ಪ್ರಧಾನಿ ದೇವೇಗೌಡರು ಲೋಕಾಯುಕ್ತ ಪೋಲೀಸ್ ಅಧಿಕಾರಿ ಗಾಂವ್ಕರ್ ರವರನ್ನು ದಬಾಯಿಸಿರುವುದು ಸ್ಥಾನಕ್ಕೆ ತಕ್ಕದಲ್ಲ.

ಹೀಗೆ ವಿವಿಧ ದಿಕ್ಕುಗಳಿಂದ ಲೋಕಾಯುಕ್ತ ಸಂಸ್ಥೆಯ ಮೇಲೆ ತೀವ್ರತರ ಧಾಳಿಗಳು ನಡೆದಿರುವುದನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಬೇಕು.ಸಂಸ್ಥೆಯನ್ನು ರಕ್ಷಿಸಬೇಕು. ಇನ್ನಷ್ಟು ಹೆಚ್ಚಿನ ಅಧಿಕಾರವನ್ನು ನೀಡಿ ಬಲಪಡಿಸಬೇಕು. ಇದರ ಅವಶ್ಯಕತೆ ಹಿಂದೆಂದಿಗಿಂತ ಇಂದು ಹೆಚ್ಚಾಗಿದೆ.

ಇವರ ಸೋಲಿನಲ್ಲಿದೆ ಗೆಲುವು


ಯಾರು ಹಿತವರು ನಿಮಗೆ ಈ ಮೂವರೊಳಗೆ ಎಂದು ಕೇಳಿದರೆ ಯಾರೂ ಅಲ್ಲ ಎಂದೇ ಹೇಳಬೇಕಾದ ಸ್ಥಿತಿ ಮತದಾರರಿಗಿದೆ. ಇಲ್ಲಿಲರುವ ಬಿಜೆಪಿ, ಕಾಂಗ್ರೆಸ್ ಮತ್ತು ಪಕ್ಷೇತರನಾಗಿರುವ ಶ್ರೀರಾಮುಲು ಎಲ್ಲರೂ ಸೋಲಲೇ ಬೇಕಾದವರೇ. ಕರ್ನಾಟಕದ ನೆಲ-ಜಲ, ಕಬ್ಬಿಣದ ಅದಿರಿನಂತಹ ಅಮೂಲ್ಯ ನೈಸರ್ಗಿಕ ಸಂಪನ್ಮೂಲ ಗಳನ್ನು ನುಂಗಿ ನೊಣೆಯುಉವುದರಲ್ಲಿ ನಿಷ್ಣಾತರೇ, ಇಂತಹವರಲ್ಲಿ ಯಾರನ್ನು ಆರಿಸಿಕೊಳ್ಳಬೇಕು. ಇದು ಜನತೆಯ ಮುಂದಿರುವ ಅತ್ಯಂತ ಸಂದಿಗ್ದ ಪ್ರಶ್ನೆ. ಬಹೂಶಃ ಮುಂದಿನ ರಾಜಕಾರಣದ ಸ್ಥಿತಿ-ಗತಿಯ ಸಂಕೇತ-ಸಂದೇಶವೂ ಆಗಿರಬಹುದೇನೋ ?!

ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಚುನಾವಣೆ ತಾನಾಗಿ ಬಂದದ್ದೇನಲ್ಲ. ಬಯಸಿ-ಬರಿಸಿಕೊಂಡಿದ್ದು. ಬಹುಮತವೇ ಇಲ್ಲದಿದ್ದ ಬಿಜೆಪಿಯನ್ನು ಅಧಿಕಾರದಲ್ಲಿ ಪ್ರತಿಷ್ಠಾಪಿಸಲು ಚುನಾವಣೇ ಬಳಿಕ ಅಂದು ಆರಂಭಗೊಂಡಿದ್ದು .ಐದು ಪಕ್ಷೇತರರನ್ನು ಅಧಿಕಾರ-ಆಮೀಷಗಳ ಮೂಲಕ ಸೆಳೆಯುವದರಿಂದಲೇ. ನಂತರ ಬಿಜೆಪಿಯ ಸರ್ಕಾರದ ಅಂತರಂಗವೇ ಅದುರುತ್ತಿರುವಾಗ 'ಸುಭದ್ರತೆ'ಗಾಗಿ ಯೆಂದು(?) ವಿರೋಧ ಪಕ್ಷಗಳಲ್ಲಿನ ಶಾಸಕರನ್ನು ಖರೀದಿಸಿ ಆಪರೇಷನ್ ಕಮಲವೆಂಬ ವಿನೂತನ ಅನೈತಿಕ ಪಕ್ಷಾಂತರಕ್ಕೆ ಮುಂದಾದದ್ದು ಇತಹಾಸ. ಇದು ವಿರೋಧ ಪಕ್ಗಳನ್ನೇ ನಾಶಗೊಳಿಸುವ ಅಸ್ತವಾಗಿ, ಪ್ರಜಾಪ್ರಭುತ್ವ ವಿರೋಧಿ ಕ್ರತ್ಯವಾಯಿತು. ಇಂತಹ ಎಲ್ಲಾ ಕುಖ್ಯೆಆತ ಆಪರೇಷನ್ನಗಳನ್ನು ನಡೆಸಿದ್ದ ಗಣಿಗಳ್ಳ ರೆಡ್ಡಿ ಮತ್ತು 'ಶ್ರೀ' ಕಂಪನಿ. ಆದರೀಗ ಇನ್ನು ವಿಶೇಷವೆಂದರೆ ಅಕ್ರಮಗಳು, ರೆಡ್ಡಿಗಳ ವಿರುದ್ಧ ಕಿಡಿಕಾರುತ್ತಿದ್ದ ಜೆಡಿ(ಎಸ್) ನಾಯಕರು ಶ್ರೀರಾಮುಲು ಪಕ್ಷೇತರನಾದ ಕೂಡಲೇ ತಮ್ಮ ಅಭ್ಯರ್ಥಿಯಾಗಿಸಲು ಪ್ರಯತ್ನಿಸಿ ಅನುಕಂಪದ ಅಲೆ ಹರಿಸಿರುವುದು. ಸ್ವತಃ ಮಾಜಿ ಸಿ.ಎಂ. ಕುಮಾರ ಸ್ವಾಮಿಯೇ ರಾಮುಲು ಪರವಾಗಿ ಫ್ಯಾನ್ ಹಿಡಿದು ಹರಟಿರುವುದು ! ' ರಾಜಕೀಯದಲ್ಲಿ ಖಾಯಂ ಮಿತ್ರರಿಲ್ಲ, ಶತ್ರುಗಳೂ ಇಲ್ಲ' ಎಂಬುದನ್ನು ಎಷ್ಟು ಚೆನ್ನಾಗಿ ಸಅರ್ಥ ಮಾಡಿಕೊಂಡಿಪ್ಪರಲ್ಲ ಕುಮಾರಣ್ಣ !....

ಹೀಗಾಗಿಯೇ ಇದು ಒಂದು ವಿಚಿತ್ರ ಪ್ರಸಂಗ. ಎವರಲ್ಲಿ ಆಯ್ಕೆ ಯಾರಿಗೆ ? ಯಾರಿಗೂ ಇಲ್ಲವೆಂಭುದೇ ಆಯ್ಕೆ. ಅದಕೆ ಇದೆಯಲ್ಲ ಜನತಾ ಪ್ರಾತಿನಿಧ್ಯ ಕಾಯ್ದೆಯ 44ನೇ ಕಲಮಿನಂತೆ ಅಭಿಮತ ತಿಳಿಸುವ ಮತದಾನ ! ಇಲ್ಲಿ ಗೆಲ್ಲುವರೇ ಜನ ?!




ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಗಳ ಜಾರಿಗೆ, ಭ್ರಷ್ಟಾಚಾರ ರಹಿತ ರಾಜಕಾರಣಕ್ಕೆ ಆಗ್ರಹ

ಸಿಪಿಐ(ಎಂ) ಬಾಗೇಪಲ್ಲಿ ತಾಲ್ಲುಕು 8ನೇ ಸಮ್ಮೇಳನ

ವರದಿ :
ಜಿ. ಮುಸ್ತಾಫ್, ಬಾಗೇಪಲ್ಲಿ

ಸಿ.ಪಿ.ಐ(ಎಂ) ಪಕ್ಷದ 8ನೇ ಸಮ್ಮೇಳನವನ್ನು ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯದಲ್ಲಿ ನವೆಂಬರ್ 08 ಮತ್ತು 09 2011 ರಂದು ಹಮ್ಮಿಕೊಳ್ಳಲಾಗಿತ್ತು. ಸಮ್ಮೇಳನ ಪ್ರಥಮ ದಿನವೇ ಬಹಿರಂಗ ಸಭೆಯನ್ನು ಪಾತಪಾಳ್ಯದ ಶಾಲೆ ಮುಂಭಾಗದ ಮೈದಾನದಲ್ಲಿ ನಡೆಸಲಾಗಿತ್ತು. ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಹಾಗೂ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡುತ್ತ ಬಡವರ ಮತ್ತು ರೈತರ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಅಧಿಕಾರಕ್ಕೆ ಬಂದ ಸರ್ಕಾರಗಳು ಜನರಿಗೆ ಅಗತ್ಯ ವಿರುವ ಆಹಾರ ಮತ್ತು ವಸತಿ ಸೌಕರ್ಯಗಳನ್ನು ಪೂರೈಸುವಲ್ಲಿ ವಿಫಲವಾಗಿವೆ. ಸರ್ಕಾರಗಳ ವಿರುದ್ಧ ಭ್ರಷ್ಟಾಚಾರ ಹಗರಣದ ಆರೋಪಗಳು ಕೇಳಿ ಬರುತ್ತಿವೆ. ಆದರೆ ನೈತಿಕ ಹೊಣೆಹೊತ್ತು ರಾಜಿನಾಮೆ ನೀಡಲು ಯಾರು ಸಿದ್ದರಿಲ್ಲ. ಹಗರಣಗಳಿಗೆ ಸಂಬಂಧಿಸಿದಂತೆ ಯು.ಪಿ.ಎ ಸರ್ಕಾರದ ವಿರುದ್ಧ ಹೋರಾಟ ಕೈಗೊಳ್ಳಬೇಕಿತ್ತು. ರಾಜ್ಯದಲ್ಲಿ ಬಿ.ಜೆ.ಪಿ ಸರ್ಕಾರ ಅವ್ಯವಹಾರಗಳ ಆರೋಪಗಳ ವಿರುದ್ಧ ವಿರೋಧ ಪಕ್ಷ ಕಾಂಗ್ರೆಸ್ ಹೋರಾಟ ಮಾಡಬೇಕಾಗಿತ್ತು. ಆದರೆ ಎರಡು ಪಕ್ಷಗಳು ಮೌನವಾಗಿವೆ. ಕೇಂದ್ರದಲ್ಲಿ ಯು.ಪಿ.ಎ ಹಾಗೂ ರಾಜ್ಯದಲ್ಲಿ ಬಿಜೆಪಿ ದೇಶದ ಸಂಪತ್ತು ಲೂಟಿ ಮಾಡುತ್ತಿವೆ. ಅಭಿವೃದ್ಧಿ ನೆಪದಲ್ಲಿ ದೇಶದ ಸಂಪನ್ಮೂಲಗಳನ್ನು ದುರ್ಬಳಕೆ ಮಾಡಿ ಕೊಳ್ಳುತ್ತಿವೆ. ಸ್ವಾರ್ಥಕ್ಕಾಗಿ ನಾಗರೀಕರನ್ನು ವಂಚಿಸುತ್ತಿವೆ ಎಂದು ಆರೋಪಿಸಿದರು. ನಂತರ ಜಿಲ್ಲಾ ...ರ್ಯದರ್ಶಿ ಮಂಡಳಿಯ ಸದಸ್ಯರಾದ ಎಂ.ಪಿ.ಮುನಿ ವೆಂಕಟಪ್ಪ, ತಾಲ್ಲುಕು ಪಂಚಾಯ್ತಿ ಅಧ್ಯಕ್ಷರಾದ ಶೋಭಾರಾಣಿ, ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರಾದ ಸಾವಿತ್ರಮ್ಮ ಹಾಗೂ ಕೃಷಿ ಕೂಲಿಕಾರ್ಮಿಕ ಸಂಘದ ಬಿಳ್ಳೂರು ನಾಗರಾಜ ಮಾತನಾಡಿದರು. ಸಭೆಗೆ ಸ್ವಾಗತವನ್ನು ಪಾತಪಾಳ್ಯದ ಮುಸ್ತಾಫ್ ಕೋರಿದರು. ವಂದನಾರ್ಪಣೆಯನ್ನು ಅಗಟಿಮಡಕ ಶ್ರೀರಾಮ್ ಮಾಡಿದರು. ನಂತರ ಈ ಸಮ್ಮೇಳನದಲ್ಲಿ 250 ಪ್ರತಿನಿಧಿಗಳು ಪಾಲ್ಗೊಡಿದ್ದರು. ನಿರ್ಣಯ ಮಂಡಳಿಯಿಂದ 8 ನಿರ್ಣಯಗಳನ್ನು ಮಂಡಿಸಲಾಯಿತು. ನಂತರ ಹೊಸ ತಾಲ್ಲೂಕು ಸಮಿತಿಯನ್ನು 28 ಜನ ಸದಸ್ಯರನ್ನು ಆಯ್ಕೆ ಮಾಡಲಾಯಿತು. 28 ಜನರ ಸದಸ್ಯರಲ್ಲಿ ಹೊಸ ಕಾರ್ಯದರ್ಶಿಯನ್ನಾಗಿ ರಘುರಾಮ ರೆಡ್ಡಿಯವರನ್ನು ಆಯ್ಕೆಮಾಡಲಾಯಿತು. ಹಾಗೆಯೆ 7 ಜನ ಕಾರ್ಯದರ್ಶಿ ಮಂಡಳಿಯನ್ನು ರಚನೆ ಮಾಡಲಾಯಿತು. ನಂತರ ನವೆಂಬರ್ 29-30 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಸಮೇಳನಕ್ಕೆ 112 ಪ್ರತಿನಿದಿಗಳನ್ನು ಆಯ್ಕೆ ಮಾಡಲಾಯಿತು. ಕಡೆಯದಾಗಿ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಸಿದ್ದಗಂಗಪ್ಪ ಹಾಗೂ ಜಿಲ್ಲಾ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ ಧ್ವಜ ಇಳಿಸುವುದರೊಂದಿಗೆ ಎರಡು ದಿವಸದ ಸಮ್ಮೇಳನವನ್ನು ಮುಕ್ತಾಯ ಗೊಳಿಸಲಾಯಿತು. ಈ ಸಮ್ಮೇಳನದಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಮೊಹಮದ್ ಆಕ್ರಂ, ಚನ್ನರಾಯಪ್ಪ, ವಿ.ವಿ.ವೆಂಕಟರಾಮ್, ತಾಲ್ಲೂಕು ಸಮಿತಿ ಸದಸ್ಯರಾದ ಓಬಲರಾಜು, ಚಂದ್ರಶೇಖರರೆಡ್ಡಿ, ವೈ.ಆರ್.ವೆಂಕಟೇಶ್ ಬಾಬು, ಅಶ್ವತ್ಥನಾರಾಯಣ, ನಂಜಿರೆಡ್ಡಿ, ಇಂದುಕುರೋಳ್ಳಪಲ್ಲಿ ಕೃಷ್ಣಪ್ಪ, ಶ್ರೀನಿವಾಸರೆಡ್ಡಿ, ಜಿಲ್ಲಾ ಪಂಚಾಯಿತಿ ಸದಸ್ಯರಾದ ನಾರಾಯಣಮ್ಮ ತಾಲ್ಲುಕು ಪಂಚಾಯ್ತಿ ಉಪಾಧ್ಯಕ್ಷರಾದ ಗೌರಮ್ಮ, ಸದಸ್ಯರಾದ ಶಂರಕರೆಡ್ಡಿ, ಗೋಪಾಲಕೃಷ್ಣ, ನಾರಾಯಣಪ್ಪ, ನಾರಾಯಣನಾಯಕ್, ಸುಜಾತಮ್ಮ ಹಾಗೂ 7 ಸ್ಥಳೀಯ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸದಸ್ಯರು ಜೆ.ಎಂ.ಎಸ್.ನ ಎನ್ ಫಾತೀಮಾ, ಜೈನು ಭೀ, ಶೋಭಾ ಮುಂತಾದವರು ಪಾಲ್ಗೊಂಡಿದ್ದರು.



ಸಿಪಿಐ(ಎಂ) ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿ ರಚನೆ

ಜನವರಿ 08 ರಿಂದ 11 ರ ವರೆಗೂ ನಡೆಯುವ ರಾಜ್ಯ ಸಮ್ಮೇಳನಕ್ಕೆ ಭಾರಿ ತಯಾರಿ, ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಸಿ.ಪಿ.ಐ(ಎಂ) ಕಾರ್ಯಕರ್ತರು ಸೇರಿ 07-11-2011 ರಂದು ಸಮಾವೇಶ ಮಾಡ್ಡಿ ಜಿ.ವಿ.ಎಸ್ ರವರ ನೇತೃತ್ವದಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಜಿ.ವಿ.ಶ್ರೀರಾಮರೆಡ್ಡಿ ಪ್ರಧಾನ ಕಾರ್ಯದರ್ಶಿಗಳಾಗಿ ಎಂ.ಪಿ.ಮುನಿ ವೆಂಕಟಪ್ಪ, ಖಜಾಂಚಿಯಾಗಿ ಸಿದ್ದಲಿಂಗಪ್ಪ, ಸಹ ಕಾರ್ಯದರ್ಶಿಗಳಾಗಿ ಕೆ.ಎಂ. ವೆಂಕಟೇಶ್, ಚೆನ್ನರಾಯಪ್ಪ, ನಾರಾಯಣಮ್ಮ, ಶಂಕರರೆಡ್ಡಿ ರವರನ್ನು ಆಯ್ಕೆ ಮಾಡಲಾಯಿತು.

15-11-2011 ರಂದು ಬಾಗೇಪಲ್ಲಿಯ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ 7 ಸ್ಥಳೀಯ ಸಮಿತಿಗಳು ಸಭೆ ನಡೆಸಿ ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಏನೇನು ತಯಾರಿ ಕೈಗೊಳ್ಳಬೇಕೆಂದು ಎಂಬುದರ ಬಗ್ಗೆ ಚರ್ಚಿಸಲಾಯಿತು. ನಂತರ ಇಡೀ ಜಿಲ್ಲೆಯದ್ಯಾಂತ ಸಾಂಸ್ಕೃತಿಕ ಜಾಥಾ ನಡೆಸಲು ತೀರ್ಮಾನಿಸಲಾಯಿತು. ಎರಡು ತಂಡಗಳಾಗಿ ಜಾಥಾಗಳನ್ನು ವಿಂಗಡಿಸಿ ಒಂದು ತಂಡ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ ಇನ್ನೊಂದು ತಂಡ ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿಯಲ್ಲಿ ಸಂಚರಿಸಲು ತೀರ್ಮಾನಿಸಿತು. ಹಾಗೆಯೇ ಸುಮಾರು 2000 ಸಾವಿರ ಕೆಂಪು ಸಮವಸ್ತ್ರಧಾರಿಗಳಿಗೆ ತ್ರರಬೇತಿ ನೀಡಲು ತೀರ್ಮಾನಿಸಲಾಯಿತು.

'ಮುಸ್ಲಿಂ ಸಮುದಾಯದ ಕಡು ಬಡತನ –ಹಿಂದುಳಿದಿರುವಿಕೆ ನಿವಾರಿಸಬೇಕಿದೆ'

ಚಿಕ್ಕಬಳ್ಳಾಪುರ: ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ಸಮಾವೇಶ

ಜಿ. ಮುಸ್ತಾಫ್, ಬಾಗೇಪಲ್ಲಿ

ನವೆಂಬರ್ 10,2011 ರಂದು ಚಿಕ್ಕಬಳ್ಳಾಪುರದ ಕೆ.ಇ.ಬಿ ಸಮುದಾಯ ಭವನದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ಜಿಲ್ಲಾ ಹೋರಾಟ ವತಿಯಿಂದ ಮುಸ್ಲಿಂ ಅಲ್ಪಸಂಖ್ಯಾತರ ಚಿಕ್ಕಬಳ್ಳಾಪುರ ಜಿಲ್ಲಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾವೇಶಕ್ಕೆ ಮುಖ್ಯ ಅಥಿತಿಗಳಾಗಿ ಆಗಮಿಸಿದ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಸದಸ್ಯರು ಹಾಗೂ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟ ಸಮಿತಿಯ ರಾಜ್ಯ ಸಂಚಾಲಕರಾದ ಅಮಾನುಲ್ಲಾ ಖಾನ್ ಮಾತನಾಡುತ್ತ ಭಾರತದಲ್ಲಿ ಮುಸ್ಲಿಂ ಸಮುದಾಯ ಅತ್ಯಂತ ಬಡತನದಲ್ಲಿದೆ. ಹಲವಾರು ವರ್ಷಗಳಿಂದ ಸಿ.ಪಿ.ಐ(ಎಂ) ಪಕ್ಷವು ಮುಸ್ಲಿಂ ಸಮುದಾಯದ ಹಿಂದುಳುವಿಕೆಯನ್ನು ಪ್ರಮುಖ ಅಂಶವಾಗಿ ಪರಿಗಣಿಸಿ ನ್ಯಾಯ ಒದಗಿಸಲು ಒತ್ತಾಯಿಸುತ್ತಿದೆ. ಮುಸ್ಲಿಂ ಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಂತೆಯೆ ಹಿಂದುಳಿದಿದೆ. ಮುಸ್ಲಿಂ ಸಮುದಾಯದ ಹಿಂದುಳಿವಿಕೆಯನ್ನು ಹೋಗಲಾಡಿಸಲು ಸರ್ಕಾರ ದೃಢ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಿ.ಪಿ.ಐ(ಎಂ) ಪಕ್ಷವು ಒತ್ತಾಯಿಸುತ್ತಿದೆ. ನ್ಯಾ.. ರಾಜೇಂದ್ರ ಸಾಚಾರ್ ಸಮಿತಿ ರಚನೆಯಲ್ಲಿ ಸಿ.ಪಿ.ಐ(ಎಂ) ಪಕ್ಷವು ಪ್ರಮುಖ ಪಾತ್ರವನ್ನು ವಹಿಸಿದೆ. ಮುಸ್ಲಿಂ ಸಮುದಾಯದ ಆರ್ಥಿಕ, ಸಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮಗ್ರ ಅಧ್ಯಯನ ವರದಿ ನೀಡಲು ಸಾಚಾರ್ ಸಮಿತಿ ಮಾರ್ಚ್, 05-2005 ರಲ್ಲಿ ಅಸ್ತಿತ್ವಕೆ ಬಂತು. ಈ ಸಮಿತಿಯು ವಿವಿಧ ದೃಷ್ಟಿ-ಮಾನದಂಡಗಳ ಆಧಾರದಲ್ಲಿ ಅಧ್ಯಯನ ನಡೆಸಿ ಅಂತಿಮವಾಗಿ ಮುಸ್ಲಿಂ ಜನತೆ ಸಾಕಷ್ಟು ಹಿಂದುಳಿದಿದ್ದಾರೆ ಎಂಬ ಅಭಿಪ್ರಾಯಕ್ಕೆ ಬಂತು. ಈ ಸಮಿತಿಯು ಈ ಸಮುದಾಯವನ್ನು ಹಿಂದುಳುವಿಕೆಯಿಂದ ಮೇಲೆತ್ತಲು ಕೆಲವು ಶಿಫಾರಸ್ಸುಗಳನ್ನು ಮಾಡಿದೆ. ಆದರೆ ಕೇಂದ್ರದ ಯು.ಪಿ.ಎ. ಸರ್ಕಾರ ಯಾವುದೇ ರೀತಿಯಲ್ಲಿ ಈ ಸಮುದಾಯದ ಸುಧಾರಣೆ ಸಮರ್ಪಕ ವಿಧಾನಗಳನ್ನು ರೂಪಿಸುವಲ್ಲಿ ವಿಫಲವಾಗಿದೆ. ಇದೇ ಸಮಯದಲ್ಲಿ ಯು.ಪಿ.ಎ. ಸರ್ಕಾರವು 2004 ಅಕ್ಟೋಬರ್‌ನಲ್ಲಿ ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗವನ್ನು ನ್ಯಾಯಮೂರ್ತಿ ರಂಗನಾಥಮಿಶ್ರ ಅಧ್ಯಕ್ಷತೆಯಲ್ಲಿ ರಚಿಸಿಡೆ. ಈ ಆಯೋಗವು ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಿಂದುಳುವಿಕೆಗೆ ಕಾರಣಗಳನ್ನು ಗುರ್ತಿಸಿದೆ. ಹಾಗೂ ಹಿಂದುಳುವಿಕೆಯಿಂದ ಹೊರಬರಲು ಹಲವು ಸೂತ್ರಗಳನ್ನು ಸೂಚಿಸಿದೆ. 20 ಮೇ 2007 ರಂದು ಈ ಆಯೋಗ ತನ್ನ ವರದಿಯನ್ನು

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

'ಲೋಕಾಯುಕ್ತ ಸಂಸ್ಥೆಯ ಮೇಲೆ ಧಾಳಿಯ ಖಂಡನೆ'

ನವೆಂಬರ್ 18 ರಂದು ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆ

ಲೋಕಾಯುಕ್ತ ಸಂಸ್ಥೆ ಉನ್ನತ ಅಧಿಕಾರ ಪಡೆದ ರಾಜಕಾರಣಿಗಳು ಮತ್ತು ಅಧಿಕಾರಿಗಳ ಭ್ರಷ್ಟಾಚಾರವನ್ನು ಬಯಲಿಗೆ ಎಳೆಯುವುದರಲ್ಲಿ ಯಶಸ್ವಿಯಾಗಿರುವುದು ಹಾಗೂ ಲೋಕಾಯುಕ್ತ ಕೋರ್ಟ್‌ನಲ್ಲಿ ದಾಖಲಾದ ಖಾಸಗಿ ದೂರುಗಳು ಮಾಜಿ ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳನ್ನು ಜೈಲಿಗಟ್ಟುವುದರಲ್ಲಿ ಯಶಸ್ವಿಯಾಗಿರುವುದು ಅನೇಕ ರಾಜಕಾರಣಿಗಳಲ್ಲಿ ನಡುಕ ಹುಟ್ಟಿಸಿದೆ. ಒಂದು ಕಡೆ ಬಿಜೆಪಿ ಸರ್ಕಾರ ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸುವ ಎಲ್ಲಾ ಪ್ರಯತ್ನಗಳನ್ನು ನಡೆಸಿದೆ. ಮತ್ತೊಂದು ಕಡೆ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಮಾಜಿ ಲೋಕಾಯುಕ್ತರನ್ನು ಗುರಿಯಾಗಿಸಿ ವ್ಯಯಕ್ತಿಕ ಟೀಕೆಗಳನ್ನು ಮಾಡುತ್ತಿದ್ದಾರೆ.

ರಾಜ್ಯದ ಬಿಜೆಪಿ ಸರ್ಕಾರ ಲೋಕಾಯುಕ್ತ ಎಡಿಜಿಪಿ ಗಾಂವ್ಕರ್‌ರನ್ನು ಕೇವಲ ಎರಡೇ ತಿಂಗಳಲ್ಲಿ ಲೋಕಾಯುಕ್ತರೊಡನೆ ಸಮಾಲೋಚಿಸದೆ ವರ್ಗಾವಣೆ ಮಾಡುವುದರ ಮೂಲಕ ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸಿದ್ದಾರೆ. ಹಾಗೆಯೇ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಅನುಕೂಲಕರವಾದ ವ್ಯಕ್ತಿಯನ್ನೇ ಲೋಕಾಯುಕ್ತರನ್ನಾಗಿ ನೇಮಿಸುವ ಉದ್ದೇಶದಿಂದ ಇಲ್ಲಿಯವರೆಗೂ ಲೋಕಾಯುಕ್ತ ಹುದ್ದೆಯನ್ನು ಖಾಲಿ ಇಟ್ಟಿದ್ದಾರೆ. ಹಾಗೂ ಖಾಲಿ ಇರುವುದನ್ನೇ ನೆಪಮಾಡಿಕೊಂಡು ಲೋಕಾಯುಕ್ತ ವರದಿಯನ್ನು ಅಂಗೀಕರಿಸುವುದು ಹಾಗೂ ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿತರಾದ ಮಂತ್ರಿಗಳು, ರಾಜಕಾರಣಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಜೈಲಿಗೆ ಅಟ್ಟುವುದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಎಡಿಜಿಪಿ ಗಾಂವ್ಕರ್‌ರವರನ್ನು ಮರಳಿ ಲೋಕಾಯುಕ್ತಕ್ಕೆ ನೇಮಿಸಬೇಕೆಂದೂ ಹಾಗೂ ಕೂಡಲೇ ಪ್ರಾಮಾಣಿಕ ಹಾಗೂ ದಕ್ಷ ನ್ಯಾಯಾಧೀಶರನ್ನು ಲೋಕಾಯುಕ್ತ ಹುದ್ದೆಗೆ ನೇಮಿಸಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸರ್ಕಾರವನ್ನು ಒತ್ತಾಯಿಸುತ್ತದೆ.

ಮದುಕರ್‌ಶೆಟ್ಟಿಯವರು ನೀಡಿದ ಕೆಲವು ಹೇಳಿಕೆಗಳನ್ನೇ ನೆಪಮಾಡಿಕೊಂಡು ಈಶ್ವರಪ್ಪನವರು ಲೋಕಾಯುಕ್ತ ಸಂಸ್ಥೆಯನ್ನೇ ಕಳ್ಳರ ಸಂತೆ ಮತ್ತು ಈ ಸಂಸ್ಥೆ ಏಕೆ ಬೇಕು ಎಂದು ಕಿಡಿಕಾರಿದ್ದಾರೆ. ಯಡಿಯೂಪ್ಪನವರು ಹಾಗೂ ಕುಮಾರಸ್ವಾಮಿಯವರು ವೈಯಕ್ತಿಕವಾಗಿ ಸಂತೋಷ ಹೆಗ್ಡೆಯವರ ಮೇಲೆ ಧಾಳಿಮಾಡಿದ್ದಾರೆ. ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸುವ ಮತ್ತು ಅದರ ಮೇಲೆ ಧಾಳಿ ನಡೆಸುವ ರಾಜಕಾರಣಿಗಳ ಹಾಗೂ ರಾಜಕೀಯ ಪಕ್ಷಗಳ ಹೇಳಿಕೆಗಳನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸುತ್ತದೆ. ರಾಜ್ಯದಾದ್ಯಂತ ಉನ್ನತ ಹಂತದ ರಾಜಕಾರಣಿಗಳ ಭ್ರಷ್ಟಾಚಾರದಿಂದ ಜನತೆ ಬೇಸತ್ತಿರುವಾಗ ಲೋಕಾಯುಕ್ತ ಸಂಸ್ಥೆಯನ್ನು ಮತ್ತಷ್ಟು ಬಲಗೊಳಿಸಬೇಕಾದ ಅಗತ್ಯವಿದೆ. ಲೋಕಾಯುಕ್ತರ ನಿಯಂತ್ರಣದಲ್ಲಿಯೇ ಇರುವ ದಕ್ಷ, ಪ್ರಾಮಾಣಿಕ ತನಿಖಾ ತಂಡವನ್ನು ರೂಪಿಸಬೇಕಾಗಿದೆ. ಮುಖ್ಯಮಂತ್ರಿಯಾದಿಯಾಗಿ ಎಲ್ಲಾ ಅಧಿಕಾರಸ್ಥ ರಾಜಕಾರಣಿಗಳು ಹಾಗೂ ಎಲ್ಲಾ ಅಧಿಕಾರಿಗಳ ಮೇಲೆ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳುವ, ತನಿಖೆ ನಡೆಸುವ, ಕೋರ್ಟಿಗೆ ಒಯ್ಯುವ ಅಧಿಕಾರವನ್ನು ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

2. ಬಿಜೆಪಿ ಸರ್ಕಾರದಲ್ಲಿ ನಿರಂತರ ಅಸ್ಥಿರತೆ ಹಾಗೂ ಆಡಳಿತದ ನಿರ್ವಾತ ಸ್ಥಿತಿ :–

ಬಳ್ಳಾರಿ ಗ್ರಾಮೀಣ ಉಪ ಚುನಾವಣೆಯಲ್ಲಿ ಶ್ರೀರಾಮುಲು ಪಕ್ಷೇತರರಾಗಿ ಸ್ಪರ್ಧಿಸುತ್ತಿರುವುದು ಹಾಗೂ ಬಿಜೆಪಿ ಸಂಸದರು, ಶಾಸಕರು, ಇತರ ಚುನಾಯಿತ ಪ್ರತಿನಿಧಿಗಳು ಬಿಜೆಪಿಯನ್ನು ಧಿಕ್ಕರಿಸಿ ಶ್ರೀರಾಮುಲು ಬೆಂಬಲಕ್ಕೆ ನಿಂತಿರುವುದು ರಾಜ್ಯ ಸರ್ಕಾರವನ್ನು ಮತ್ತೆ ಅಸ್ಥಿರತೆಗೆ ದೂಡಿದೆ. ಅದೇ ಸಮಯದಲ್ಲಿ ಯಡಿಯೂರಪ್ಪನವರು ಹಾಗೂ ಅವರ ಗುಂಪಿನ ನಿರಂತರ ಗುಟುರು ಹಾಗೂ ಧಮಕಿಗಳು ಬಿಜೆಪಿ ಪಕ್ಷ ಹಾಗೂ ಸರ್ಕಾರವನ್ನು ಅಸಹಾಯಕತೆ ಮತ್ತು ಅಸ್ಥಿರತೆಗೆ ಕಾಣಿಕೆ ನೀಡಿವೆ. ಇಂತಹ ಹಿನ್ನೆಲೆಯಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂಧಿ ಮೇಲೆ ನಿಯಂತ್ರಣವಿಲ್ಲದೆ ಮನಸೋ ಇಚ್ಛೆಯ ವರ್ತನೆ ಹಾಗೂ ಜನತೆಯ ಸಮಸ್ಯೆಯ ನಿರ್ಲಕ್ಷ ಎದ್ದು ಕಾಣುತ್ತಿದೆ. ಬರಗಾಲ, ರೈತರ ಪಸಲುಗಳ ಬೆಲೆ ಕುಸಿತ, ಪಡಿತರ ವ್ಯವಸ್ಥೆ, ವಸತಿ ಯೋಜನೆಗಳು, ನೀರಾವರಿ, ವಿದ್ಯುತ್ ಸಮಸ್ಯೆ ಇವುಗಳ ಅದಕ್ಷ ನಿರ್ವಹಣೆ ಜ್ವಲಂತ ಉದಾಹರಣೆಯಾಗಿದೆ.

5. ಬಳ್ಳಾರಿ ಗ್ರಾಮೀಣ ಉಪ ಚುನಾವಣೆ :–

ಬಿಜೆಪಿ ಪಕ್ಷದಲ್ಲಿರುವ ಭೂ ಮಾಫಿಯ, ಗಣಿ ಮಾಫಿಯಗಳ ಧನದಾಹವೇ ಬಳ್ಳಾರಿಯ ಗ್ರಾಮೀಣ ಉಪಚುನಾವಣೆಗೆ ಕಾರಣವಾಗಿದೆ. ಈ ಚುನಾವಣೆಯಲ್ಲಿ ಅತೀ ಭ್ರಷ್ಟ ಹಗರಣಗಳಿಗೆ ಕಾರಣವಾದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಹಾಗೂ ಭ್ರಷ್ಟತೆಯ ಒಂದು ಶಿಖರವಾದ ಶ್ರೀರಾಮುಲು ನಡುವೆ ಜನತೆಗೆ ಯಾವುದೇ ಆಯ್ಕೆಯೂ ಇಲ್ಲವಾಗಿದೆ. ಸಿಪಿಎಂ ಪಕ್ಷವು ಬಳ್ಳಾರಿ ಗ್ರಾಮೀಣ ಕ್ಷೇತ್ರದಲ್ಲಿ ಭ್ರಷ್ಟಾಚಾರ, ನೈಸರ್ಗಿಕ ಸಂಪತ್ತಿನ ಲೂಟಿ, ಗಣಿಗಳ ರಾಷ್ಟ್ರೀಕರಣ, ಉದ್ಯೋಗ ನಿರ್ಮಾಣ, ಕೃಷಿಯ ಸಮಸ್ಯೆ ಇವುಗಳ ಬಗ್ಗೆ ಪ್ರಚಾರ ನಡೆಸುತ್ತದೆ.

ಬಿಜೆಪಿ – ಶ್ರೀರಾಮುಲು–ಕಾಂಗ್ರೇಸ್ ಈ ಮೂವರನ್ನು ಸೋಲಿಸಲು ಮತ್ತು ಎಲ್ಲರನ್ನು ನಿರಾಕರಿಸುವ ನಿರಾಕರಣೆ ಮತ ನೊಂದಾಯಿಸಲು ಸಿಪಿಐ (ಎಂ) ಪಕ್ಷದ ಕರೆ

ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸ್‌ವಾದಿ)ಯು ಬಳ್ಳಾರಿ ಗ್ರಾಮಾಂತರ ಉಪ ಚುನಾವಣೆಯಲ್ಲಿ ಮತದಾರರು, ಅಭ್ಯರ್ಥಿಗಳೆಲ್ಲರನ್ನು ತಿರಸ್ಕರಿಸಲು ಮತ್ತು ನಿರಾಕರಣೆ ಮತ ನೊಂದಾಯಿಸಲು ಕರೆ ನೀಡಿದೆ ಮತ್ತು ಆ ಮೂಲಕ ಶ್ರೀರಾಮುಲು, ಬಿ.ಜೆ.ಪಿ ಮತ್ತು ಕಾಂಗ್ರೇಸ್ ಪಕ್ಷಗಳನ್ನು ಸೋಲಿಸಲು ಮನವಿ ಮಾಡಿದೆ.

ಲೋಕಾಯುಕ್ತ ವರದಿ, ಬಿಜೆಪಿಯೊಳಗಿನ ಅಧಿಕಾರಕ್ಕಾಗಿನ ಕಿತ್ತಾಟ, ಬೆಲೆ ಏರಿಕೆ ಮತ್ತು ವ್ಯಾಪಕವಾದ ಭ್ರಷ್ಟಚಾರದ ಹಿನ್ನಲೆಯಲ್ಲಿ ಈ ಚುನಾವಣೆಯನ್ನು ಜನತೆಯ ಮೇಲೆ ಹೇರಲಾಗಿದ್ದು, ಪಕ್ಷೇತರ ಅಭ್ಯರ್ಥಿ ಬಿ. ಶ್ರೀರಾಮುಲು ಸೇರಿದಂತೆ ಬಿಜೆಪಿ ಹಾಗು ಕಾಂಗ್ರೇಸ್ ಪಕ್ಷಗಳಿಗೆ ಮತ ಕೇಳಲು ಯಾವುದೇ ನೈತಿಕ ಮುಖ ವಿಲ್ಲವಾಗಿದೆ.

ಬಳ್ಳಾರಿ ಜಿಲ್ಲೆಯ ಕೋಟ್ಯಾಂತರ ಟನ್ ಅದಿರನ್ನ ಲೂಟಿ ಮಾಡಲು ಕೈ ಜೋಡಿಸಿದ್ದ ಹಾಗು ಲೋಕಾಯುಕ್ತರೇ ಹೇಳಿದಂತೆ ರಾಜ್ಯ ಸರ್ಕಾರದ ಬೊಕ್ಕಸಕ್ಕೆ 16,085 ಕೋಟಿ ರೂಪಾಯಿಗಳ ನಷ್ಟ ಉಂಟು ಮಾಡಿದ, ಬಳ್ಳಾರಿ ಜಿಲ್ಲೆಯ ಅರಣ್ಯ ನಾಶ, ಪರಿಸರ ನಾಶ, ರಸ್ತೆಗಳ ನಾಶ, ದೌರ್ಜನ್ಯ, ದಬ್ಬಾಳಿಕೆ ಹರಿಬಿಟ್ಟು ಪ್ರಜಾಸತ್ತೆಯನ್ನ ಹಾಳು ಗೆಡವಿದ ಹಾಗು ಕೆ.ಐ.ಎ.ಡಿ.ಬಿ ಮೂಲಕ 25 ಸಾವಿರಕ್ಕೂ ಅಧಿಕ ಎಕರೆ ಜಮೀನಿಗೆ ಅಕ್ರಮವಾಗಿ ಭೂ ಬೆಲೆ ನಿಗದಿಸಿ ಸಾವಿರರಾರು ಕೋಟಿ ರೂ. ರೈತರಿಗೆ ವಂಚಿಸಿ ಭೂ ಗಳ್ಳನಕ್ಕೆ ಕಂಪನಿ ಮಾಲಿಕರ ಜೊತೆ ಕೈ ಜೋಡಿಸಿದ್ದ ಬಿಜೆಪಿ–ಆರ್‌ಎಸ್‌ಎಸ್‌ಗಳಿಗಾಗಲಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗಾಗಲಿ ಯಾವ ನೈತಿಕತೆ ಇದೆ.

ಓಎಂಸಿ ಕಂಪನಿಯ ಬಳ್ಳಾರಿ ಮೂವರು ನಿರ್ದೇಶಕರು ಮಂತ್ರಿಗಳ ಸ್ಥಾನ ಹೊಂದಿದ್ದರೂ. ಬಳ್ಳಾರಿ ಜನರ ಅಭಿವೃದ್ಧಿಗೆ ಶ್ರಮಿಸದೇ ಬಳ್ಳಾರಿ ಘನತೆಯನ್ನ ರಾಷ್ಟ್ರ ಹಾಗು ಜಾಗತಿ ಮಟ್ಟದಲ್ಲಿ ಕುಂದುಂಟು ಮಾಡಿದ ರೆಡ್ಡಿ ಬಳಗ ಅಭ್ಯರ್ಥಿ ಶ್ರೀರಾಮುಲುಗೂ ನೈತಿಕತೆ ಇಲ್ಲ. ಮೂವರು ಮಂತ್ರಿಗಳು ಇದ್ದು ಬಳ್ಳಾರಿ

ಪುಟ 14ಕ್ಕೆ

ವಿಶೇಷ ವಾರ್ತೆಗಳು

'ಗಣಿಗಾರಿಕೆ ಕುರಿತ ಲೋಕಾಯುಕ್ತ ವರದಿ ಅರಬ್ಬಿ ಸಮುದ್ರಕ್ಕೆ ಅರ್ಪಣೆ' ಮುಖ್ಯಮಂತ್ರಿ ಸದಾನಂದ ಗೌಡ ಘೋಷಣೆ

ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿದೆ ಎನ್ನಲಾಗಿದ್ದ ಅಕ್ರಮ ಗಣಿಗಾರಿಕೆಯ ಕುರಿತು ಲೋಕಾಯುಕ್ತ ನ್ಯಾ. ಸಂತೋಷ ಹೆಗಡೆಯವರ ನೇತೃತ್ವದ ಲೋಕಾಯತ ಸಂಸ್ಥೆ ನೀಡಿದ ತನಿಖಾ ವರದಿಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ಕರ್ನಾಟಕದ ಸುಂದರ ಕಡಲ ತೀರದ ಅರಬ್ಬಿ ಸಮುದ್ರಕ್ಕೆ ಅರ್ಪಿಸಲಾಗುವುದು ಎಂದು ಕರ್ನಾಟಕದ ಖ್ಯಾತ ಮುಖ್ಯಮಂತ್ರಿ ಸನ್ಮಾನ್ಯ ಸದಾನಂದ ಗೌಡರವರು ತಿಳಿಸಿದ್ದಾರೆ. ಕರ್ನಾಟಕ ಕಂಡ ಅಪರೂಪದ ಮುಖ್ಯಮಂತ್ರಿ ಡಾ। ಯಡಿಯೂರಪ್ಪನವರನ್ನು, ಇಲ್ಲಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದ ಖೈದಿಗಳ ಕೋಣೆಯ ಒಳಗೆ ಕಂಡು ಚರ್ಚಿಸಿ ಕರ್ನಾಟಕ ರಾಜ್ಯದ ಆಡಳಿತದ ಬಗೆಗೆ ಮಹತ್ವದ ಮಾರ್ಗದರ್ಶನ ಪಡೆದುಕೊಂಡ ಬಂದ ನಂತರ ಕಾರಾಗೃಹದ ಪ್ರವೇಶ ದ್ವಾರದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತ ಈ ವಿಷಯವನ್ನು ತಿಳಿಸಿದರು.

ಯಡಿಯೂರಪ್ಪನವರು ಹಿರಿಯರು. ಹಿರಿಯರ ಆಶೀರ್ವಾದವನ್ನು ಪಡೆಯುವುದು ನನಗೆ ಸಂಘ ಪರಿವಾರದಿಂದ ಬಂದ ಸಂಸ್ಕಾರ ಎಂದು ತಿಳಿಸಿದ ಅವರು, ಯಡಿಯೂರಪ್ಪನವರೊಂದಿಗೆ ತಾವು ರಾಜಕೀಯದ ವಿಚಾರವಾಗಲೀ, ಗಣಿಗಾರಿಕೆ ಕುರಿತ ವರದಿಯ ಬಗೆಗಾಗಲೀ ಏನನ್ನೂ ಚರ್ಚಿಸಿಲ್ಲ ಎಂದೂ ಸ್ಪಷ್ಟಪಡಿಸಿದರು.

ಕರ್ನಾಟಕದ ಜನತೆ ಶಾಂತಿಪ್ರಿಯ ಜನತೆ. ಅವರು ಯಾವುದೇ ಅಶಾಂತಿ ಗದ್ದಲವನ್ನು ಇಷ್ಟಪಡುವುದಿಲ್ಲ. ಗಣಿಗಾರಿಕೆ ಕುರಿತ ವರದಿಯನ್ನು ಅಂಗೀಕರಿಸಿದರೆ ರಾಜ್ಯದಲ್ಲಿ ಅನಗತ್ಯ ಗೊಂದಲ, ಗದ್ದಲ ಸಂಭವಿಸಿ ರಾಜ್ಯದ ಶಾಂತಿ ಕದಡಲಿದೆ. ರಾಜ್ಯದ ಜನರ ನೆಮ್ಮದಿಗೆ ಭಂಗ ತರುವ ವರದಿ ರಾಜ್ಯ ಜನರಿಗೆ ಬೇಡ ಎಂಬುದೇ ತಮ್ಮ ಸರ್ಕಾರದ ನಿರ್ಧಾರವಾಗಿದ್ದು ಇದರ ಹಿಂದೆ ಬೇರೆ ಯಾವುದೇ ದುರುದ್ದೇಶವಿಲ್ಲ ಎಂದೂ ಸದಾನಂದಗೌಡರು ತಿಳಿಸಿದರು. ಸರ್ಕಾರದ ಈ ತೀರ್ಮಾನಕ್ಕೆ ಆರೆಸ್ಸೆಸ್ ಸೇರಿದಂತೆ ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ಎಬಿವಿಪಿ, ಶ್ರೀರಾಮ ಸೇನೆ ಮುಂತಾದ ಎಲ್ಲ ದೇಶಭಕ್ತ ಸಂಘಟನೆಗಳ ಸಹಮತವಿದೆ. ಯಾರದೂ ವಿರೋಧವಿಲ್ಲ ಎಂದೂ ಸದಾನಂದಗೌಡರು ಪ್ರಕಟಿಸಿದರು.

ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿಗಾಗಿ ಆಗ್ರಹಿಸಿ ಪ್ರತಿಭಟನೆ

ಕಡಲತಡಿ

ವರದಿ: ವಾ.ಉ.

ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ ಕೂಡಲೇ ಪ್ರಕಟಿಸಬೇಕೆಂದು ಆಗ್ರಹಿಸಿ ಸಿಐಟಿಯು ಸಂಯೋಜಿತ ಬೀಡಿ ಕಾರ್ಮಿಕರ ಸಂಘಟನೆಗಳು ನವಂಬರ್ 15 ರಂದು ಕರಾವಳಿಯಾದ್ಯಂತ ಅಲ್ಲಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದವು.

ಮಂಗಳೂರು: ಮಂಗಳೂರಿನ ಸಹಾಯಕ



ಕಾರ್ಮಿಕ ಕಚೇರಿ ಎದುರು ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ವತಿಯಿಂದ ಬೃಹತ್ ಪ್ರತಿಭಟನೆಯನ್ನು ಬೀಡಿ ಕಾರ್ಮಿಕರು ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಅಖಿಲ ಭಾರತ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷ ಬಿ.ಮಾಧವ, ಕರ್ನಾಟಕ ಸರ್ಕಾರ ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ ನಿಗದಿ ಪಡಿಸಿ ಐದು ವರ್ಷಗಳೇ ಕಳೆದಿವೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವುದರಿಂದ ಇಂದಿನ ಪರಿಸ್ಥಿತಿಯಲ್ಲಿ ಈಗ ಸಿಗುತ್ತಿರುವ ಅಲ್ಪ ಕೂಲಿಯಲ್ಲಿ ಬೀಡಿ ಕಾರ್ಮಿಕರು ಜೀವನ



ಸಾಗಿಸುವುದು ಕಷ್ಟಕರವಾಗಿದೆ. ಕನಿಷ್ಟ ದರ ಕೂಡಲೇ ಪರಿಷ್ಕರಿಸಬೇಕು ಎಂದು ಒತ್ತಾಯಿಸಿದರು.

ಕಾರ್ಮಿಕ ಇಲಾಖೆ ಕಾರ್ಮಿಕರ ಹಿತ ಕಾಪಾಡಬೇಕೆ ಹೊರತು ಮಾಲಿಕರದ್ದಲ್ಲ. ರಾಜ್ಯದ ಕಾರ್ಮಿಕ ಮಂತ್ರಿ, ಮಾಲಿಕರ ಮೇಲಿನ ಸಹಾನುಭೂತಿಯಿಂದಾಗಿ ಕಾರ್ಮಿಕರ ಕನಿಷ್ಟ ಕೂಲಿಯ ಕರಡು ಪ್ರಕಟಣೆ ಬಂದು 20 ತಿಂಗಳು ಕಳೆದರೂ ಅಂತಿಮ ಪ್ರಕಟಣೆ ಮಾಡಲು ವಿಳಂಬ ಮಾಡುತ್ತಿದ್ದಾರೆ. ಆ ಮೂಲಕ ರಾಜ್ಯದ 8 ಲಕ್ಷ ಬೀಡಿ ಕಾರ್ಮಿಕರ ಬದುಕಿನ ಮೇಲೆ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿದರು.

ಇತರ ರಾಜ್ಯಗಳಲ್ಲಿ ಬೀಡಿ ಕಾರ್ಮಿಕರಿಗೆ ಪ್ರತಿ ಸಾವಿರ ಬೀಡಿಗೆ ರೂ.100 ಕ್ಕೂ ಹೆಚ್ಚು ಕೂಲಿ ಸಿಗುತ್ತಿದೆ. ಕರ್ನಾಟಕದಲ್ಲಿ ಮಾತ್ರ ರೂ.90ರ ಗಡಿಯನ್ನು ದಾಟಿಲ್ಲ. ಅಲ್ಲದೆ ಇಲ್ಲಿನ ಬೀಡಿ ಸಂಸ್ಥೆಗಳ ಶೇ.40 ರಷ್ಟು ಮಾಲಿಕರು ಕಾರ್ಮಿಕರಿಗೆ ಲಾಗ್‌ಬುಕ್, ಭವಿಷ್ಯ ನಿಧಿ ಮತ್ತು ತುಟ್ಟಿಭತ್ತೆ ಕೊಡದೆ ವಂಚಿಸುತ್ತಿದ್ದಾರೆ. ಹೀಗಾಗಿ ಇಲ್ಲಿ ಹಣದ ಕೊರತೆ ಕಂಡು ಬರುತ್ತಿದ್ದು ಬೀಡಿ ಕಾರ್ಮಿಕರ ಮಕ್ಕಳಿಗೆ ಬರುವ ಸ್ಕಾಲರ್‌ಶಿಪ್ ಕೂಡಾ ವಿಳಂಬವಾಗುತ್ತಿದೆ. ಸರ್ಕಾರ ಈ ಕೂಡಲೇ ಗ್ರಾಹಕರ ಸೂಚ್ಯಂಕ ಪ್ರಕಾರ ಏರಿಕೆಯಾದ ತುಟ್ಟಿಭತ್ತೆ ರೂ.30.24 ಮತ್ತು ಮೂಲ ಕೂಲಿ ರೂ.103 ಸೇರಿಸಿ ಸಾವಿರ ಬೀಡಿಗೆ ರೂ.133.24 ಮಜೂರಿ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಗೂ ಮೊದಲು ಕಂಕನಾಡಿ ಮೈದಾನದಿಂದ ಸಹಾಯಕ ಆಯುಕ್ತರ ಕಚೇರಿ ಇರುವ ಬೆಂದೂರ್‌ವೆಲ್ ವರೆಗೂ ಕಾರ್ಮಿಕರು ಮೆರವಣಿಗೆ ನಡೆಸಿದರು. ದ.ಕ.ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ ಸುಕುಮಾರ್, ಬೀಡಿ ಕಾರ್ಮಿಕ ಸಂಘಗಳ ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತಿ ಶೆಟ್ಟಿ, ಬಾಬು ದೇವಾಡಿಗ, ಜಯಂತ ನಾಯ್ಕ್, ಭಾರತಿ ಬೋಳಾರ, ಸುನಿಲ್ ಕುಮಾರ್ ಬಜಾಲ್ ಮುಂತಾದವರು ಉಪಸ್ಥಿತರಿದ್ದರು.

ಉಡುಪಿ:

ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಒಕ್ಕೂಟ (ಸಿಐಟಿಯು) ವತಿಯಿಂದ ಬೀಡಿ ಕಾರ್ಮಿಕರು ಉಡುಪಿ ಜಿಲ್ಲಾ ಕಾರ್ಮಿಕ ಅಧಿಕಾರಿಯ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ಬಳಿಕ ಜಿಲ್ಲಾ ಕಾರ್ಮಿಕ ಅಧಿಕಾರಿಯವರ ಮೂಲಕ ಸರಕಾರಕ್ಕೆ ಕನಿಷ್ಟ ಕೂಲಿ ಪ್ರಕಟಣೆ ನೀಡುವಂತೆ ಕೋರುವ ಮನವಿ ಸಲ್ಲಿಸಲಾಯಿತು. ಒಕ್ಕೂಟದ ಅಧ್ಯಕ್ಷ ಮಹಾಬಲ ವಡೇರಹೋಬಳಿ, ಪ್ರಧಾನ ಕಾರ್ಯದರ್ಶಿ ರಮೇಶ್ ಮೆಂಡನ್, ಬೀಡಿ ಕಾರ್ಮಿಕ ಸಂಘಟನೆಗಳ ಮುಖಂಡರಾದ ವಿಠಲ ಪೂಜಾರಿ, ಪುಷ್ಪ ಮಲ್ಲಾರ್, ಗೌರಿ ದೇವಾಡಿಗ, ದೋಗು ಸುವರ್ಣ, ಗಿರಿಜಾ, ವನಜ ಪೂಜಾರಿ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.





ಬೆಳ್ತಂಗಡಿ:

ಬೆಳ್ತಂಗಡಿ ತಾಲೂಕು ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಸಂಘದ ಅಧ್ಯಕ್ಷ ಬಿ.ಎಂ.ಭಟ್ ಮಾತನಾಡಿದರು. ಕಾರ್ಮಿಕ ಮುಖಂಡರಾದ ಎಸ್.ಎಂ.ಶಿವ ಕುಮಾರ್,



ಜಯರಾಮ್ ಮಯ್ಯ, ನೆಬಿಸಾ, ಜಯರಾಂ, ಸುಂದರಿ, ಶೇಖರ್ ಎಲ್, ವಸಂತ ನಡ, ರೋಹಿಣಿ, ಕವಿತಾ ಮೊದಲಾದವರು ಉಪಸ್ಥಿತರಿದ್ದರು.

ಮೂಡಬಿದ್ರೆ:

ಮೂಡಬಿದರೆ ತಾಲೂಕು ಕಚೇರಿ ಎದುರು ಮೂಡಬಿದರೆ ಪ್ರದೇಶ ಬೀಡಿ ಕಾರ್ಮಿಕ ಸಂಘದ



ವತಿಯಿಂದ ನಡೆದ ಪ್ರತಿಭಟನೆಯಲ್ಲಿ ದ.ಕ.ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್‌ನ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಉಪಾಧ್ಯಕ್ಷೆ ರಮಣಿ, ರಾಧಾ, ಪ್ರಾಂತ ರೈತ ಸಂಘದ ಮುಖಂಡರಾದ ಯಾದವ ಶೆಟ್ಟಿ ಮೊದಲಾದವರು ಭಾಗವಹಿಸಿದ್ದರು.

ಗುರುಪುರ:

ಗುರುಪುರ ಕೈಕಂಭದ ನಾಡ ಕಚೇರಿ ಎದುರು ಬೀಡಿ ಕಾರ್ಮಿಕರು ಗುರುಪುರ ವಲಯ ಬೀಡಿ ಕಾರ್ಮಿಕ ಸಂಘದ ವತಿಯಿಂದ ಪ್ರತಿಭಟನೆ ನಡೆಸಿದರು. ದ.ಕ.ಜಿಲ್ಲಾ ಬೀಡಿ ಫೆಡರೇಶನ್ ಉಪಾಧ್ಯಕ್ಷ ಯು.ಬಿ.ಲೋಕಯ್ಯ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಮುಖಂಡರಾದ ಗಂಗಯ್ಯ ಅಮೀನ್, ವಾರಿಜ, ಗೋಪಾಲ ಮಳಲಿ, ನೋಣಯ್ಯ ಗೌಡ ಮತ್ತಿತರರು ಭಾಗವಹಿಸಿದ್ದರು.

ಪುಟ 14ಕ್ಕೆ

ಬೀಡಿಕಾರ್ಮಿಕರ ಸಮಸ್ಯೆಗಳ ಇತ್ಯರ್ಥ ಸರ್ಕಾರದ ನಿರ್ಲಕ್ಷ್ಯ -ಸಿಐಟಿಯು ಖಂಡನೆ

ಜಿಲ್ಲೆಯಲ್ಲಿರುವ ಸುಮಾರು 1 ಲಕ್ಷ ಬೀಡಿ ಕಾರ್ಮಿಕರ ಸಮಸ್ಯೆಗಳ ಇತ್ಯರ್ಥಪಡಿಸಿ ಕಾನೂನು ಬದ್ಧ ಸೌಲಭ್ಯ ಜಾರಿಗೊಳಿಸಲು ಜಿಲ್ಲಾಡಳಿತ ಕಾರ್ಮಿಕ ಇಲಾಖೆ, ಸರ್ಕಾರ ದಿವ್ಯ ನಿರ್ಲಕ್ಷ್ಯ ವಹಿಸಿದೆ ಎಂದು ಹಿರಿಯ ಕಾರ್ಮಿಕ ಮುಖಂಡ ಮಹಮದ್ ದಸ್ತಗೀರ್ ಆರೋಪಿಸಿದರು.

ಅವರು ದಿನಾಂಕ 29-10-2011 ರಂದು ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘ (ರಿ) ಸಿಐಟಿಯು ಕಛೇರಿಯಲ್ಲಿ ನಡೆದ ಜಿಲ್ಲಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜಿಲ್ಲೆಯಲ್ಲಿ ನೂರಾರು ಬೀಡಿ ಉತ್ಪಾದನೆಯಲ್ಲಿ ತೊಡಗಿರುವ ಉದ್ದಿಮೆಗಳಿವೆ ನಿತ್ಯ ಕಾರ್ಮಿಕ ಕಾನೂನುಗಳ ಉಲ್ಲಂಘನೆ ಬಹಿರಂಗವಾಗಿ ಸಾಗಿವೆ. ಕನಿಷ್ಠ ವೇತನ ಕಾಯ್ದೆ ಬೀಡಿ & ಸಿಗಾರ್ ಕಾರ್ಮಿಕ ಸೇವಾ ಷರತ್ತು ಕಾಯಿದೆ ಶೇ.80ರಷ್ಟು ಕೈಗಾರಿಕೆಗಳು ಉಲ್ಲಂಘಿಸುತ್ತಿವೆ. ಆಧಾಯ-ಕಾರ್ಮಿಕ ಇಲಾಖೆ, ಜಾಣ ಕುರುಡನಂತೆ ವರ್ತಿಸುತ್ತಿದ್ದೆ ಕೆಲವೆಡೆ ಮಾಲೀಕರ ವಂಚನೆಗಳಲ್ಲಿ ಭಾಗಿಯಾಗಿದೆ ಎಂದು ಅವರು ಆರೋಪಿಸಿದರು.

ಸಭೆಯಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಅವರು ನಿರಂತರವಾಗಿ ಸರ್ಕಾರ ಜಿಲ್ಲಾಢಳಿತ ಗಮನಕ್ಕೂ ತಂದರು ಬೀಡಿಕಾರ್ಮಿಕರ ಸಮಸ್ಯೆಗಳು ಇತ್ಯರ್ಥ ಸಂಬಂದ ಒಂದು ಸಭೆಯು ನಡೆಸದೆ ಇರುವುದನ್ನು ಖಂಡಿಸಿದರು. ತಕ್ಷಣ ಜಿಲ್ಲಾಧಿಕಾರಿಗಳು ಕಾರ್ಮಿಕರ ಇಲಾಖೆ ಬೀಡಿ ಮಾಲೀಕರು ಹಾಗೂ ಬೀಡಿ ಕಾರ್ಮಿಕ ಸಂಘಗಳ ತ್ರಿಪಕ್ಷಿಯ ಸಭೆ ನಡೆಸುವಂತೆ ಒತ್ತಾಯಿಸಿದರು.

ಸಭೆಯಲ್ಲಿ ಸಂಘದ ಖಜಾಂಚಿ ಶಹತಾಜ್, ಕುಣಿಗಲ್‌ನ ಅಬ್ದುಲ್ ಮುನಾಪ್, ತಿಪಟೂರು ನೂರ್‌ಜಾನ್, ಮಧುಗಿರಿಯ ಶಕುಂತಲ ಮೊದಲಾದವರು ಮಾತನಾಡಿದರು.

ಸರ್ಕಾರ / ಜಿಲ್ಲಾಡಳಿತ ಸಮಸ್ಯೆಗಳಿಗೆ ಸ್ಪಂದಿಸದೆ ಇದ್ದಲ್ಲಿ ನವೆಂಬರ್ ತಿಂಗಳಲ್ಲಿ ಬೀಡಿ ಕಾರ್ಮಿಕರು ಹೋರಾಟಕ್ಕೆ ಇಳಿಯುವುದಾಗಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಭಾರತದಲ್ಲಿ ಹಣದುಬ್ಬರ ಪರಿಸ್ಥಿತಿ ಕ್ರಮೇಣವಾಗಿ ಉತ್ತಮಗೊಳ್ಳುತ್ತಿದೆ' ಎಂದು ಹೇಳಲು ಹೆಣಗಿರುವ ಹಣಕಾಸು ಮಂತ್ರಿಗಳ . ಹೇಳಿಕೆ 'ಇತ್ತೀಚಿನ ವರ್ಷಗಳಲ್ಲಿ ನಿರಂತರ ಉನ್ನತ ಆರ್ಥಿಕ ಬೆಳವಣಿಗೆಯಿಂದಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಕೊಳ್ಳುವ ಶಕ್ತಿ ಉತ್ತಮಗೊಳ್ಳುವಂತಾಗಿದೆ' ಎಂದಿದೆ. ಇದೇ ಹಣದುಬ್ಬರಕ್ಕೆ ಕಾರಣವಂತೆ ! ಇಂತಹ ಹೇಳಿಕೆಯ ಆಧಾರದಲ್ಲಿ ಸಂಸತ್ತು ಬೆಲೆಯೇರಿಕೆಯನ್ನು ಚರ್ಚಿಸಬೇಕಂತೆ! ಖಂಡಿತವಾಗಿಯೂ, ಒಂದೋ, ಈ ಸರಕಾರ ಕುರುಡಾಗಿದೆ, ಇಲ್ಲವೇ, ಈ ಬೆಲೆಯೇರಿಕೆಯ ಮೂಲಕ ಜನಗಳ ಮೇಲೆ ಹೇರಿರುವ ಹೊರೆಗಳನ್ನು ಸಮರ್ಥಿಸಿಕೊಳ್ಳಲು ಬೇಕೆಂದೇ ದೇಶವನ್ನು ತಪ್ಪುದಾರಿಗೆಳೆಯುತ್ತಿದೆ.

ಜನತೆಯ ಸಂಕಟಗಳಿಗೆ ಕುರುಡಾದ ಸರಕಾರ

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ನವೆಂಬರ್ 24, 2011 ರ ಸಂಪಾದಕೀಯ

ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗುತ್ತಿದ್ದಂತೆಯೇ ಎಲ್ಲ ಜೀವನಾವಶ್ಯಕ ಸರಕುಗಳ ಅವ್ಯಾಹತ ಬೆಲೆಯೇರಿಕೆಯ ಪ್ರಶ್ನೆ ಅದನ್ನು ನಡುಗಿಸಿದೆ. ಇದು ಸಹಜವೇ. ಆಹಾರ ಬೆಲೆಯುಬ್ಬರ ದರ ಈಗ 12ಶೇ. ದಾಟಿದೆ. ತರಕಾರಿಗಳ ಬೆಲೆಗಳು 26ಶೇ. ಏರಿವೆ, ಬೇಳೆಕಾಳುಗಳದ್ದು 14ಶೇ, ಹಣ್ಣುಹಂಪಲುಗಳದ್ದು 12ಶೇ., ಮೀನು–ಮಾಂಸಗಳದ್ದು 13ಶೇ ಮತ್ತು ಹಾಲಿನ ಬೆಲೆ 12ಶೇ.ದಷ್ಟು ಏರಿದೆ.

ಸಂಸತ್ತಿನ ಕಳೆದೆರಡು ಅಧಿವೇಶನಗಳಲ್ಲಿಯೂ ಇದೇ ಪ್ರಶ್ನೆ ಪ್ರಮುಖವಾಗಿ ಬಂದಿತ್ತು. ಇದು 'ಆಮ್ ಆದ್ಮಿ'ಯ ಸಂಕಟ ಮತ್ತು ಆತಂಕಗಳ ಪ್ರತಿಫಲನ. ಇವುಗಳಲ್ಲಿ ಮೊದಲ ಅಧಿವೇಶನದಲ್ಲಿ ಸಂಸತ್ತಿನ ಕಲಾಪಗಳಿಗೆ ಅಡ್ಡಿಯಾಗಬಾರದೆಂದು ಎಡಪಕ್ಷಗಳು ಒಂದು ಒಪ್ಪಿತ ಠರಾವನ್ನು ಎರಡೂ ಸದನಗಳಲ್ಲಿ ಸಭಾಧ್ಯಕ್ಷರು ಮಂಡಿಸುವುದಕ್ಕೆ ಒಪ್ಪಿದವು. ಈ ಠರಾವಿನ ಮೇಲೆ ಚರ್ಚೆಯಾಯಿತು. ಅದನ್ನು ಅಂಗೀಕರಿಸುತ್ತ ಜನಸಾಮಾನ್ಯರನ್ನು ಹಣದುಬ್ಬರದ ನಕಾರಾತ್ಮಕ ಪರಿಣಾಮಗಳಿಂದ ರಕ್ಷಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸರಕಾರಕ್ಕೆ ಕರೆ ನೀಡಲಾಯಿತು.

ಆದಾಗ್ಯೂ, ಜನಸಾಮಾನ್ಯರಿಗೆ ಏನೇನೂ ಪರಿಹಾರ ಸಿಕ್ಕಿಲ್ಲ, ಬದಲಾಗಿ , ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ಕಳೆದ ಮಳೆಗಾಲದ ಅಧಿವೇಶನದಲ್ಲಿ ಮತ್ತೆ ಸಹಜವಾಗಿಯೇ ಸಂಸತ್ತಿನ ಕಲಾಪಗಳಲ್ಲಿ ಈ ಪ್ರಶ್ನೆ ಪ್ರಮುಖವಾಗಿ ಕಾಣಿಸಿಕೊಂಡಿತು. ಸರಕಾರ ಮತ್ತು ಪ್ರಧಾನ ಪ್ರತಿಪಕ್ಷ ಒಂದು ಒಪ್ಪಂದಕ್ಕೆ ಬಂದು ಬಿಜೆಪಿ ಎರಡೂ ಸದನಗಳಲ್ಲಿ ಒಂದು ಕರಡು ನಿರ್ಣಯವನ್ನು ಮಂಡಿಸಿತು. ಇದರಲ್ಲಿ ಹಣದುಬ್ಬರವನ್ನು ತಡೆಹಿಡಿಯಲು ಸರಕಾರ ಕೈಗೊಳ್ಳುವ ಯಾವುದೇ ಪರಿಣಾಮಕಾರಿ ಕ್ರಮದ ಬಗ್ಗೆ ಇಲ್ಲವೆಂಬ ಕಾರಣಕ್ಕೆ ಸಿಪಿಐ(ಎಂ) ಇದನ್ನು ವಿರೋಧಿಸಿತು. ಸಿಪಿಐ(ಎಂ) ಸದಸ್ಯರು ಎರಡೂ ಸದನಗಳಲ್ಲಿ ಈ ಬಗ್ಗೆ ನಿರ್ದಿಷ್ಟ ತಿದ್ದುಪಡಿಗಳನ್ನು ಮಂಡಿಸಿ ಮತದಾನ ನಡೆಯಬೇಕೆಂದು ಒತ್ತಾಯಿಸಿದರು.

ಸರ್ಕಾರದ್ದು ಇಂತಹ ನಿರ್ಲಕ್ಷ್ಯದ ನಿಲುವು, ಜನಸಾಮಾನ್ಯರ ಬದುಕನ್ನು ಕಿತ್ತು ತಿನ್ನುತ್ತಿರುವ ಬೆಲೆಯೇರಿಕೆಯ ಪ್ರಶ್ನೆಯ ಮೇಲೆ ಒಣ ಚರ್ಚೆಗಳಷ್ಟೇ.

ಮತ್ತದೇ ಒಣಚರ್ಚೆಯ ಮಾತು .

ಈ ಚಳಿಗಾಲದ ಅಧಿವೇಶನದಲ್ಲೂ ಇದೇ ರೀತಿ ಸರಕಾರ ಬೆಲೆಯೇರಿಕೆಯ ಮೇಲೆ ಮತ್ತೊಂದು ಚರ್ಚೆ ನಡೆಸುವ ಪ್ರಸ್ತಾಪ ಮಾಡಿತು. ಹಣಕಾಸು ಮಂತ್ರಿಗಳು ಎರಡೂ ಸದನಗಳಲ್ಲಿ ಮಂಡಿಸಿದ ಹನ್ನೊಂದು ಪುಟಗಳ ಹೇಳಿಕೆಯ ಆಧಾರದಲ್ಲಿ ಇದು ನಡೆಯಬೇಕಿತ್ತಂತೆ. ಇದು ಆಕಾಶಕ್ಕೇರುತ್ತಿರುವ ಹಣದುಬ್ಬರವನ್ನು ಎದುರಿಸಲು ವಾಸ್ತವಿಕ .ಕ್ರಮಗಳನ್ನು ಪ್ರಕಟಿಸುವಂತೆ ಸರಕಾರದ ಮೇಲೆ ಯಾವುದೇ ಒತ್ತಡ ಹಾಕುವುದಿಲ್ಲ ಎಂದು ಎಡ ಪಕ್ಷಗಳು ಈ ಪ್ರಯತ್ನವನ್ನು ವಿರೋಧಿಸಿದವು. ಆದ್ದರಿಂದ ಸಿಪಿಐ(ಎಂ) ಸಂಸದೀಯ ಕಲಾಪಗಳ ನಿಯಮಗಳಲ್ಲಿ ಕೊನೆಗೆ ಮತದಾನದ ಅಗತ್ಯವಿರುವ ಒಂದು ಚರ್ಚೆ ನಡೆಯಬೇಕೆಂದು ನಿಲುವಳಿ ಸೂಚಿಸಿತು. ಮತದಾನದ ಒತ್ತಡದಿಂದಲಾದರೂ, ಮೊಂಡು ಸರಕಾರ ಹಣದುಬ್ಬರವನ್ನು ಎದುರಿಸಿ ಜನಸಾಮಾನ್ಯರಿಗೆ ಪರಿಹಾರ ಒದಗಿಸುವ ಮೂರ್ತ ಕ್ರಮಗಳನ್ನು ಪ್ರಕಟಿಸಬಹುದು ಎಂಬ ನಿರೀಕ್ಷೆ ಇದರ ಹಿಂದಿತ್ತು. ಹೀಗೆ ಬಹುಪಾಲು ಭಾರತೀಯ ಜನಸಮೂಹಗಳ ನೋವು–ಸಂಕಟಗಳಿಗೆ ದನಿ ನೀಡಲು ಮತ್ತು ಸರಕಾರ ವಾಸ್ತವಿಕ ಕ್ರಮಗಳನ್ನು ಕೈಗೊಳ್ಳುವಂತೆ ಬಲವಂತ ಮಾಡಲು ಸಿಪಿಐ(ಎಂ) ಇಂತಹ ನಿಯಮಗಳ ಅಡಿಯಲ್ಲಿ ಚರ್ಚೆ ನಡೆಯಬೇಕೆಂದು ಒತ್ತಾಯಿಸಿದೆ. ಇದು ಒಂದು ದಿನ ಸಂಸತ್ತಿನ ಕಲಾಪಗಳನ್ನು ಅಸ್ತವ್ಯಸ್ತ ಗೊಳಿಸಿತು. ಸರಕಾರದ ಮೊಂಡುತನದಿಂದಾಗಿ ಬೇರಾವ ದಾರಿಯೂ ಉಳಿದಿರಲಿಲ್ಲ.

ಸಂಸತ್ತು ಸುಲಲಿತವಾಗಿ, ಇನ್ನೂ ಹೆಚ್ಚು ಕಾಲ ಕೆಲಸ ಮಾಡಬೇಕೆಂದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಸತತವಾಗಿ ಪ್ರತಿಪಾದಿಸುತ್ತಾ ಬಂದಿವೆ. ನಿಜಸಂಗತಿಯೆಂದರೆ, ಒಂದು ವರ್ಷದಲ್ಲಿ ಕನಿಷ್ಟ ನೂರು ದಿನಗಳಾದರೂ ಸಂಸತ್ತು ಕೂತು ಚರ್ಚಿಸುವುದನ್ನು ಕಡ್ಡಾಯಗೊಳಿಸುವ ಸಂವಿಧಾನ ತಿದ್ದುಪಡಿ ತರಬೇಕೆಂದು ಸಿಪಿಐ(ಎಂ) ಸದನದಲ್ಲಿ ಸೂಚಿಸಿತ್ತು. ಜನತೆಯ ಸಾರ್ವಭೌಮತೆ ಅವರ ಚುನಾಯಿತ ಪ್ರತಿನಿಧಿಗಳನ್ನು ಅವರಿಗೆ ಜವಾಬುದಾರರನ್ನಾಗಿ ಮಾಡುವ ನಮ್ಮ ಸಂವಿಧಾನಿಕ ಚೌಕಟ್ಟಿನ ಮತ್ತು ಅದರ ಆಶಯದ ಜಾರಿಗೆ ಇದು ಅಗತ್ಯ ಎಂಬುದು ನಮ್ಮ ಅಭಿಪ್ರಾಯ. ಹೀಗಾಗಬೇಕಾದರೆ, ಅಂದಿನ ಸರಕಾರ ಸಂಸತ್ತಿಗೆ ಜವಾಬುದಾರನಾಗಿರಬೇಕಾಗುತ್ತದೆ. ಇದು ಸಂಸತ್ತು ಸರಿಯಾಗಿ, ಸಾಕಷ್ಟು ಕಾಲಾವಧಿಯ ವರೆಗೆ ಕೆಲಸ ಮಾಡುವಂತಾದರೆ ಮಾತ್ರ ಸಾಧ್ಯ.

ಹೀಗಿದ್ದರೂ, ಸಿಪಿಐ(ಎಂ) ಈ ಚಳಿಗಾಲದ ಅಧಿವೇಶನದಲ್ಲಿ, 'ಆಮ್ ಆದ್ಮಿ'ಯ ಆತಂಕಗಳನ್ನು ಬಿಂಬಿಸಲಿಕ್ಕಾಗಿಯೂ, ಮತ್ತು ಈ ಬೆಲೆಯೇರಿಕೆಯಿಂದಾಗಿ ಸತತವಾಗಿ ಹೆಚ್ಚುತ್ತಿರುವ ಅವರ ಸಂಕಟಗಳಲ್ಲಿ ಪಾಲ್ಗೊಂಡು ಸೌಹಾರ್ದ ವ್ಯಕ್ತಪಡಿಸುವುದಕ್ಕಾಗಿಯೂ ಇಂತಹ ದಾರಿ ಹಿಡಿಯಲೇ ಬೇಕಾಗಿ ಬಂದಿದೆ.



ಮೂರು ಕನಿಷ್ಟ ಕ್ರಮಗಳು

ಮತದಾನ ಅಗತ್ಯವಾಗಿರುವ ನಿಯಮದಡಿಯಲ್ಲಿ ಒಂದು ಚರ್ಚೆ ನಡೆದರೆ, ಸರಕಾರ ಬೆಲೆಯೇರಿಕೆಯನ್ನು ತಡೆಯಲು ಸಿಪಿಐ(ಎಂ) ಮುಂದಿಟ್ಟಿರುವ ಸೂಚನೆಗಳಲ್ಲಿ ಕನಿಷ್ಟ ಮೂರನ್ನು ಸ್ವೀಕರಿಸುವಂತೆ ಒತ್ತಾಯ ಬರುತ್ತಿತ್ತು. ಮೊದಲನೆಯದಾಗಿ, ಕೃಷಿ ಸರಕುಗಳಲ್ಲಿ ಜೂಜುಕೋರ ವ್ಯಾಪಾರವನ್ನು . ನಿರ್ದಿಷ್ಟವಾಗಿ ವಾಯಿದಾ/ಭವಿಷ್ಯದ ವ್ಯಾಪಾರವನ್ನು ತಕ್ಷಣವೇ ನಿಷೇಧಿಸುವ ಅಗತ್ಯವಿದೆ. ಈಗಾಗಲೇ ಈ ಅಂಕಣಗಳಲ್ಲಿ ಹಲವು ಬಾರಿ ನಿರೂಪಿಸಿರುವಂತೆ, ಈ ರೀತಿಯ ಸಟ್ಟಾ ವ್ಯವಹಾರ ಬೆಲೆಗಳಲ್ಲಿ ವಿಪರೀತ ಏರಿಕೆಯನ್ನು ಉಂಟು ಮಾಡುತ್ತವೆ.

ವಾಯಿದಾ ಮಾರುಕಟ್ಟೆಗಳ ಆಯೋಗ(ಫಾರ್ವರ್ಡ್ ಮಾರ್ಕೆಟ್ಸ್ ಕಮಿಶನ್) ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ ಎಪ್ರಿಲ್ 1ರಿಂದ ಅಕ್ಟೋಬರ್ 31, 2011ರ ವರೆಗೆ ಈ ಮಾರುಕಟ್ಟೆಗಳಲ್ಲಿ ನಡೆದ ಒಟ್ಟು ವ್ಯವಹಾರದ ಮೊತ್ತ ರೂ. 106.36.960.76 ಕೋಟಿ. ಕಳೆದ ವರ್ಷ ಇದೇ ಅವಧಿಯಲ್ಲಿ ನಡೆದ ವ್ಯವಹಾರ ರೂ.61,61,659.06 ಕೋಟಿ. ಅಂದರೆ 72.63ಶೇ. ಪ್ರಮಾಣದ ಭಾರೀ ಏರಿಕೆ! ಇದೆ ಅವಧಿಗಳಲ್ಲಿ ಕೃಷಿ ಸರಕುಗಳಲ್ಲಿನ ಸಟ್ಟಾ ವ್ಯವಹಾರ ರೂ.7,06,214.23 ಕೋಟಿಯಿಂದ ರೂ. 10,83,495.03 ಕೋಟಿಗೇರಿತು. ಅಂದರೆ 53.42ಶೇ. ಏರಿಕೆ! ಸಟ್ಟಾ ವ್ಯಾಪಾರದಲ್ಲಿ ಇಂತಹ ದಿಗ್ಭ್ರಮೆಗೊಳಿಸುವ ಬೆಳವಣಿಗೆ ಪ್ರಸಕ್ತ ಬೆಲೆಯೇರಿಕೆಗೆ ಒಂದು ಪ್ರಧಾನ ಕಾರಣ. ಆದ್ದರಿಂದ ಎಲ್ಲ ಕೃಷಿ ಸರಕುಗಳಲ್ಲಿ ಇಂತಹ ವ್ಯಾಪಾರವನ್ನು ತಕ್ಷಣವೇ ನಿಷೇಧಿಸುವ, ಕನಿಷ್ಟ ಅಮಾನತುಗೊಳಿಸುವ ಅಗತ್ಯ ಬಹಳ ಇದೆ. ಆದರೆ ಸರಕಾರ ಹೀಗೆ ಮಾಡಲು ನಿರಾಕರಿಸುತ್ತಿದೆ, ಆಮೂಲಕ ಜನರ ಹಿತಗಳನ್ನು ಬಲಿಗೊಟ್ಟು, ಅವರನ್ನು ಸಂಕಟಕ್ಕೆ ತಳ್ಳಿ ಕೆಲವರ ಸೂಪರ್ ಲಾಭಗಳಿಗೆ ಅನುಕೂಲ ಕಲ್ಪಿಸಿಕೊಡುತ್ತಿದೆ.

ಎರಡನೆಯದಾಗಿ, ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಸದ್ಯದ ಏರಿಕೆಗಳನ್ನಾದರೂ ಹಿಂದಕ್ಕೆ ಪಡೆಯುವ ಅಗತ್ಯವಿದೆ. ಇವು ಸಾಗಾಣಿಕೆ ಖರ್ಚು ಗಳನ್ನು ಹೆಚ್ಚಿಸಿ, ಅದರ ಪರಿಣಾಮವಾಗಿ ಒಟ್ಟಾರೆ ಹಣದುಬ್ಬರದ ಹೆಚ್ಚಳಕ್ಕೆ ಕಾರಣವಾಗಿದೆ.ತೈಲ ಕಂಪನಿಗಳು 'ನಷ್ಟ' ಅನುಭವಿಸುತ್ತಿರುವುದರಿಂದಾಗಿ ಇದು ಅನಿವಾರ್ಯವಾಗಿದೆ ಎಂಬುದು ಅಸಂಬದ್ಧ ತರ್ಕ. ವಾಸ್ತವವಾಗಿ, ನಮ್ಮ ತೈಲ ಕಂಪನಿಗಳು ಯಾವುದೇ ನಷ್ಟ ಅನುಭವಿಸಿಲ್ಲ. ಭಾರತೀಯ ತೈಲ ಕಂಪನಿಗಳ ಆಡಿಟ್ ಆದ ಹಣಕಾಸು ಫಲಿತಾಂಶಗಳ ಪ್ರಕಾರ ಮಾರ್ಚ 31, 2010 ರಲ್ಲಿ ಅವುಗಳ ನಿವ್ವಳ ಲಾಭ ರೂ. 10,998 ಕೋಟಿ. ಇಂಡಿಯನ್ ಆಯಿಲ್ ಕಾರ್ಪೊರೇಷನ್ 49,472 ಕೋಟಿ ರೂ. ಮೀಸಲು ಮಿಗುತೆ ಆದಾಯ ಹೊಂದಿತ್ತು ! ಎಪ್ರಿಲ್–ಡಿಸೆಂಬರ್ 2009ರಲ್ಲಿ ಇತರ ಎರಡು ಕಂಪನಿಗಳು, ಅಂದರೆ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು

ಪುಟ 12 ಕ್ಕೆ

ರಾಜ್ಯ ಬಿಜೆಪಿ ಸರ್ಕಾರವು ರೈತರ ಉದ್ದಾರಕ್ಕಾಗಿ, ಕೃಷಿಯ ಅಭಿವೃದ್ದಿಗಾಗಿ ಎಂದು ಹೇಳಿಕೊಂಡು ರಾಜ್ಯದಲ್ಲಿ ಕೃಷಿ ಬಂಡವಾಳ ಹೂಡಿಕೆದಾರರ ಜಾಗತಿಕ ಸಮಾವೇಶ ನಡೆಸಲು ಹೊರಟಿದೆ. ಇಡೀ ರೈತರ ಭೂಮಿಯನ್ನು, ಕೃಷಿಕರ ಬದುಕನ್ನು ಹಾಗೂ ಕೃಷಿ ರಂಗವನ್ನು ಸ್ವದೇಶಿ ವಿದೇಶಿ ಬಂಡವಾಳಗಾರರ ವಶಕ್ಕೆ ಒಪ್ಪಿಸುವ ನೀಲ ನಕ್ಷೆಯ ಮುನ್ನಡಿಯೇ ಈ ಜಾಗತಿಕ ಸಮಾವೇಶ. ನವೆಂಬರ್ 29-30, 2011 ರಂದು ಬೆಂಗಳೂರಿನಲ್ಲಿ ಈ ಕುರಿತು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಕಾರರ ಸಂಘಗಳು ಸಂಘಟಿಸಿದ್ದ ಕಾರ್ಯಾಗಾರದಲ್ಲಿ ಮಂಡನೆಯಾದ ಪ್ರಬಂಧವಿದು. ಓದಿ.

ರೈತರ ಬದುಕಿನ ಮೇಲೆ ಹರಿಹಾಯುತ್ತಿರುವ ಭೂ ಸ್ವಾಧೀನವೆಂಬ ಬುಲ್ಡೋಜರ್

ಜಿ.ಸಿ.ಬಯ್ಯಾರೆಡ್ಡಿ

ಸ್ವಾತಂತ್ರ್ಯದ ಆರು ದಶಕಗಳ ನಂತರವೂ ಭಾರತ, ಕೃಷಿ ಪ್ರಧಾನ ದೇಶವಾಗಿಯೇ ಮುಂದುವರಿದಿದೆ. ಇಂದು ಸಹ ಶೇ.60ರಷ್ಟು ಜನ ಸಂಖ್ಯೆಯ ಜೀವನಾಧಾರ ಕೃಷಿ. ನಮ್ಮ ರಾಜ್ಯದ ಪರಿಸ್ಥಿತಿಯು ಸಹ ಇದಕ್ಕೆ ಭಿನ್ನವಾಗಿಲ್ಲ. ಭೂ ಸುಧಾರಣಾ ಕಾನೂನುಗಳ ಜಾರಿ, ಹತ್ತಾರು ಲಕ್ಷ ಎಕರೆ ಭೂಮಿಯ ಹಂಚಿಕೆ ಇತ್ಯಾದಿ ಘೋಷಣೆಗಳು ನಂತರವೂ ರಾಜ್ಯದ ಸುಮಾರು ಒಂದು ಕೋಟಿ ನಾಲ್ಕು ಲಕ್ಷ ಕುಟುಂಬಗಳಲ್ಲಿ, ಶೇ.33 ರಷ್ಟು ಕುಟುಂಬಗಳಿಗೆ ಸ್ವಂತ ಭೂಮಿ ಇಲ್ಲ. ರಾಜ್ಯದ ಶೇ.25 ರಷ್ಟು ಕುಟುಂಬಗಳ ಸ್ವಾಧೀನದಲ್ಲಿ ಶೇ.63ರಷ್ಟು ಭೂಮಿಯಿದ್ದರೆ, ಉಳಿದ ಶೇ.75ರಷ್ಟು ಕುಟುಂಬಗಳ ಒಡೆತನಲ್ಲಿ ಕೇವಲ ಶೇ.37ರಷ್ಟು ಭೂಮಿ ಮಾತ್ರವಿದೆ.

ಹಲವು ದಶಕಗಳ ಧೀಮಂತ ಹೋರಾಟ ಫಲವಾಗಿ ಅರೆಬರೆ ಜಾರಿಯಾದ ಭೂ ಸುಧಾರಣಾ ಕಾನೂನುಗಳ ಅನ್ವಯ 35-40 ವರ್ಷಗಳಿಂದ ರೈತರು ಮತ್ತು ಕೃಷಿ ಕೂಲಿಕಾರರು, ಸಾಗುವಳಿ ಮಾಡುತ್ತಿರುವ ಬಗರ್‌ಹುಕ್ಕುಂ ಸಾಗುವಳಿ ಭೂಮಿಯ ಸಕ್ರಮಕ್ಕಾಗಿ ಲಕ್ಷಾಂತರ ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಅರ್ಜಿಗಳನ್ನು ಹಾಕಿಕೊಂಡು 20-25 ವರ್ಷಗಳಾದರೂ, ರಾಜ್ಯದ ಬಹುತೇಕ ಬಡವರಿಗೆ, ದಲಿತರಿ ಗೆ ಭೂಮಿಯ ಒಡೆತನ ಸಿಗುತ್ತಿಲ್ಲ. ಇತ್ತೀಚಿಗೆ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 18 ಕಿ.ಮೀ. ನಗರ ಸಭೆ, ಪುರಸಭೆ ಸುತ್ತ ಅಳತೆಯುಲ್ಲಿ 5 ಕಿ.ಮೀ. ಪ್ರದೇಶದ ಬಗರ್‌ಹುಕ್ಕುಂ ಸಾಗುವಳಿ ಭೂಮಿಯು ಸಕ್ರಮವಿಲ್ಲ, ಗೋಮಾಳದ ಭೂಮಿಯ ಸಕ್ರಮಕ್ಕೆ ತಕರಾರು ಹೀಗೆ ಹಲವು ಅಡೆತಡೆಗಳನ್ನು ತಂದು ಬಡವರಿಗೆ ಭೂಮಿ ಸಿಗಲಾರದಂತೆ ಮಾಡಲು ರಾಜ್ಯ ಸರ್ಕಾರಗಳು ಸಕ್ರಿಯವಾಗಿವೆ.

ರಾಜ್ಯ ಸರ್ಕಾರದ ಇಂತಹ ದಲಿತ, ರೈತ ವಿರೋಧಿ ಧೋರಣೆಯ ಫಲವಾಗಿ ಫಾರಂ. ನಂ.50 ಮತ್ತು 53 ಸಲ್ಲಿಸಿ 31,50,495 ಎಕರೆ ಭೂಮಿಯ ಸ್ವಾಧೀನದಲ್ಲಿರುವವರ 12,35,822 ಅರ್ಜಿಗಳು ಬಹುತೇಕ ವಿನಾ ಕಾರಣ ತಿರಸ್ಕರಿಸಲ್ಪಟ್ಟಿದೆ. 10,55,191 ಎಕರೆ ಭೂಮಿಯಲ್ಲಿ ಸ್ವಾಧೀನದಲ್ಲಿರುವ 4,28,411 ಅರ್ಜಿಗಳನ್ನು ವಿಲೇವಾರಿ ಮಾಡದೇ ಇಟ್ಟುಕೊಂಡಿದ್ದಾರೆ. ಇವುಗಳಲ್ಲಿ ಶ್ರೀಮಂತರು ಒತ್ತುವರಿ ಮಾಡಿಕೊಂಡಿರುವ ಭೂಮಿ ಮತ್ತು ಅರ್ಜಿಗಳಿವೆ. ಆದರೇ ಬಹುತೇಕ ದಲಿತರು, ಬಡವರು ಅರ್ಜಿಗಳೇ ಹೆಚ್ಚು.

ಹೀಗೆ ಭೂ ರಹಿತರು ಶೇ.33 ರಷ್ಟು ಕುಟುಂಬಗಳು, ಐದು ಅಥವಾ ಐದು ಎಕರೆಗಿಂತ ಕಡಿಮೆ ಭೂಮಿ ಇರುವ ಸುಮಾರು 57 ಲಕ್ಷ ಸಣ್ಣ, ಅತೀ ಅಣ್ಣ ರೈತ ಕುಟುಂಬಗಳು, ಅಲ್ಲದೆ ಸ್ವಾಧೀನವಿದ್ದರೂ ಯಾವುದೇ ಹಕ್ಕಿಲ್ಲದ ಲಕ್ಷಾಂತರ ಬಗರ್‌ಹುಕ್ಕುಂ ಸಾಗುವಳಿದಾರರು, ತಮಗೆ ಇರುವ ಅಲ್ಪ ಸ್ವಲ್ಪ ಭೂಮಿಯಲ್ಲಿ ಜೀವನ ನಡೆಸುವುದೇ ಕಷ್ಟವಾಗಿದೆ. 3-4 ತಿಂಗಳ ಕಾಲ ತಮ್ಮ ಭೂಮಿಯಲ್ಲಿ ಕೃಷಿ ಕೆಲಸ ಮಾಡಿದರೆ, ಇನ್ನುಳಿದ 8-9 ತಿಂಗಳು ಬೇರೆ ಕಡೆಗಳಲ್ಲಿ ಕೂಲಿ ನಡೆಸಿ ಜೀವನ ನಡೆಸಬೇಕಾಗಿದೆ. ಆದರೆ ಅದೇ ಸಂದರ್ಭದಲ್ಲಿ ನೂರಾರು ಎಕರೆ ಭೂಮಿಯನ್ನು ಹೊಂದಿರುವ ಭೂ ಮಾಲೀಕರು, ಈ ಭೂಮಿಯನ್ನು ಕೃಷಿಗೆ ಒಳಪಡಿಸದೇ ಬೀಳು ಬಿಟ್ಟಿರುವ ಪ್ರಕರಣಗಳು ವ್ಯಾಪಕವಾಗಿ ಕಾಣಿಸುತ್ತಿವೆ.

ಅಂದರೆ ನಿಜವಾಗಿ ಮೈ ಮೊರೆದು ದುಡಿಯುವವರ ಕೈಯಲ್ಲಿ ಭೂಮಿ ಇಲ್ಲ. ದುಡಿಯಲಾರದವರ ಕೈಯಲ್ಲಿ ನೂರಾರು ಎಕರೆ ಭೂಮಿ ಕೇಂದ್ರೀಕರಣವಾಗುತ್ತಿದೆ" ಇದೇ ಇವತ್ತಿನ ಕೃಷಿ ಬಿಕ್ಕಟ್ಟಿಗೆ ಮೂಲ ಕಾರಣ.



ಇಂತಹ ಸನ್ನಿವೇಶದಲ್ಲಿ ತುರ್ತಾಗಿ ಆಗಬೇಕಿರುವುದು ಭೂಸುಧಾರಣೆಗಳು. ಭೂ ಸುಧಾರಣಾ ಕಾನೂನುಗಳಲ್ಲಿ ಇರುವ ಲೋಪದೋಷಗಳನ್ನು ಸರಿಪಡಿಸಿ, ಕಟ್ಟು ನಿಟ್ಟಾಗಿ ಜಾರಿ ಮಾಡಿ. ದುಡಿಯುವವರ ಕೈಗೆ ಅಗತ್ಯವಿದ್ದಷ್ಟು ಭೂಮಿಯನ್ನು ನೀಡಬೇಕು ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯ 18 ನಗರ ಸಭೆ, ಪುರಸಭೆಯ 8, 5 ಕಿ.ಮೀ. ಪ್ರಶ್ನೆ ಈಗಾಗಲೇ ತಿರಸ್ಕರಿಸಲಾಗಿರುವ ಭೂಮಿ, ಸರ್ಕಾರಿ ಭೂಮಿಯೆಂದು, ಸಾಗುವಳಿದಾರರಿಗೆ ಹಕ್ಕಿಲ್ಲ ಎಂಬ ಕುತಂತ್ರಗಳನ್ನು ಸೋಲಿಸಿ, ಬಡವರಿಗೂ ದಲಿತರಿಗೆ ಭೂಮಿಯನ್ನು ಪಡೆಯುವುದು, ನಮ್ಮೆಲ್ಲರ ಹೊಣೆಯಾಗಬೇಕಿದೆ. ಅಲ್ಲದೆ ಇದಕ್ಕೆ ಪೂರಕವಾಗಿ ಕೃಷಿ ಲಾಭದಾಯಕ ಮಾಡಲು ಅಗತ್ಯ ವಿರುವ ಸೌಲಭ್ಯಗಳು, ಯೋಜನೆಗಳನ್ನು ರೂಪಿಸಬೇಕು. ಈ ಎಲ್ಲದರ ಪರಿಣಾಮವಾಗಿ ಕೃಷಿ ಉತ್ಪಾದನೆ ಅಭಿವೃದ್ಧಿ ದರವೇಗ ಮತ್ತು ವ್ಯಾಪಕವಾಗಿ ಬೆಳೆದು, ಕೃಷಿಯ ಜೊತೆ ಜೊತೆಯಲ್ಲಿಯೇ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು ಸಹಜ ಕ್ರಿಯೆಯಾಗಬೇಕಾಗಿತ್ತು.

ಆದರೆ ಸಂದರ್ಭ ಇದಕ್ಕೆ ನೇರ ವಿರುದ್ಧವಾಗಿ ಎದ್ದು ನಿಂತಿದೆ. ದೇಶದ ಬಹುಸಂಖ್ಯಾತ ಜನರ ಜೀವನಾಧಾರವಾಗಿ ಕೃಷಿಯನ್ನು ನಷ್ಟಕ್ಕೂ ಗುರಿ ಮಾಡಿ, ಬಿಕ್ಕಟ್ಟಿನಿಂದ ಮತ್ತಷ್ಟು ಬಿಕ್ಕಟ್ಟಿಗೆ ತಳ್ಳಿವೆ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸಿದ ಆಳುವ ವರ್ಗಗಳ ಸರ್ಕಾರಗಳು. ಇಂತಹ ನೀತಿಗಳಿಂದ ಬೇಸತ್ತು ರೈತಾಪಿ ಜನರು, ತಮಗೆ ಕೃಷಿಯೇ ಬೇಡವೆಂದು, 'ಪರ್ಯಾಯ ಬದುಕು' ತೋರಿಸಿದರೆ ತಕ್ಷಣದಲ್ಲಿ ಶೇ.42 ರಷ್ಟು ರೈತರು ಕೃಷಿಯನ್ನು ಬಿಡಲು ಸಿದ್ಧವೆಂಬ ಹಲವು ವರದಿಗಳು ಹೇಳುತ್ತಿವೆ. ಇಂತಹ ಸ್ಥಿತಿಯನ್ನು ನಿರ್ಮಾಣ ಮಾಡಿದ ಸರ್ಕಾರಗಳೇ ಇಂದು ಜಾಗತೀಕರಣದ ಸನ್ನಿವೇಶದಲ್ಲಿ ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಾಗುವುದು ತೀರ ಅಗತ್ಯವೆಂದು, ಇದಕ್ಕಾಗಿ ಅಧುನಿಕ ಕೃಷಿ ಪದ್ಧತಿ ಜಾರಿಯಾಗೆ ಬರಬೇಕೆಂದು ವಿಜ್ಞಾನ, ತಂತ್ರಜ್ಞಾನವನ್ನು, ಯಾಂತ್ರಿಕತೆಯನ್ನು ಕೃಷಿ ಕ್ಷೇತ್ರದಲ್ಲಿ ದೊಡ್ಡ ರೀತಿಯಲ್ಲಿ ತರಲು ಹೆಚ್ಚಿನ ಬಂಡವಾಳದ ಅಗತ್ಯವಿದೆಯೆಂದು ಸರ್ಕಾರದಿಂದ ಆ ಪ್ರಮಾಣದ ಬಂಡವಾಳ ಹೂಡಿಕೆ ಸಾಧ್ಯವಿಲ್ಲವೆಂದು, ಖಾಸಗಿ ಬಂಡವಾಳ, ವಿಶೇಷವಾಗಿ ಬಹುರಾಷ್ಟ್ರೀಯ ಕಂಪನಿಗಳನ್ನು ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹಿಸುವುದು ಅಗತ್ಯವೆಂದು ವಾದಿಸಿತೊಡಗಿದ್ದಾವೆ. ಮಾತ್ರವಲ್ಲ ಈ ದಿಸೆಯಲ್ಲಿ ಗುಜರಾತ್, ಮಹಾರಾಷ್ಟ್ರ, ತಮಿಳುನಾಡು ಅಂಧ್ರ ಪ್ರದೇಶ ಇತ್ಯಾದಿ ಹಲವಾರು ರಾಜ್ಯಗಳಲ್ಲಿ ಇದಕ್ಕೆ ಪೂರಕವಾಗಿ ಹಲವಾರು ಕ್ರಮಗಳನ್ನು ಜಾರಿ ಮಾಡಿದ್ದಾರೆ. ಇದಕ್ಕೆ ಅನುಕೂಲವಾಗಿ ಸಣ್ಣ ಹಿಡುವಳಿಗಳು ನಷ್ಟದಾಯಕ ಹೀಗಾಗಿ ಇದನ್ನು ತೆಗೆದು ಭೂಮಿಯು ಒಡೆತನದ ಕೇಂದ್ರೀಕರಣವಾಗಬೇಕು. ಅದಕ್ಕಾಗಿ ಭೂ ಸುಧಾರಣೆ ಕಾನೂನಿನಲ್ಲಿ ಕೃಷಿ ಭೂಮಿ, ಕೃಷಿಕರಿಗೆ ಮಾತ್ರ ಎನ್ನುವ ಅಂಶಗಳನ್ನು ತಿದ್ದುಪಡಿ ಮಾಡಿ. ಖಾಸಗಿ ಕಂಪನಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಹತ್ತಾರು ಸಾವಿರ ಎಕರೆ ಭೂಮಿಯನ್ನು ನೀಡುವ. ಇದಕ್ಕಾಗಿ ಸರ್ಕಾರಿ ಭೂಮಿ ಅಲ್ಲದೆ, ಸಣ್ಣ ಪುಟ್ಟ ರೈತರ ಭೂಮಿಗಳನ್ನು ಸ್ವಾಧೀನ ಮಾಡಲು ಅಗತ್ಯವಿರುವ ಕಾನೂನುಗಳನ್ನು ರೂಪಿಸಲು ಸರ್ಕಾರಗಳು ಹೊರಟಿವೆ. "ಕೃಷಿ ಉತ್ಪಾದನೆ" 'ಕೃಷಿ ಮಾರುಕಟ್ಟೆ'ಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸುವುದರ ಜೊತೆಯಲ್ಲಿಯೇ ಫಲವತ್ತಾದ ಭೂಮಿಯನ್ನು ಸಹ ಒಪ್ಪಿಸುವ ಕೆಲಸಕ್ಕೆ ಕೈ ಹಾಕಲಾಗಿದೆ.

ಈ ಒಟ್ಟಾರೆ ಉದ್ದೇಶಗಳ ಕಾರಣದಿಂದಲೇ ಬಿಜೆಪಿ ನಾಯಕತ್ವದ ರಾಜ್ಯ ಸರ್ಕಾರ, 2011 ರ ಬಜೆಟ್‌ನ್ನು ಮಂಡಿಸುವುದರ ಜೊತೆಯಲ್ಲಿಯೇ 'ಕೃಷಿ ಕ್ಷೇತ್ರಕ್ಕೆ' ಖಾಸಗಿ ಬಂಡವಾಳವನ್ನು ತರುವ ಉದ್ದೇಶದಿಂದ "ಕೃಷಿ ಕ್ಷೇತ್ರದಲ್ಲಿ ವಿಶ್ವ ಹೂಡಿಕೆದಾರರ ಸಮಾವೇಶ" ವನ್ನು ದೇಶದಲ್ಲಿಯೇ ಪ್ರಪ್ರಥಮವಾಗಿ ನಡೆಸುದಾಗಿ ಘೋಷಿಸಿತ್ತು ಮಾತ್ರವಲ್ಲ. ಪೂರಕವಾಗಿ ರಾಜ್ಯದ ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿಗಳನ್ನು ತರುವುದಾಗಿ ಸಹ ಘಂಟ ಘೋಷವಾಗಿ ಹೇಳಿತ್ತು.

ಈ ಧೋರಣಾತ್ಮಕ ದೃಷ್ಟಿಕೋನದ ಹಿನ್ನಲೆಯಲ್ಲಿ "ಕೃಷಿ ಕ್ಷೇತ್ರದಲ್ಲಿ ವಿಶ್ವ ಹೂಡಿಕೆದಾರರ ಸಮಾವೇಶ" ನಡೆಯುತ್ತಿದೆ. ಇದರ ಫಲವಾಗಿ ಈತನಕ ಕೈಗಾರಿಕೆ ಮತ್ತಿತರ ಕಾರಣಗಳಿಗಾಗಿ ನಡೆಯುತ್ತಿದ್ದ, 'ಭೂ ಸ್ವಾಧೀನದ' ಜೊತೆಗೆ 'ಕೃಷಿ ಕಂಪನಿಕರಣಕ್ಕಾಗಿ' ಭೂ ಸ್ವಾಧೀನವೂ ಮುಂದಿನ ದಿನಗಳಲ್ಲಿ ನಡೆಯಲಿದೆಂಬುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ಈಗ ಸಧ್ಯ ನಾವು

ಭೂಮಿಯ ಒಡೆತನವನ್ನು ಕಂಪನಿಗಳಿಗೆ ನೀಡುವುದಿಲ್ಲವೆಂದು, ಕಂಪನಿಗಳು ಏನೇ ಇದ್ದರೂ ರೈತರ ಜೊತೆ ಒಪ್ಪಂದ ಮಾಡಿಕೊಂಡು 'ಗುತ್ತಿಗೆ ಕೃಷಿ'ಯಂತಹ ರೀತಿಯಲ್ಲಿ ಕೃಷಿ ಮಾಡುತ್ತಾರೆಂದು. 'ಬಂಡವಾಳ' 'ತಂತ್ರಜ್ಞಾನ' ದೊಂದಿಗೆ ಕೃಷಿ ನಡೆಸಿ, ಸಂಕಷ್ಟದಲ್ಲಿರುವ ರೈತರಿಗೆ ತುಂಬಾ ಸಹಾಯ ಮಾಡುತ್ತಾರೆಂದು ಇತ್ಯಾದಿ ಇತ್ಯಾದಿಯಾಗಿ ಸರ್ಕಾರಗಳು ಏನೇ ಹೇಳಿದರೂ ಅಂತಿಮವಾಗಿ 'ಇಡೀ ಕೃಷಿ'ಯನ್ನು ಕಂಪನಿಗಳ ಕಪಿಮುಷ್ಟಿಗೆ ತೆಗೆದುಕೊಳ್ಳುವುದರಲ್ಲಿ ಸಂಶಯವೇ ಇಲ್ಲ. ಹೀಗಾಗಿ ಈ ಹಿನ್ನೆಲೆಯಲ್ಲಿ "ಭೂ ಸ್ವಾಧೀನದ ಪ್ರಶ್ನೆಯನ್ನು ನಾವು ನೋಡಬೇಕಿದೆ.

ಅಭಿವೃದ್ಧಿಗಾಗಿ – ಭೂ ಸ್ವಾಧೀನ :

ಹೌದು, ಕೈಗಾರಿಕೆ, ರೈಲ್ವೇ, ನಗರಗಳ ಅಭಿವೃದ್ಧಿ, ವಿಮಾನ ನಿಲ್ದಾಣ, ರಸ್ತೆ, ಇತ್ಯಾದಿಗಳಿಗಾಗಿ ಭೂಮಿ ಬೇಕು. ಭೂಮಿ ಇಲ್ಲದೆ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಅಭಿವೃದ್ಧಿಗೆ ನಾವು ಯಾರ ವಿರೋಧಿಗಳು ಅಲ್ಲ. ಆದರೆ ನಮಗೆ ಬೇಕಾಗಿರುವುದು ಎಂತಹ ಅಭಿವೃದ್ಧಿ ? ಈ ಅಭಿವೃದ್ಧಿಗೆ ಬೇಕಾದ ಭೂಮಿ ಎಂತಹದು? ಎಷ್ಟು ? ಎಲ್ಲಿ ? ಹೀಗೆ ಪ್ರಶ್ನೆಗಳನ್ನು ಎತ್ತಿದ ತಕ್ಷಣ ನಾವು ಅಭಿವೃದ್ಧಿಗೆ ಅಡ್ಡಿ ಉಂಟು ಮಾಡುತ್ತಿದ್ದೇವೆಂದು ಸರ್ಕಾರಗಳು, ಮಂತ್ರಿಗಳು ಮಾತನಾಡ ತೊಡಗುತ್ತಾರೆ. ಇನ್ನೂ ಮುಖ್ಯವಾಗಿ ಇವುಗಳ ಎಲ್ಲದರ ಜೊತೆಗೆ ತಲಾ ತಲಾಂತರಗಳಿಂದ ಭೂಮಿಯನ್ನು ನಂಬಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ರೈತರಿಂದ ಭೂಮಿಯನ್ನು ಸಂಪೂರ್ಣವಾಗಿ ಸ್ವಾಧೀನ ಪಡಿಸಿಕೊಳ್ಳುವಾಗ, ಕೃಷಿ ಬಿಟ್ಟರೆ, ಬೇರೆ ಏನು ಗೊತ್ತಿಲ್ಲದ ಆ ಮುಗ್ದ ರೈತರಿಗೆ, ನೀವು ಕೊಡುವ ಪರಿಹಾರವೇನು ? ಮುಂದೆ ಬದುಕಲು ತೋರಿಸುವ ದಾರಿಯೇನು ? ಇತ್ಯಾದಿ ಪ್ರಶ್ನೆಗಳನ್ನು ಎತ್ತಿದರೆ, ಆಳುವವರಿಗೆ ಮತ್ತಷ್ಟು ಕೋಪ ಬರುತ್ತದೆ. ಯಾರು ಏನೇ ಮಾತನಾಡಲಿ, ದೇಶದ ಅಭಿವೃದ್ಧಿಗೆ ತನ್ನ ಭೂಮಿಯನ್ನು ಕಳೆದು ಕೊಳ್ಳುವ ರೈತರ ಅಭಿವೃದ್ಧಿಯ ಬಗ್ಗೆ ಯೋಜನೆ ಮಾಡದ ಅಭಿವೃದ್ಧಿಯು ಅಭಿವೃದ್ಧಿಯೇ ಅಲ್ಲ. ಹೀಗಾಗಿ ನಮ್ಮ ನಿಲುವು ಭಾರಿ ಸ್ಪಷ್ಟ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡೇ "ಅಭಿವೃದ್ಧಿ ಯೋಜನೆಗಳು" ಬರುವುದಾದರೆ, ಈ ಅಭಿವೃದ್ಧಿಯ ಪಾಲು ಈ ಅಭಿವೃದ್ಧಿಗೆ ಮುಖ್ಯ ಬಾಗಿದಾರನಾದ ರೈತನಿಗೆ ಸಿಗಲೇಬೇಕು. ರೈತನಿಗೆ ಅಭಿವೃದ್ಧಿಯಲ್ಲಿ ಪಾಲು ಕೊಡುವಂತ ಮತ್ತು ಕೃಷಿ ಭೂಮಿಯನ್ನು ರಕ್ಷಣೆ ಮಾಡುವಂತಹ ಭೂ ಸ್ವಾಧೀನ ನೀತಿಯು ನಮ್ಮ ದೇಶದಲ್ಲಿ ಜಾರಿಯಾಗಲೇ ಬೇಕು. ರೈತನ ಸಮಾದಿಯ ಮೇಲೆ "ಭವ್ಯ ಅಭಿವೃದ್ಧಿಯನ್ನು" ಸಾಧಿಸುವುದಕ್ಕೆ ನಮ್ಮ ಸ್ಪಷ್ಟ ವಿರೋಧವಿದೆ.

ಇಂತಹ ಸ್ಥಿತಿಯಿಲ್ಲದ ಕಾರಣದಿಂದ ಭೂ ಸ್ವಾಧೀನದ ಪ್ರಶ್ನೆಯು ದೇಶಾದ್ಯಂತ ಅತ್ಯಂತ ಚರ್ಚೆಯಾಗುತ್ತಿರುವ ಮುಖ್ಯ ವಿಷಯಗಳಲ್ಲಿ ಒಂದಾಗಿದೆ. ಭೂ ಸ್ವಾಧೀನ ನಡೆಯುವ ಪ್ರತಿಯೊಂದು ಪ್ರದೇಶದಲ್ಲಿಯು ರೈತರು ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ನಡೆಯುವ ಬಹುತೇಕ ಪ್ರತಿಭಟನೆಗಳು ತಮಗೆ ಸಿಗಬೇಕಾದ 'ಪರಿಹಾರ' ತೀರ ಕಡಿಮೆಯೆಂದೇ ಆಗಿರುತ್ತದೆ. ಭೂಮಿಯನ್ನು ಬಿಡುವುದಿಲ್ಲ ಎನ್ನುವುದಕ್ಕಿಂತ ಭೂಮಿಯನ್ನು ಕಳೆದುಕೊಳ್ಳುವರಿಗೆ ಸಿಗಬೇಕಾದ ಪರಿಹಾರ ಇತ್ಯಾದಿ ಅಂಶಗಳೇ ಮುಖ್ಯವಾದ ಅಂಶವಾಗಿ ಎದ್ದು ಬಂದಿದೆ. ಕಾರಣ ನಮ್ಮಲ್ಲಿ ಜಾರಿಯಲ್ಲಿರುವ 1894ರಕ್ಕು ಬ್ರಿಟೀಷರ ಕಾಲದಲ್ಲಿ ಜಾರಿಗೆ ತಂದಿರುವ ಭೂ ಸ್ವಾಧೀನ ಕಾಯ್ದೆ ಹಾಗೂ ಬಹುತೇಕ ಇದರ ಪೂರಕವಾಗಿಯೆ ತಂದಿರುವ ಹಲವಾರು ತಿದ್ದುಪಡಿಗಳು. ದೇಶವನ್ನು ಲೂಟಿ ಮಾಡಲು ಬಂದಿದ್ದ ಬ್ರಿಟೀಷರ ಕಾಲದ ಕಾಯ್ದೆ. ಆ ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ಸಹ, ರೈತರ ವಿಷಯದಲ್ಲಿ ಬಹುತೇಕ ಬ್ರಿಟೀಷರಿಗಿಂತ ಭಿನ್ನವಾಗಿ ಯೋಚನೆ ಮಾಡದ ಕಾರಣದಿಂದಲೇ, ಅದೇ ಬ್ರಿಟೀಷರ ಕಾಲದ ಕಾಯ್ದೆಯ ಅನ್ವಯ ಈ ತನಕ ಭೂ ಸ್ವಾಧೀನವನ್ನು ಮಾಡುತ್ತಾ ಬಂದಿದ್ದಾರೆ.



ಹೀಗಾಗಿ ಸಮಸ್ಯೆಯ ಮೂಲ ಇದೆಯಾಗಿದೆ.

ಅನೇಕ ಹೋರಾಟಗಳು, ಕಹಿ ಅನುಭವಗಳ ಕಾರಣದಿಂದ ಯುಪಿಎ–1 ಕೇಂದ್ರ ಸರ್ಕಾರ ಪ್ರಪ್ರಥಮವಾಗಿ ಭೂ ಸ್ವಾಧೀನ ಕಾಯ್ದೆ–2007 ಮತ್ತು ಪುನರ್ ವಸತಿ ಕಾಯ್ದೆ–2007 ಗಳನ್ನು ಪ್ರತ್ಯೇಕವಾಗಿ ರೂಪಿಸಿ, ಲೋಕಸಭೆಯಲ್ಲಿ ಮಂಡಿಸಿತು. ಆ ನಂತರ ಇದು ಮುಂದಕ್ಕೆ ಹೋಗಿ ತೀರ ಇತ್ತೀಚಿಗೆ ಅಂದರೆ ಜುಲೈ–2011ರಲ್ಲಿ 'ಭೂ ಸ್ವಾಧೀನ ಮತ್ತು ಪುನರ್ ವಸತಿ–2011' ಕರಡನ್ನು ಒಟ್ಟಿಗೆ ಸೇರಿಸಿ ಸಿದ್ದಗೊಳಿಸಿ ಚರ್ಚೆಗೆಯೆಂದು ಬಿಡುಗಡೆ ಮಾಡಿದೆ.

'ಭೂ ಸ್ವಾಧೀನ ಮತ್ತು ಪುನರ್ ವಸತಿ–2011'ರ ಕರಡು ಕಾಯ್ದೆಯಲ್ಲಿ ಹಲವು ಸಕಾರತ್ಮಕ ಅಂಶಗಳಿದ್ದರೂ, ಅಂತಿಮವಾಗಿ ಬಂಡವಾಳಗಾರರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಮಾಡುವ ಪ್ರಯತ್ನಗಳಿವೆ. ಈ ಬಗ್ಗೆ ಇಡೀ ದೇಶದಲ್ಲಿ ವ್ಯಾಪಕವಾಗಿ ಚರ್ಚೆ ನಡೆಸಬೇಕು. ಈ ಚರ್ಚೆಗಳಲ್ಲಿ ಬರುವ ಸಕಾರಾತ್ಮಕ ಅಂಶಗಳನ್ನು ಸರ್ಕಾರ ಕಾಯ್ದೆಯಲ್ಲಿ ಅಳವಡಿಸುವಂತೆ, ಒತ್ತಡಗಳನ್ನು, ಹೋರಾಟಗಳನ್ನು ನಡೆಸಬೇಕಾಗಿದೆ. ಇದು ರೈತರ ಹಿತವನ್ನು ಬಯಸುವ ಎಲ್ಲಾ ಪಕ್ಷಗಳು, ಶಕ್ತಿಗಳು ಹಾಗೂ ಸಂಘಟನೆಗಳು ಮಾಡಬೇಕಾದ ತುರ್ತು ಕೆಲಸವಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಎ.ಐ.ಎ.ಡಬ್ಲ್ಯೂ.ಯು.)ಗಳು ಸಂಯೋಜನೆಗೊಂಡಿರುವ ಅಖಿಲ ಭಾರತ ಕಿಸಾನ್ ಸಭಾ(ಎ.ಐ.ಕೆ.ಎಸ್.) ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎ.ಐ.ಎ.ಡಬ್ಲ್ಯೂ.ಯು.)ಗಳು ಈಗಾಗಲೇ ಈ ಕರಡು ಕಾಯ್ದೆಗೆ ತನ್ನ ಸೂಚನೆಗಳನ್ನು ನೀಡಿದೆ. ಮತ್ತಷ್ಟು ಚರ್ಚೆಗಳ ನಂತ್ಹರ ಅಂತಿಮವಾಗಿ ಇನ್ನೊಂದು ಸುತ್ತಿನಲ್ಲಿ ತನ್ನ ತಿದ್ದುಪಡಿ ಸೂಚನೆಗಳನ್ನು ನೀಡಲಿದೆ.

ಈಗಾಗಲೇ ಮೇಲೆ ತಿಳಿಸಿದಂತೆ ನೀಡಿರುವ ಸೂಚನೆ, ತಿದ್ದುಪಡಿಗಳ ಆಧಾರದಲ್ಲಿ ಈ ಕೆಳಗಿನ ಅಂಶಗಳನ್ನು ತಮ್ಮ ಮುಂದೆ ಇಡಲಾಗಿದೆ. ಈ ಬಗ್ಗೆ ಮತ್ತಷ್ಟು ಚರ್ಚಿಸಿ ಬರುವ ರೈತ ಪರ ಅಂಶಗಳನ್ನು ಇನ್ನೊಂದು ಸುತ್ತಿನಲ್ಲಿ ಕೇಂದ್ರ ಸರ್ಕಾರಕ್ಕೆ ನೀಡಲಾಗುವುದು.

–: ಪ್ರಮುಖ ಸೂಚನೆಗಳು :–

1. ರೈತರು ಮತ್ತು ಬಡವರ ಭೂಮಿಗಳನ್ನು ಮುಂಚಿತವಾಗಿಯೇ ಸ್ವಾಧೀನ ಪಡಿಸಿಕೊಂಡು 'ಭೂ ಬ್ಯಾಂಕ್'ನ ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿರುವ ರಾಜ್ಯ ಸರ್ಕಾರ ತೀರ್ಮಾನವನ್ನು ಕೈ ಬಿಡಬೇಕು. ನಿರ್ದಿಷ್ಟ ಯೋಜನೆಗಾಗಿ ಅಯಾಯ ಸಂದರ್ಭಕ್ಕೆ ಭೂ ಸ್ವಾಧೀನಕ್ಕೆ ಮುಂದಾಗಬೇಕು.
2. ಆಹಾರದ ಭದ್ರತೆ, ಉದ್ಯೋಗ ಸೃಷ್ಠಿ ಮತ್ತು ಪರಿಸರ ಸಂರಕ್ಷಣೆಯನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯದಲ್ಲಿ 'ಭೂ ಬಳಕೆ ನೀತಿ'ಯನ್ನು ರೂಪಿಸಬೇಕು.
3. ರೈತರ ಒಪ್ಪಿಗೆಯಿಲ್ಲದೆ ಯಾವುದೇ ಭೂಸ್ವಾಧೀನ ಮಾಡಬಾರದು.
4. ಭೂ ಸ್ವಾಧೀನ ಮಾಡುವಾಗ ಕ್ರಮವಾಗಿ ಫಲವತ್ತಲ್ಲದ ಭೂಮಿ, ಕಡಿಮೆ ಫಲವತ್ತಾದ ಭೂಮಿ, ಅನಿವಾರ್ಯವಾದಾಗ ಮಾತ್ರ ಫಲವತ್ತಾದ ಭೂಮಿ ಎಂಬ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
5. ಭೂ ಸ್ವಾಧೀನಕ್ಕಾಗಿ ಬರಲಿರುವ 'ಯೋಜನೆ'ಯ ಒಟ್ಟಾರೆ ಸಾಮಾಜಿಕ–ಆರ್ಥಿಕ–ಪರಿಸರಕ್ಕೆ ಸಂಬಂಧಿಸಿ ಪ್ರಯೋಜನ ಮತ್ತು ಪರಿಣಾಮಗಳ ಬಗ್ಗೆ ಮುಂಚಿತವಾಗಿ ಅಧ್ಯಯನ ಮಾಡಲು 'ತಜ್ಞರ ಸಮಿತಿ'ಯನ್ನು ರಚಿಸಬೇಕು. ಈ ತಜ್ಞರ ಸಮಿತಿಯ 'ವರದಿ', ಸೂಚನೆಗಳು, ಇದಕ್ಕೆ ಆ ಪ್ರದೇಶದ ಜನರು ಮುಖ್ಯವಾಗಿ ಭೂಮಿ ಕಳೆದುಕೊಳ್ಳುವವರ ಅಭಿಪ್ರಾಯಗಳು ಆಧಾರದಲ್ಲಿ 'ಯೋಜನೆ'ಯ ಅಗತ್ಯತೆಯನ್ನು ನಿರ್ಧರಿಸಬೇಕು.
6. ಸದ್ಯ ಜಾರಿಯಲ್ಲಿರುವ 'ಭೂ ಸ್ವಾಧೀನ ಕಾಯ್ದೆ'ಯ ಪದ್ಧತಿಗೆ ಬದಲಿಗೆ ಭೂ ಸ್ವಾಧೀನಕ್ಕೆ ಒಳಗಾಗುವ ಎಲ್ಲಾ ರೈತರಿಗೂ ವೈಯುಕ್ತಿಕವಾಗಿ ನೋಟಿಸುಗಳನ್ನು ನೀಡಬೇಕು. ಯೋಜನೆಗೆ ಸಂಬಂಧಿಸಿದ ಪೂರ್ಣ ವಿವರಗಳನ್ನು ತಪ್ಪದೆ ಇದಕ್ಕೆ ಲಗತ್ತಿಸಬೇಕು.
7. ಗ್ರಾಮ ಗ್ರಾಮಗಳಲ್ಲಿಯೇ ಭೂ ಸ್ವಾಧೀನ ಪಡೆಯುವ ಸಂದರ್ಭದಲ್ಲಿ ನೀಡುವ ಪರಿಹಾರ. ಕೇವಲ ಭೂಮಿಯನ್ನು ಕಳೆದುಕೊಳ್ಳುವ ಭೂಮಿ ಮಾಲೀಕರಿಗೆ ಮಾತ್ರವಲ್ಲದೆ, ಬಗರ್ ಹುಕ್ಕುಂ ಸಾಗುವಳಿದಾರರಿಗೆ, ಗೇಣಿದಾರರಿಗೆ, ಕೃಷಿ ಕೂಲಿಕಾರರಿಗೆ ಹಾಗೂ ಕೃಷಿ ನಂಬಿಕೊಂಡು ಜೀವನ ನಡೆಸುತ್ತಿದ್ದ ಕಸುಬುದಾರರಿಗೂ ಪರಿಹಾರ ಸಿಗಬೇಕು.
8. ಸ್ವಾಧೀನ ಪಡಿಸಿಕೊಳ್ಳಲಾಗುವ ಭೂಮಿಯ ದರವನ್ನು ನಿಗದಿ ಮಾಡಲು ಜಿಲ್ಲಾಧಿಕಾರಿಗಳ ಜೊತೆಗೆ ಚುನಾಯಿತ ಜನ ಪ್ರತಿನಿಧಿಗಳು ಹಾಗೂ ಭೂಮಿ ಕಳೆದುಕೊಳ್ಳುವವರ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿಬೇಕು. ಈ ಸಮಿತಿಯ ತೀರ್ಮಾನದಂತೆ ಭೂಮಿಯ ಬೆಲೆ ನಿಗದಿಯಾಗಬೇಕು. ರೈತ ಸಂಘಗಳಿಗೂ ಸಮಿತಿಯಲ್ಲಿ ಪ್ರತಿನಿಧ್ಯವಿರಬೇಕು.
9. ಸ್ವಾಧೀನ ಪಡಿಸಿಕೊಳ್ಳಲಾಗುವ ಭೂಮಿಯ ಬಳಕೆ ಹಾಗೂ ಬಳಕೆಯ ಮಾರ್ಪಾಡಿನಿಂದ ಬರುವಂತ ಅದಾಯದಲ್ಲಿ ಭೂಮಿಯನ್ನು ಕಳೆದುಕೊಂಡವರಿಗೆ ಪಾಲನ್ನು ನೀಡಬೇಕು. ಷೇರು, ಡಿಬೆಂಚರುಗಳನ್ನು ಲಾಭ ಹಂಚಿಕೆ ಪದ್ಧತಿಯಲ್ಲಿ ನೀಡಬೇಕು. ನೀಡುವ ಪರಿಹಾರದ ಮೊತ್ತಕ್ಕೂ ಇದು ಸಂಬಂಧವಿಲ್ಲ.
10. 'ಯೋಜನೆ'ಗಾಗಿ ಸ್ವಾಧೀನಪಡಿಸಿಕೊಳ್ಳಲಾಗುವ ಭೂಮಿಯಲ್ಲಿ, ಅಭಿವೃದ್ಧಿಪಡಿಸಲಾದ ಭೂಮಿಯ ಶೇ.40ರ ಬದಲಿಗೆ 50 ರಷ್ಟು ಅಥವಾ ನಿಗದಿತ ಪರಿಹಾರವನ್ನು ತೆಗೆದುಕೊಳ್ಳಲು ಅವಕಾಶವಿರಬೇಕು. ಸದ್ಯ

ಪುಟ 12ಕ್ಕೆ

ಜನ ಚಳುವಳಿಯ ವಿಸ್ತರಣೆಗೆ ತೀರ್ಮಾನ

ಯಶಸ್ವಿಗೊಂಡ ಸಿಪಿಐ(ಎಂ) 20ನೇ ಮೈಸೂರು ಜಿಲ್ಲಾ ಸಮ್ಮೇಳನ

ಜಿಲ್ಲೆಯಾದ್ಯಂತ ಜನ ಚಳುವಳಿಯನ್ನು ವಿಸ್ತರಿಸುವ, ಪಕ್ಷವನ್ನು ಬಲಪಡಿಸುವ ಘೋಷಣೆಯೊಂದಿಗೆ ಸಿ.ಪಿ.ಐ.(ಎಂ)ನ ಮೈಸೂರು ಜಿಲ್ಲಾ ಸಮ್ಮೇಳನ ಯಶಸ್ವಿಗೊಂಡಿತು.

ನವೆಂಬರ್ 13,14-2011 ರಂದು ಮೈಸೂರು ನಗರದಲ್ಲಿ 20ನೇ ಮೈಸೂರು ಜಿಲ್ಲಾ ಸಮ್ಮೇಳನ ನಡೆಯಿತು. ನವೆಂಬರ್, 13 ರಂದು ಬೆಳಿಗ್ಗೆ 11 ಘಂಟೆಗೆ ರಾಮಸ್ವಾಮಿ ವೃತ್ತದಿಂದ ಬೃಹತ್ ಮೆರವಣಿಗೆ ಹೊರಟು ನಂತರ ಶಾರದ ವಿಲಾಸ ಶತಮಾನೋತ್ಸವ ಭವನದಲ್ಲಿ ಸಮಾವೇಶಗೊಂಡಿತು. ಸಮಾವೇಶವನ್ನು ಉದ್ಘಾಟಿಸಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್ ಮಾತನಾಡಿ, ರಾಜ್ಯ ಕೇಂದ್ರ ಸರ್ಕಾರಗಳು ಜನರನ್ನು ಸಂಕಷ್ಟಕ್ಕೆ ತಳ್ಳುತ್ತಾ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿವೆ. ಇತಿಹಾಸ ಕಂಡರಿಯದಷ್ಟು ದೊಡ್ಡ ಭ್ರಷ್ಟಾಚಾರದಲ್ಲಿ ಕೇಂದ್ರ ಸರ್ಕಾರ ಮುಳುಗಿದ್ದು ಕೆಲವೊಂದು ಶ್ರೀಮಂತ ಕುಟುಂಬಗಳನ್ನು ಬೆಳೆಸಿ ರಕ್ಷಿಸುತ್ತಾ ಜನತೆಯ ಬದುಕನ್ನು ದುಸ್ತರಗೊಳಿಸಿ ಪಡಿತರ ವ್ಯವಸ್ಥೆಯನ್ನು ನಾಶ ಪಡಿಸಲು ಹೊರಟಿದೆ. ರಾಜ್ಯ ಬಿ.ಜೆ.ಪಿ. ಸರ್ಕಾರವು ಪ್ರಜಾತಂತ್ರ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದು, ಇಡೀ ಆಡಳಿತ ಪರಪ್ಪನ ಅಗ್ರಹಾರದ ಜೈಲಿನಿಂದಲೇ ನಡೆಯುತ್ತಿದೆ. ರಾಜ್ಯದಲ್ಲಿ ಅಕ್ರಮ ಗಣಿ ವ್ಯವಹಾರಕ್ಕೆ ಅವಕಾಶ ಕಲ್ಪಿಸಿ ಗುಜರಾತಿನ ಉದ್ಯಮಿ ಅದಾನಿಯನ್ನು ದೇಶದಲ್ಲೇ 7ನೇ ಶ್ರೀಮಂತನನ್ನಾಗಿಸಿ ರಾಜ್ಯದಲ್ಲಿನ ಸಂಪತ್ತನ್ನು ಕೊಳ್ಳೆಯಲ್ಲಿ ಬಿಜೆಪಿ ಪಾಲು ಹೊಡೆಯುತ್ತಿದ್ದು, ಲೋಕಾಯುಕ್ತ ಸಂಸ್ಥೆಯನ್ನು ಲಿಂಗಾಯುತ ಸಂಸ್ಥೆಯನ್ನಾಗಿಸಲು ಹೊರಟಿದೆ ಎಂದರು.



ನಂತರ ಮಾತನಾಡಿದ ಸಿ.ಐ.ಟಿ.ಯು.ನ ರಾಷ್ಟ್ರೀಯ ಮುಖಂಡರು ಹಾಗೂ ಸಿ.ಪಿ.ಐ(ಎಂ) ರಾಜ್ಯ ಸಮಿತಿಯ ಸದಸ್ಯರಾದ ಎಸ್. ವರಲಕ್ಷ್ಮಿ ಮಾತನಾಡಿ ರಾಜ್ಯದಲ್ಲಿ ಮಕ್ಕಳ ಅಪೌಷ್ಟಿಕತೆಯಿಂದ ಬಳಲುತ್ತಿರುವಾಗ ರೇಷನ್ ನೀಡದೇ ಭ್ರಷ್ಟಾಚಾರದಲ್ಲಿ ಮುಳುಗಿದೆ. ದೊಡ್ಡಮಟ್ಟದಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿರುವ ಮಂತ್ರಿಗಳ ವಿರುದ್ಧ ಕ್ರಮಕೈಗೊಳ್ಳದೆ ಅಕ್ರಮ ಪಡಿತರ ಚೀಟಿ ಹೊಂದಿದ್ದಾರೆ ಎಂಬ ಹೆಸರಿನಲ್ಲಿ ಜನರ ಮೇಲೆ ಕಾರ್ಡುಗಳನ್ನು ಕಡಿತ ಮಾಡಲು ಹೊರಟಿರುವುದು ಸರ್ಕಾರದ ಜನವರೋಧಿತನಕ್ಕೆ ಸಾಕ್ಷಿ.

ಜಗದೀಶ್ ಸೂರ್ಯ

ಜಗನ್ನಾಥ್ ವಹಿಸಿದ್ದರು. ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಕೆ. ಬಸವರಾಜು, ವಿಜಯಕುಮಾರ್, ಜಯರಾಂ, ಬಾಲಾಜಿರಾವ್, ವಿ. ಬಸವರಾಜು, ಸೋಮಶಂಕರ್ ಉಪಸ್ಥಿತರಿದ್ದು, ಜಗದೀಶ್ ತಂಡದವರು ಕ್ರಾಂತಿ ಗೀತೆಗಳನ್ನು ಹಾಡಿದರು.

ನಂತರ ಸಂಜೆ ಪ್ರತಿನಿಧಿ ಅಧಿವೇಶನ ಪ್ರಾರಂಭವಾಗಿ ಕಾರ್ಯದರ್ಶಿ ಜಗನ್ನಾಥ್ ಕರಡು ವರದಿ ಮಂಡಿಸಿದರು. 14 ರಂದು ವಿವಿಧ ಶಾಖೆಯ 13 ಜನ ಪ್ರತಿನಿಧಿಗಳು ವರದಿ ಮೇಲೆ ಚರ್ಚೆ ನಡೆಸಿದರು. ನಂತರ ಒಬ್ಬ ಕಾಯಂ ಆಹ್ವಾನಿತರನ್ನು ಒಳಗೊಂಡಂತೆ 10 ಜನರ ಜಿಲ್ಲಾ ಸಂಘಟನಾ ಸಮಿತಿಯನ್ನು ಸಮ್ಮೇಳನ ಆಯ್ಕೆ ಮಾಡಿತು. ನೂತನ ಜಿಲ್ಲಾ ಕಾರ್ಯದರ್ಶಿಯಾಗಿ ಕೆ. ಬಸವರಾಜು ಆಯ್ಕೆಯಾದರು. ಸಮ್ಮೇಳನದಲ್ಲಿ ಎಸ್. ವರಲಕ್ಷ್ಮಿ ಉಪಸ್ಥಿತರಿದ್ದು, ಮಾರ್ಗದರ್ಶನ ನೀಡಿದರು.

ಬೆಲೆ ಏರಿಕೆ ಭ್ರಷ್ಟಾಚಾರ ವಿರೋಧಿಸಿ, ಮೈಸೂರು – ಬೆಂಗಳೂರು ಜೋಡಿ ರೈಲು ಮಾರ್ಗ ಕೆಲಸವನ್ನು ಶೀಘ್ರವಾಗಿ ಮುಗಿಸಲು ತಂಬಾಕು, ಹತ್ತಿ, ಕಬ್ಬು, ರೇಷ್ಮೆ ಬೆಳೆಗಳಿಗೆ ಲಾಭದಾಯಕ ಬೆಲೆ ನೀಡಲು ಕಾರ್ಮಿಕ ಕಾನೂನು ಸಮರ್ಪಕ ಜಾರಿಗೆ ಒತ್ತಾಯಿಸಿ, 2006 ರ ಅರಣ್ಯ ಹಕ್ಕು ಕಾಯ್ದೆಯ ಸಮರ್ಪಕ ಜಾರಿಗೆ ಮತ್ತು ಆದಿವಾಸಿ ಹಾಡಿಗಳಿಗೆ ಮೂಲ ಸೌಲಭ್ಯಕ್ಕೆ ಒತ್ತಾಯಿಸಿ ದಲಿತ ಮತ್ತು ಮಹಿಳೆಯರು ಮೇಲಿನ ದೌರ್ಜನ್ಯ ವಿರೋಧಿಸಿ ಸೇರಿದಂತೆ ಸುಮಾರು 22 ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು.

ನೂತನ ಜಿಲ್ಲಾ ಸಂಘಟನಾ ಸಮಿತಿ :

ಕೆ. ಬಸವರಾಜು ಕಾರ್ಯದರ್ಶಿ, ಕಾರ್ಯದರ್ಶಿ ಮಂಡಳಿ ಸದಸ್ಯರು– ಜಗನ್ನಾಥ್ ವಿ., ಬಸವರಾಜು , ಜಯರಾಂ, ವಿಜಯ ಕುಮಾರ್, ಸದಸ್ಯರು ಬಾಲಾಜಿ ರಾವ್, ಹೆಚ್.ಎಸ್. ಜಗದೀಶ್, ಸೋಮಶಂಕರ್ , ಸುನಂದ, ಜಗದೀಶ್ ಸೂರ್ಯ .

ಸಂಧ್ಯಾ ಕಾಲದಲ್ಲಿ ಸಿಗದ ಸಂಧ್ಯಾ ಸುರಕ್ಷೆ : ಸರ್ಕಾರದ ವೈಫಲ್ಯ

ಕರ್ನಾಟಕ ಸರಕಾರದ ಕಂದಾಯ ಇಲಾಖೆಯ ಅಸಮರ್ಪಕ ಸಮೀಕ್ಷೆ ಕಾರ್ಯದಿಂದಾಗಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಯೋಜನೆಗಳ ನೈಜ ಫಲಾನುಭವಿಗಳು ಸೌಲಭ್ಯ ವಂಚಿತರಾಗುವಂತಾಗಿದೆ. ಸಂಧ್ಯಾಕಾಲದಲ್ಲಿ (ಇಳಿ ವಯಸ್ಸಿನಲ್ಲಿ) ದುಡಿಯಲು ತಾಕತ್ತಿಲ್ಲದೇ ಸರ್ಕಾರ ನೀಡುವ ವೃದ್ಧಾಪ್ಯ ವೇತನ ಸಂಧ್ಯಾ ಸುರಕ್ಷಾ, ವಿಧವಾ ವೇತನ, ಅಂಗವಿಕಲ ವೇತನ ಪಡೆದು ಜೀವನ ನಿರ್ವಹಣೆ ಮಾಡುತ್ತಿದ್ದ ಅನೇಕರಿಗೆ ಕಳೆದ 5–6 ತಿಂಗಳಿಂದ ಸರ್ಕಾರದ ಸಾಮಾಜಿಕ ಭದ್ರತಾ ಸೌಲಭ್ಯ ನೆರವು ಸ್ಥಗಿತಗೊಂಡಿದೆ. ಹೊಸ ಅರ್ಜಿಗಳನ್ನು ಸ್ವೀಕರಿಸದೆ ಸತಾಯಿಸಲಾಗುತ್ತಿದೆ.

ಸರ್ಕಾರಿ ಯೋಜನೆಗಳ ನೈಜ ಫಲಾನುಭವಿಗಳ ಪರಿಷ್ಕೃತ ಪಟ್ಟಿ ಸಿದ್ಧಪಡಿಸಲು ರಾಜ್ಯ ಸರಕಾರ ನಿರ್ದೇಶನದಂತೆ ಕಂದಾಯ ಇಲಾಖೆ ಮಾರ್ಚನಿಂದ ಜೂನ್‌ವರೆಗೆ ಫಲಾನುಭವಿಗಳ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆ ವೇಳೆ ಅನೇಕ ಫಲಾನುಭವಿಗಳ ಹೆಸರು ಪಟ್ಟಿಯಿಂದ ಕೈಬಿಟ್ಟು ಹೋಗಿದೆ. ಮೊದಲಿನ ವಾಸಸ್ಥಳದಿಂದ ಸ್ಥಳಾಂತರಗೊಂಡಿರುವುದು, ಆದಾಯ ಮಿತಿ ಹೆಚ್ಚಳ, ಕೆಲವರ ನಿಧನದಿಂದಾಗಿ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಕಂದಾಯ ಇಲಾಖೆ ಹೇಳುತ್ತದೆ. ಈ ಸಮೀಕ್ಷೆ ಅಂತಿಮಗೊಳಿಸದೆ ಹೊಸ ಅರ್ಜಿ ಸ್ವೀಕರಿಸುವಂತಿಲ್ಲ ಎಂದು ಹೇಳುತ್ತಾರೆ. ಆದರೆ ಕೆಲವು ಅಧಿಕಾರಿಗಳು ಗ್ರಾಮಗಳಿಗೆ ತೆರಳದೆ, ಮನೆ ಭೇಟಿ ಮಾಡದೆ ಕಛೇರಿಯಲ್ಲೇ ಕುಳಿತು ಪಟ್ಟಿ ತಯಾರಿಸುವುದು ಬೆಳಕಿಗೆ ಬಂದಿದೆ.



ಕಾರವಾರ ತಹಶೀಲ್ದಾರ್ ಕಛೇರಿ ಎದುರು ಪ್ರತಿಭಟನೆ

ಪ್ರತಿಯೊಂದು ತಾಲೂಕಿನಲ್ಲಿ ಕನಿಷ್ಠ 3,500 ರಿಂದ 4 ಸಾವಿರದವರೆಗೆ ಜನರು ಈ ಯೋಜನೆಯ ಸೌಲಭ್ಯ ಪಡೆಯುತ್ತಿದ್ದು ಹೊಸ ಸಮೀಕ್ಷೆ ನಂತರ ಸಾವಿರದಿಂದ ಒಂದೂವರೆ ಸಾವಿರದವರೆಗೆ ಜನರ ಕಡಿತ ಮಾಡಲಾಗಿದೆ. ಅರ್ಹರೆಂದು ಗುರುತಿಸಿದವರಿಗೂ ನೆರವು ಸಿಗುತ್ತಿಲ್ಲ. 70 – 80ರ ಇಳಿವಯಸ್ಸಿನಲ್ಲಿ ಕಳೆದ 10–12 ವರ್ಷಗಳಿಂದ ಬರುತ್ತಿರುವ ವೇತನ 4–5 ತಿಂಗಳಿಂದ ನಿಂತಿರುವುದರಿಂದ ಕಂಗಾಲಾಗಿದ್ದಾರೆ. ತಿಂಗಳ ಔಷಧಿ ಖರ್ಚಿಗೆ ನಾಲ್ಕು ನೂರು ರೂಪಾಯಿ



ಅನುಕೂಲವಾಗುತ್ತಿತ್ತು ಎಂದು ಶಿರಸಿಯ ಬಸಮ್ಮಾ (80) ಅಜ್ಜಿ ಹೇಳುತ್ತಾಳೆ. ನಮ್ಮಂಥ ಬಡವರಿಗೆ ಈ ಪರಿಸ್ಥಿತಿ ಬಂದಿದೆ. ಮಗಳು ಕೂಲಿ ಕೆಲಸ ಮಾಡಿ ಬಂದ ಹಣದಿಂದ ಕಷ್ಟದಲ್ಲಿ ಬದುಕುತ್ತಿದ್ದೇನೆ ಎನ್ನುತ್ತಾಳೆ ಬಸಮ್ಮಾ. ಭಟ್ಕಳದಲ್ಲಿ ಬದುಕಿದ್ದವರನ್ನು ಸತ್ತವರ ಪಟ್ಟಿಗೆ ಸೇರಿಸಲಾಗಿದೆ. ಹಲವಾರು ಅದ್ವಾನಗಳನ್ನು ಪರಿಷ್ಕೃತ ಪಟ್ಟಿಯಲ್ಲಿ ನೋಡಬಹುದು.

'ರಾಜ್ಯ ಸರ್ಕಾರದಲ್ಲಿ ಹಣ ಇಲ್ಲವಾಗಿದ್ದು, ಈ ರೀತಿ ಬೇರೆ ಬೇರೆ ಮಾರ್ಗಗಳಿಂದ

ಪುಟ 11ಕ್ಕೆ



ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

ಅಮ್ಮನ ಸೀರೆ ಮಡಿಸಲಾರೆ, ಅಪ್ಪನ ದುಡ್ಡು ಎಣಿಸಲಾರೆ....

ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಗೆ ನವೆಂಬರ್ 19 ರ ರಾತ್ರಿ ಬೆಂಕಿ ಬಿದ್ದಿದೆ. ಅದೂ ಯಾವ ವಿಭಾಗದಲ್ಲಿ ಅಂತೀರಿ ? 1500 ಕೋಟಿರೂಪಾಯಿಗಳ ಬೃಹತ್ ನಕಲಿ ಬಿಲ್ ಹಗರಣದ ತನಿಖೆ ನಡೆಸುತ್ತಿರುವ 'ಬೆಂಗಳೂರು ಮಹಾನಗರ ಕಾರ್ಯಾಪಡೆ' (ಬಿಎಂಟಿಎಫ್)ಯ ಪೋಲಿಸ್ ಠಾಣೆ ಇರುವ ಭಾಗಕ್ಕೆ ಬೆಂಕಿ ಬಿದ್ದಿದೆ. ಅಂದರೆ ಇದು ಜಾಣ ಬೆಂಕಿ. ಇಲ್ಲೆಲ್ಲೋ ಹೊತ್ತಿಕೊಂಡು ಏನೇನನ್ನೋ ಸುಡುವಂತಹದ್ದಲ್ಲ. 'ನಿರ್ಣಾಯಕವಾದದ್ದನ್ನೇ ಸುಡುವಂತ ಉದ್ದೇಶದ್ದು.

ಅಮ್ಮನ ಸೀರೆ ಮಡಿಸೋಕಾಗಲ್ಲ... ಅಪ್ಪನ ದುಡ್ಡು ಎಣಿಸೋಕಾಗಲ್ಲ ಅಂತ ಒಂದು ಒಗಟಿದೆ. ಆಕಾಶ, ನಕ್ಷತ್ರಗಳ ಬಗೆಗಿನ ಒಗಟು ಅದು. ಹಾಗೇ ಈಗ ಬೆಂಗಳೂರು ಮಹಾನಗರ ಪಾಲಿಕೆ ಹಗರಣಗಳನ್ನು ತನಿಖೆ ಮಾಡೋದು ಇರಲಿ, ಎಣಿಸೋಕು ಅಗಲ್ಲ ಅಂತ ನಾವು ಒಂದು ಆಧುನಿಕ ಒಗಟು ಸೃಷ್ಟಿಸಿದರೂ ಅದರಿಂದ ಯಾವ ತಪ್ಪು ಮಾಡಿದಂತಾಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಸ್ಫೋಟಗೊಂಡ ಬಯಲಾದ ಮಹಾನಗರಪಾಲಿಕೆಯ ಹಗರಣಗಳ ಸಂಕ್ಷಿಪ್ತ ವಿವರಣೆ ಇರುವ ಒಂದು ಬರಹವನ್ನು ಪತ್ರಿಕೆ ಪ್ರಕಟಿಸಬೇಕಾದರೂ ಒಂದು ವಿಶೇಷ ಪುರವಣಿಯನ್ನೇ ತರಬೇಕಾದೀತು. ಅಂತಹ ಅಗಾಧ 'ಸಾಧನೆ' ಪಾಲಿಕೆಯದ್ದು. ಸಾಲು ಸಾಲು ಜೈಲುಪಾಲಾಗುತ್ತಿರುವ ರಾಜ್ಯ ಬಿಜೆಪಿ ಸರ್ಕಾರದ ಸಚಿವ ಸಂಪುಟದ ಸಚಿವ ಮಹಾಶಯರ ಬೃಹತ್ 'ಸಾಧನೆ'ಗಳಿಗೇ ಸೆಡ್ಡು ಹೊಡೆದು ಪೈಪೋಟಿ ನೀಡಬಲ್ಲ ಹೆಚ್ಚುಗಾರಿಕೆ ಈ ಮಹಾನಗರಪಾಲಿಕೆಗೆ ಇದೆ ಎಂದರೆ ನೀವೇ ಊಹಿಸಿಕೊಳ್ಳಿ. ಬೆಂಗಳೂರು ಮಹಾನಗರದ ಜನತೆ ತುಂಬಿ ಕೊಟ್ಟ ಹಣ, ರಾಜ್ಯ ಸರ್ಕಾರದ ಖಜಾನೆಯಿಂದ ಹರಿದು ಬಂದ ಮಾತ್ರವಲ್ಲದೇ ಬೆಂಗಳೂರು ನಗರದ ಅಭಿವೃದ್ಧಿ ಯೋಜನೆಗಳಿಗೆಂದು ಕೇಂದ್ರ ಸರ್ಕಾರದಿಂದ ಬಂದ ಅನುದಾನಗಳಲ್ಲೂ ಕಾಮಗಾರಿಗಳಲ್ಲೂ ಮಹಾ ಭ್ರಷ್ಟಾಚಾರಗಳ ಸರಣಿಯನ್ನು ಸೃಷ್ಟಿಸಿರುವ 'ಹೆಮ್ಮೆ' ಈ ಪಾಲಿಕೆಗೆ ಇದೆ. ಆದರಲ್ಲೂ ಕಳೆದ ಮೂರು ವರ್ಷಗಳ ಬಿಜೆಪಿ ಸರ್ಕಾರದ ಅವಧಿಯನ್ನು ಹಗರಣಗಳ ಲೆಕ್ಕಕ್ಕೆ 'ಸುವರ್ಣ ಯುಗ' ಅಂತ ಕರೆದರೂ ಅದರಲ್ಲೂ ಏನೂ ತಪ್ಪಾಗುವುದಿಲ್ಲ.

ಒಂದು ಸೈಜುಗಲ್ಲನ್ನೂ ಇಡದೆ ಬೃಹತ್ ಕಾಂಪೌಂಡ್, ಕಟ್ಟಡ ಕಟ್ಟಿದ ಬಿಲ್ಲು ಎತ್ತಿ ನುಂಗುವುದು, ಕಟ್ಟಡ ನಿರ್ಮಾಣದಲ್ಲಿ ಬಳಕೆಯಾಗಬೇಕಾದ ಸಿಮೆಂಟು, ಕಬ್ಬಿಣಗಳನ್ನೇ ದಾರಾಳ ಮರಳು ಇತ್ಯಾದಿ ಬಳಸಿ 'ಮರಳುಗಾರಿಕೆ ನಡೆಸುವುದು....ಇತ್ಯಾದಿ ಇತ್ಯಾದಿ ಕಲೆಗಾರಿಕೆಯನ್ನು ಮಹಾನಗರಪಾಲಿಕೆಯಿಂದಲೇ



ಕಲಿಯಬೇಕು. ಹಿಂದೊಮ್ಮೆ ಬೆಂಗಳೂರು ಉತ್ತರ ವಿಭಾಗದ ಕೋಟಿ, ಕೋಟಿ ಅಕ್ರಮಗಳ ಕುರಿತ ತನಿಖೆ ನಡೆಯುತ್ತಿರುವಾಗ ಸಂಬಂಧಿಸಿದ ಕಡತಗಳಿಗೆ ಬೆಂಕಿ ಬಿದ್ದು ಅವು ಸುಟ್ಟು ಹೋದ ಪ್ರಕರಣ ಇದೆ. ಅದರಲ್ಲಿ ಈ ವರೆಗೂ ಯಾರಿಗೂ ಶಿಕ್ಷೆ ಆಗಿಲ್ಲ. ಇದರಲ್ಲಿ ಏನೂ ಆಶ್ಚರ್ಯವಿಲ್ಲ. ಏಕೆಂದರೆ ಈಗ ನಮ್ಮ ರಾಜ್ಯದಲ್ಲಿರುವುದು ಬಿಜೆಪಿ ಸರ್ಕಾರದ ಆಡಳಿತ. ವಿಧಾನ ಸೌಧದ ಪಕ್ಕದಲ್ಲಿರುವ ಲೋಕಾಯುಕ್ತ ಕಛೇರಿಗೆ ಇನ್ನೂ ಬೆಂಕಿ ಬೀದ್ದಿಲ್ಲವಲ್ಲ. ಅದೇ ಒಂದು ಸಂತೋಷದ ವಿಷಯ. ಅಲ್ಲವೇ ?

ಎಂದು ಬರುವರೋ ಲೋಕಾಯುಕ್ತರು ?

ಕರ್ನಾಟಕ ರಾಜ್ಯದ ಲೋಕಾಯುಕ್ತ ಹುದ್ದೆ ಖಾಲಿ ಬಿದ್ದಿದೆ. ರಾಜ್ಯ ಬಿಜೆಪಿ ಪಕ್ಷ ಮತ್ತು ಸರ್ಕಾರದ ಸಚಿವರ ಸಂತೋಷ ಉಕ್ಕಿ ಹರಿದು ಕೋಡಿ ಬಿದ್ದಿದೆ. ಈ ಸ್ಥಾನಕ್ಕೆ ಸೂಚಿಸಲಾದ ನ್ಯಾ. ಬನ್ನೂರು ಮಠರ ಹೆಸರೂ ಈಗ ವಿವಾದಾಸ್ಪದವಾಗಿದೆ. ಬನ್ನೂರು ಮಠರನ್ನು ಒಪ್ಪಲು ರಾಜ್ಯಪಾಲರು ತಯಾರಿಲ್ಲ. ಬನ್ನೂರು 'ಮಠ'ರನ್ನು ಬಿಡಲು ಬಿಜೆಪಿ ಸರ್ಕಾರ ತಯಾರಿಲ್ಲ. ಒಟ್ಟಿನಲ್ಲಿ ಲೋಕಾಯುಕ್ತರ ಜಾಗಕ್ಕೆ ಯಾರಾದರೂ 'ಮಠ'ರೇ ಬರಬೇಕು. ಸದಾನಂದ 'ಗೌಡ'ರ ಹೆಸರಿನ ಯಡಿಯೂರಪ್ಪನವರ

ದರ್ಬಾರ್‌ನಲ್ಲಿ ಯಾರು 'ಯಾರನ್ನೋ' ಲೋಕಾಯುಕ್ತ ಜಾಗಕ್ಕೆ ತಂದು ಹಗ್ಗ ಕೊಟ್ಟು ಕೈ ಕಟ್ಟಿಸಿಕೊಳ್ಳುವಂತಹ ಕೆಲಸಕ್ಕೆ ಕೈ ಹಾಕುವಷ್ಟು ದಡ್ಡರೇನಲ್ಲ ಬಿಜೆಪಿಯವರು.

ಒಟ್ಟಿನಲ್ಲಿ ಈ ಬಿಜೆಪಿ ಸರ್ಕಾರದ ಅಂತರಾಳದ ಆಲೋಚನೆಗಳ ಮಿಡಿತವನ್ನು ಗಮನಿಸಿ ನಾವು ಹೀಗೆ ಹೇಳಬಹುದು. ಸರ್ಕಾರವು ಗಣಿ ಅಕ್ರಮಗಳ ಕುರಿತ ವರದಿಯ ಬಗ್ಗೆ ಲೋಕಾಯುಕ್ತದಿಂದ ಕೇಳಿರುವ ಸ್ಪಷ್ಟನೆಗಳು ಎಂದು ಬಾರದಿರಲಿ. ರಾಜ್ಯ ಜನರ 'ನೆಮ್ಮದಿ ಕೆಡಿಸುವ' ಗಣಿ ಅಕ್ರಮಗಳ ಕುರಿತ ತನಿಖಾ ವರದಿಯು ನೆನೆಗುದಿಗೆ ಬೀಳಲಿ. ನೆನೆದು ನೆನೆದು ಹಾಗೇ ಕರಗಿ ಹೋಗಲಿ.

ಮುಂದುವರಿದ ರೈತ ಆತ್ಮಹತ್ಯೆಗಳ ಸರಣಿ

ರಾಜ್ಯ ಬಿಜೆಪಿ ಸರ್ಕಾರದ ಮಂತ್ರಿಗಳು, ಮುಖ್ಯಮಂತ್ರಿಗಳಾದಿಯಾಗಿ ಬಳ್ಳಾರಿ ಉಪ ಚುನಾವಣೆಯ ಸಂಭ್ರಮದಲ್ಲಿದ್ದಾರೆ. ಯಡಿಯೂರಪ್ಪ (ಮರೆಗೆ) ಹೋದರೂ ಸದಾನಂದ ಗೌಡ ಬಂದರು ಆದರೆ ರೈತರ ಆತ್ಮಹತ್ಯೆಗಳ ಸರಣಿ ದುರ್ಘಟನೆ, ದುರಂತಗಳಿಗೆ ಕೊನೆಯೇ ಇಲ್ಲವಾಗಿದೆ. ಬಿಜೆಪಿ ಮುಖಂಡರುಗಳು, ಸಚಿವರುಗಳು, ಅತ್ತ ಜೈಲು, ಬೈಲು, ಮೀಟಿಂಗು, ರೆಸಾರ್ಟು, ಹೋಟೆಲು, ಮಠ, ಮಂದಿರ ಅಂತ ಓಡಾಡುತ್ತಿದ್ದರೆ ಇತ್ತ ಅನ್ನದಾತ ರೈತ ಸದ್ದಿಲ್ಲದೇ ಸಾವಿಗೆ ಶರಣಾಗುವ ವಿಷಾದನೀಯ ಪ್ರಕರಣಗಳು ಏರುತ್ತಲೆ ಇವೆ. ನವೆಂಬರ್ ಮೊದಲ ವಾರದಲ್ಲಿ ಮಂಡ್ಯ ತಾಲ್ಲೂಕಿನ ದೊಡ್ಡ ಬಾಣಸವಾಡಿಯ ರೇಷ್ಮೆ ರೈತ ವಿಷ ಕುಡಿದು ಪ್ರಾಣ ಕಳೆದುಕೊಂಡಿದ್ದರೆ ತುಮಕೂರು ಜಿಲ್ಲೆಯಲ್ಲಿ ಕಳೆದ ಎರಡು ತಿಂಗಳಲ್ಲಿ ಒಟ್ಟು ಏಳು ಜನ ರೈತರು ಪ್ರಾಣ ಕಳೆದುಕೊಂಡ ಆಘಾತಕಾರಿ ಸುದ್ದಿ ವರದಿಯಾಗಿದೆ.

ತುಮಕೂರು ಜಿಲ್ಲೆಯ ಕೃಷಿ ಇಲಾಖೆಯ ಜಂಟಿ ನಿರ್ದೇಶಕರೇ ಕೊಟ್ಟಿರುವ ಅಧಿಕೃತ ಮಾಹಿತಿಯಂತೆ 2003-04 ರಿಂದ 2011-12 ರ ಸಾಲಿನ ಅಕ್ಟೋಬರವರೆಗೆ ತುಮಕೂರು ಜಿಲ್ಲೆಯಲ್ಲಿ 121 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರಲ್ಲಿ ಬಹುಪಾಲು ಜನರು ಸಣ್ಣ ಮತ್ತು ಮಧ್ಯಮ ರೈತರು. ಹೀಗೆ ಸತ್ತ ರೈತರಲ್ಲಿ ಕೇವಲ 68 ಸಾವಿನ ಪ್ರಕರಣಗಳಲ್ಲಿ ಮಾತ್ರ ಅವಲಂಬಿತರಿಗೆ ಸರ್ಕಾರದ ಪರಿಹಾರ ಸಿಕ್ಕಿದೆ. ಉಳಿದವರಿಗೆ ಇಲ್ಲ. ಏಕೆಂದರೆ ಅವರು ಕೃಷಿ ಸಾಲವನ್ನು ತೆಗೆದು ಕೊಂಡಿದ್ದುದು ಖಾಸಗಿ ಲೇವಾದೇವಿದಾರರಿಂದ. ಬ್ಯಾಂಕ್ ಗಳಿಂದಲ್ಲ. ಅವರೇ ಕೃಷಿ ಮಾಡುತ್ತಿದ್ದರೂ ಭೂಮಿಯು ಅವರ ಹೆಸರಿನಲ್ಲಿ ಇಲ್ಲ.

ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶ ಏನೆಂದರೆ ಕಳೆದ ಐದು ವರ್ಷಗಳಿಂದ ರಾಜ್ಯದಲ್ಲಿ ಬಿಜೆಪಿಯೂ ಒಂದಲ್ಲ ಒಂದು ರೀತಿಯಲ್ಲಿ ಅಧಿಕಾರದಲ್ಲಿ ಇದ್ದುಕೊಂಡೇ ಬಂದಿದೆ. ಮೂರುವರೆ ವರ್ಷಗಳ ಹಿಂದೆಯಂತೂ ಬಿಜೆಪಿ ಅಧಿಕಾರಕ್ಕೆ ಬರುವಾಗ ರೈತರ ಉದ್ಧಾರದ ಭರವಸೆಗಳ ಮಳೆಯನ್ನೇ ಸುರಿಸಿತು. ಅಧಿಕಾರಕ್ಕೆ ಬಂದ ಮೇಲೆ ರೈತರ ಹೆಸರಿನಲ್ಲಿಯೇ ಪ್ರಮಾಣ ವಚನ ಸ್ವೀಕರಿಸಿತು. ಆದರೆ ಅನ್ನದಾತರ ಆತ್ಮಹತ್ಯೆ ತಡೆಯಲು ಏನೇನು ಮಾಡಿತು ಎಂದರೆ ಅದಕ್ಕೆ ಉತ್ತರ ಏರುತ್ತಿರುವ ರೈತರ ಆತ್ಮಹತ್ಯೆಗಳಲ್ಲೇ ಇದೆ.

ಬರೇ 8,829 ಕುಟುಂಬಗಳಿಗೆ ಮಾತ್ರ 100 ದಿನದ ಕೆಲಸ

ಸಮರ್ಪಕವಾಗಿ ಜಾರಿಯಾದರೆ ಗ್ರಾಮೀಣ ನಿರುದ್ಯೋಗ, ಗ್ರಾಮೀಣ ಬಡತನ ಕಡಿಮೆ ಮಾಡುವ ನಿಟ್ಟಿನಲ್ಲಿ ಒಂದು ಪರಿಣಾಮಕಾರಿ ಪರಿಹಾರವಾಗಬಹುದಾದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರಾಜ್ಯದಲ್ಲಿ ಹೇಗೆ ಜಾರಿಯಾಗಿದೆ ನೋಡಿ.

ಈ ವರ್ಷದಲ್ಲಿ ಮಾರ್ಚ್‌ನಿಂದ ಇಲ್ಲಿಯವರೆಗೆ ದೇಶದಲ್ಲಿ ಒಟ್ಟು 6.9 ಲಕ್ಷ ಕುಟುಂಬಗಳಿಗೆ 100 ದಿನಗಳ ಉದ್ಯೋಗ ನೀಡಲಾಗಿದೆ. ರಾಜ್ಯದಲ್ಲಿ ಕೇವಲ 8,829 ಕುಟುಂಬಗಳಿಗೆ ಮಾತ್ರವೇ 100 ದಿನಗಳ ಉದ್ಯೋಗವನ್ನು ನೀಡಲಾಗಿದೆ. ಎನ್ನುತ್ತಿವೆ ಅಂಕಿಸಂಖ್ಯೆಗಳು. ಇದರಲ್ಲಿ ಯಾವ ಕಾಮಗಾರಿಯನ್ನೂ ನಡೆಸದೇ ಬರೀ ಕಾಗದದ ಮೇಲೆ ನಡೆಸಲಾದ ಕಾಮಗಾರಿಗಳ ಪಾಲು ಎಷ್ಟು? ಯಂತ್ರೋಪಕರಣ ಬಳಸಿ ಕೆಲಸ ಮಾಡಿ ಕೂಲಿಕಾರರ ಹೆಸರಿನಲ್ಲಿ ಹಣ ಎತ್ತಿದ್ದು ಎಷ್ಟು [illegible] ಕೇಳದೆ 'ಉದಾರ'ವಾಗಿ [illegible] ಅಬ್ಬಬ್ಬ ! ಎಷ್ಟೊಂದು ತಾತ್ಸಾರ ಗ್ರಾಮೀಣ ಬಡವರ ಬದುಕಿನ ಬಗೆಗೆ ಈ ಬಿಜೆಪಿ ಸರ್ಕಾರಕ್ಕೆ!!

*

ಸಿಗದ ಸಂಧ್ಯಾ ಸುರಕ್ಷೆ ....

ಪುಟ 10 ರಿಂದ

ಬಡವರಿಗೆ ನೀಡುವ ಸೌಲಭ್ಯವನ್ನು ರದ್ದುಗೊಳಿಸಲಾಗುತ್ತಿದೆ. ಇದರಿಂದ ನೈಜ ಫಲಾನುಭವಿಗಳು ತೊಂದರೆ ಅನುಭವಿಸುವಂತಾಗಿದೆ' ಎನ್ನುವುದು ಕೆಲವರ ಅಭಿಪ್ರಾಯ. ಅಧಿಕಾರಿಗಳ ಬೇಜವಬ್ದಾರಿ ಎನ್ನುವುದು ಇದು ಕೆಲವರ ಅಭಿಪ್ರಾಯ. ಒಟ್ಟಾರೆ ರಾಜ್ಯ ಬಿಜೆಪಿ ಸರ್ಕಾರದ ವಿಫಲತೆ, ಆಡಳಿತ ವೈಫಲ್ಯ ಎದ್ದು ಕಾಣುತ್ತದೆ

ಕರ್ನಾಟಕ ರಾಜ್ಯ ರೈತ ಸಂಘ ಕಾರವಾರ ತಾಲೂಕ ಸಮಿತಿ ನವೆಂಬರ 5 ರಂದು ಹಿರಿಯ ನಾಗರಿಕರು, ವಿಧವೆಯರು, ಅಂಗವಿಕಲರಿಂದ ತಹಶೀಲ್ದಾರ ಕಛೇರಿ ಎದುರು ಪ್ರತಿಭಟನೆ ಸಂಘಟಿಸಿತ್ತು. ಹಿಂದಿನ ಫಲಾನುಭವಿಗಳಿಗೆ ಕೂಡಲೇ ವೇತನ ಬಿಡುಗಡೆಯಾಗಬೇಕು. ಹೊಸಬರಿಂದ ಅರ್ಜಿ ಸ್ವೀಕರಿಸಬೇಕೆಂದು ಒತ್ತಾಯಿಸಲಾಯಿತು.

ನೂರಾರು ಹಿರಿಯ ನಾಗರಿಕರು, ವಿಧವೆಯರು, ಅಂಗವಿಕಲರು ಪಾಲ್ಗೊಂಡಿದ್ದ ಹೋರಾಟದ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಕಾರವಾರ ತಾಲೂಕ ಸಮಿತಿ ಅಧ್ಯಕ್ಷರಾದ ವಿಷ್ಣು ಶಂಕರ ನಾಯ್ಕ, ಕಾರ್ಯದರ್ಶಿ ಶ್ಯಾಮನಾಥ ನಾಯ್ಕ ಮುಂತಾದವರು ವಹಿಸಿದ್ದರು.

– ಶಾಂತಾರಾಮ ನಾಯಕ

ರೈತರ ಬದುಕಿನ ಮೇಲೆ ಬುಲ್ಡೋಜರ್

ಪುಟ 9 ರಿಂದ

ರಾಜ್ಯದಲ್ಲಿ [illegible]. ಗೃಹ ಮಂಡಲಿಯಲ್ಲಿ ಇರುವ ಈ ಸೌಲಭ್ಯವನ್ನು ಕೈಗಾರಿಕೆ ಮತ್ತಿತರ ಕ್ಷೇತ್ರಗಳಿಗೂ ವಿಸ್ತರಿಸಬೇಕು.

11. 'ಅಭಿವೃದ್ಧಿ ಯೋಜನೆ'ಗಾಗಿ ಭೂಮಿಯನ್ನು ಕಳೆದುಕೊಳ್ಳುವ ರೈತರ ಪಾಲಿನ 'ಅಭಿವೃದ್ಧಿ ಪಡಿಸಲಾದ ಭೂಮಿ' ಅಥವಾ ಪಡೆದುಕೊಳ್ಳುವ 'ಪರಿಹಾರದ ಹಣ'ವನ್ನು, ಆಯಾಯ ಯೋಜನೆಗಳ ಷೇರುಗಳನ್ನಾಗಿ ಪರಿಗಣಿಸಲು ಅವಕಾಶವಿರಬೇಕು ಇದಕ್ಕಾಗಿ ರಾಜ್ಯ ಸರ್ಕಾರ ಒಂದು ಮೂಲನಿಧಿಯನ್ನು ಮತ್ತು ಕೋಶವನ್ನು ಸ್ಥಾಪಿಸಬೇಕು. ಮತ್ತು ಆ ಮೂಲಕ ಷೇರು ಮತ್ತು ಡಿಬೆಂಚರ್‌ಗಳನ್ನು ನಿಭಾಯಿಸಿ, ಅವರಿಗೆ ತಿಂಗಳು/ವಾರ್ಷಿಕ ಶಾಶ್ವತ ವರಮಾನ ಬರುವಂತೆ ಕ್ರಮ ವಹಿಸಬೇಕು. ತಜ್ಞರ ಸಮಿತಿಯು ಈ ಷೇರು ಮತ್ತು ಡಿಬೆಂಚರುಗಳನ್ನು ಹಂಚಬೇಕು. ಭಾದೆಗೊಳಗಾದವರು ಯೋಜನೆಯ ಲಾಭದಲ್ಲಿ ಪಾಲುದಾರರಾಗಬೇಕೆ ಹೊರತು; ನಷ್ಟದಲ್ಲಿ ಅವರು ಜವಾಬ್ದಾರರಾಗಬೇಕಿಲ್ಲ.
12. ಗ್ರಾಮ ಗ್ರಾಮಗಳೇ ಭೂ ಸ್ವಾಧೀನಕ್ಕೆ ಒಳಗಾಗುವ ಸಂದರ್ಭಗಳಲ್ಲಿ ಕೃಷಿ ಕೂಲಿಕಾರರಿಗೆ, ಕಸುಬುದಾರರಿಗೆ ಕನಿಷ್ಠ 4 ವರ್ಷಗಳ ವೇತನ, ಕನಿಷ್ಟ ವೇತನದೊಂದಿಗೆ ವರ್ಷದಲ್ಲಿ 200 ದಿನ ಕೆಲಸ ಖಾತ್ರಿ ಮಾಡಬೇಕು.
13. 'ಯೋಜನೆ'ಗಾಗಿ ಭೂಮಿ ಕಳೆದುಕೊಳ್ಳುವರಿಗೆ ಸಿಗಬೇಕಾದ ಪರಿಹಾರ ಹಣ, ಇತ್ಯಾದಿ ಪುನರ್ ವಸತಿ ಸೌಲಭ್ಯಗಳ ನಂತರವೇ ಯೋಜನೆಯ ಕೆಲಸ ಆರಂಭವಾಗಬೇಕು.
14. 'ಯೋಜನೆ'ಗಾಗಿ ಭೂ ಸ್ವಾಧೀನದ ಪ್ರಕ್ರಿಯೆ ಗರಿಷ್ಠ 2 ವರ್ಷದೊಳಗೆ ಮುಕ್ತಾಯವಾಗಬೇಕು. ಇಲ್ಲವಾದಲ್ಲಿ ಈ ಕಾಲಾವಧಿಯಲ್ಲಿ ಆಗಿರುವ ನಷ್ಟದೊಂದಿಗೆ ಭೂಮಿಯನ್ನು ಮಾಲೀಕರಿಗೆ ವಾಪಸು ಮಾಡಬೇಕು.
15. ಭೂ ಸ್ವಾಧೀನಕ್ಕೆ ಸಂಬಂಧಿಸಿ ವಿವಾದಗಳನ್ನು ತ್ವರಿತಗೊಳಿಸಲು ಪ್ರತ್ಯೇಕ ನ್ಯಾಯಪೀಠ ಸ್ಥಾಪಿಸಬೇಕು.
16. **ತುರ್ತು ಪರಿಸ್ಥಿತಿ ಅಧಿಕಾರ :** ತುರ್ತು ಪರಿಸ್ಥಿತಿ ಕಲಂ ಅಡಿಯಲ್ಲಿ ಯಾವುದೇ ವಿಚಾರಣೆ ಮತ್ತು ಆಕ್ಷೇಪಣೆಗಳಿಲ್ಲದೆ ಮತ್ತು ಆಸಕ್ತ ಜನರ ಅಳಲು ಕೇಳಲು ಅವಕಾಶ ನೀಡದೆ ಭೂಸ್ವಾಧೀನಗೊಳಿಸಬಹುದಾಗಿದೆ. ಇಂತಹ ಕಾಯಿದೆಯ ದುರ್ಬಳಕೆಯನ್ನು ತಡೆಯಲು ಈ ಅಧಿನಿಯಮದಲ್ಲಿ ಸಾಕಷ್ಟು ಸುರಕ್ಷತೆಯನ್ನು ನೀಡಬೇಕು. ಸೆಕ್ಷನ್ 17(1) ನ್ನು ಅಳಿಸಿ ಹಾಕಬೇಕು.

ಕೃಷಿ ಭೂಮಿಯ ಮೇಲೆ ಬಹುರಾಷ್ಟ್ರೀಯ ಕಂಪನಿಗಳ ಕಣ್ಣು

ಪುಟ 16 ರಿಂದ

ಸಮಸ್ಯೆ ಬಿಗಡಾಯಿಸಿತು. 100 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರು. ಕಾಫೀ ಮಂಡಳಿ, ಮೆಣಸು ಮಂಡಳಿಗಳು ಮಧ್ಯಪ್ರವೇಶ ಮಾಡಲಿಲ್ಲ. ಇದೆಲ್ಲವನ್ನು ಮಾಡಬಾರದು, ಎಲ್ಲವನ್ನು ಮಾರುಕಟ್ಟೆಗೆ ಬಿಟ್ಟು ಬಿಡಬೇಕೆಂದು ಕೇಂದ್ರ ಸರ್ಕಾರ ಹೇಳುತ್ತದೆ. ಕೇರಳದಲ್ಲಿ ಕಾಫಿ ಬೆಲೆ ಕೆ.ಜಿ.ಗೆ 1998ರಲ್ಲಿ 69 ರೂ ಇದ್ದದ್ದು 2001 ರಲ್ಲಿ 16 ರೂಗೆ ಇಳಿಯಿತು. ಅದು ಕೇವಲ ಆಶ್ಚರ್ಯವಲ್ಲ. ಹಿಂದಿದ್ದ ಕಾಂಗ್ರೆಸ್ ಸರ್ಕಾರ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಆದರೆ ನಂತರ ಬಂದ ಎಲ್.ಡಿ.ಎಫ್. ಸರ್ಕಾರ ಅನೇಕ ಉತ್ತಮ ಕ್ರಮಗಳನ್ನು ಕೈಗೊಂಡಿತು. ರೈತರನ್ನು ಸಾಲದಿಂದ ಬಿಡುಗಡೆ ಮಾಡಲು ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಬೆಲೆ ನೀಡಲು, ಸಂಗ್ರಹ ಮಾಡಲು, ಆದಾಯವನ್ನು ಸ್ಥಿರೀಕರಣ ಮಾಡಲು, ಸಹಕಾರಿ ವ್ಯವಸಾಯ ಮಾಡಲು ಹೀಗೆ

ದೇಶದಲ್ಲಿ 240 ದಶ ಲಕ್ಷ ಟನ್ ಆಹಾರ ಉತ್ಪಾದನೆ ಮಾಡಲಾಗಿದೆ. ಇದು ಬಂಪರ್ ಎನ್ನುವ ರೀತಿಯಲ್ಲಿ ಕೇಂದ್ರವು ಕೊಚ್ಚಿಕೊಳ್ಳುತ್ತದೆ. ಅದೇ ನಮ್ಮ ನೆರೆಯ ಚೀನಾ 500 ದಶಲಕ್ಷ ಟನ್ ಆಹಾರ ಉತ್ಪಾದಿಸುತ್ತದೆ. ಆ ದೇಶದ ಜನಸಂಖ್ಯೆ ಭಾರತಕ್ಕಿಂತ ತುಂಬಾ ಹೆಚ್ಚೇನಿಲ್ಲ. ನಮ್ಮ ದೇಶದ ತಲಾ ಆಹಾರ ಲಭ್ಯತೆ ಜಗತ್ತಿನಲ್ಲೇ ಅತ್ಯಂತ ಕಡಿಮೆ ಇದೆ. ಹೀಗಿದ್ದಾಗ್ಯೂ ನಮ್ಮ ಗೋದಾಮುಗಳಲ್ಲಿ 60 ದಶಲಕ್ಷ ಟನ್ ಆಹಾರ ಧಾನ್ಯ ಸಂಗ್ರಹವಿದೆ. ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಹಾಗಾಗಿ ನಮ್ಮ ಜನಸಂಖ್ಯೆಯ ಶೇ. 80 ರಷ್ಟು ಜನ ಕ್ಯಾಲೊರಿಯಂ-ಕಬ್ಬಿಣದ ಅಂಶದ ಕೊರತೆಯಿಂದ ಬಳಲುತ್ತಿದ್ದಾರೆ. ಕೇಂದ್ರ ಸರ್ಕಾರ ಹೇಳುವುದಕ್ಕೆ ವಿರುದ್ಧವಾಗಿ ಬಡತನ ಹೆಚ್ಚಾಗುತ್ತಿದೆ.

ಭೂಮಿಯನ್ನು ಅತಿಕ್ರಮಿಸಿಕೊಳ್ಳುವುದು ಒಂದು ಜಾಗತಿಕ ಪ್ರಕ್ರಿಯೆಯಾಗಿದೆ. ಅದನ್ನು ನಾವು ತಾತ್ವಿಕವಾಗಿ ವಿರೋಧಿಸಬೇಕು. ಈಗ ಏಷ್ಯಾ ಮತ್ತು ಆಫ್ರಿಕಾ ಗುಂಪುಗಳಿಗೆ [illegible] ಮಾಧ್ಯಮಗಳು ಮತ್ತು ಸರ್ಕಾರ ಹೇಳುವಂತೆ ಕೃಷಿ ಕಾರ್ಪೋರೇಟೀಕರಣವಾದರೆ ಆಹಾರ ಭದ್ರತೆ ಮತ್ತಷ್ಟು ಹದಗೆಡುತ್ತದೆ. ಆದ್ದರಿಂದ ಜನಪರ ಪರ್ಯಾಯಗಳ ಬಗ್ಗೆ ಯೋಚಿಸಬೇಕಿದೆ. ಕೇರಳ ಮತ್ತು ತ್ರಿಪುರ ರಾಜ್ಯಗಳು ಈ ವಿಚಾರದಲ್ಲಿ ಮಾದರಿಗಳಾಗಿವೆ.

ನಿವೇಶನಕ್ಕೆ ಆಗ್ರಹಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಪುತ್ತೂರಿನಲ್ಲಿ ಪ್ರತಿಭಟನೆ

ನಿವೇಶನ, ಹಕ್ಕುಪತ್ರ ನೀಡಬೇಕೆಂದು ಆಗ್ರಹಿಸಿ ಹಾಗೂ 20 ವರ್ಷಗಳಿಗೂ ಮಿಕ್ಕಿ ಅರ್ಜಿ ಸಲ್ಲಿಸಿರುವ ರೈತರ ಜಮೀನಿನ ಅಕ್ರಮ ಸಕ್ರಮೀಕರಣಕ್ಕಾಗಿ ಆಗ್ರಹಿಸಿ ಪುತ್ತೂರು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಪ್ರಕಟಣೆಯನ್ನು ಸರ್ಕಾರ ಮಾಡಬೇಕೆಂದೂ ಆಗ್ರಹಿಸಲಾಯ್ತು.

ಪ್ರತಿಭಟನಾಕಾರರನ್ನುದ್ದೇಶಿಸಿ ಪಕ್ಷದ ದ.ಕ.ಜಿಲ್ಲಾ ಸಮಿತಿ ಸದಸ್ಯ ಬಿ.ಎಂ.ಭಟ್ ಮಾತನಾಡಿದರು. ಸಿಪಿಐಎಂ ತಾಲೂಕು ಸಮಿತಿಯ ಕಾರ್ಯದರ್ಶಿ ಪಿ.ಕೆ.ಸತೀಶನ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಇದಕ್ಕೂ ಮೊದಲು ರೈಲ್ವೇ ಸ್ಟೇಶನ್ ಬಳಿಯ ಪಕ್ಷದ ಕಚೇರಿಯಿಂದ ತಾಲೂಕು ಕಚೇರಿ ವರೆಗೆ ಮೆರವಣಿಗೆ ನಡೆಸಲಾಗಿತ್ತು.

ಕಾವೂರಿನಲ್ಲಿ ಡಿವೈಎಫ್‌ಐ ರಸ್ತೆ ತಡೆ

ಕಾವೂರು ಕೂಳೂರು ಮುಖ್ಯ ರಸ್ತೆಯನ್ನು ದುರಸ್ತಿ ಪಡಿಸಬೇಕು ಎಂದು ಆಗ್ರಹಿಸಿ ನವಂಬರ್ 18 ರಂದು ಪಂಜಿಮೊಗರು ಡಿವೈಎಫ್‌ಐ ಘಟಕದ ನೇತೃತ್ವದಲ್ಲಿ ಪಂಜಿಮೊಗರಿನಲ್ಲಿ ರಸ್ತೆ ತಡೆ ನಡೆಸಲಾಯ್ತು.

ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ, ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಪಂಜಿಮೊಗರು ಘಟಕದ ಅನಿಲ್ ಡಿಸೋಜ, ಇಬ್ರಾಹಿಂ ಖಲೀಲ್, ನೌಷದ್, ಸೌಮ್ಯ, ಸಂತೋಷ್, ಚರಣ್, ನವೀನ್ ಡಿಸೋಜ, ರಿಯಾಜ್ ಮತ್ತಿತರರು ಭಾಗವಹಿಸಿದ್ದರು.

ಕುರುಡಾದ ಸರಕಾರ

ಪುಟ 7 ರಿಂದ

ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಅನುಕ್ರಮವಾಗಿ 544 ಕೋಟಿ ಮತ್ತು 834 ಕೋಟಿ ರೂ.ಗಳ ಲಾಭ ಗಳಿಸಿದ್ದವು.

ಇಷ್ಟೇ ಅಲ್ಲ, ಸರಕಾರ ಈ ವರ್ಷ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಗಳಿಂದ 1.3ಲಕ್ಷ ಕೋಟಿ ರೂ.ಗಳ ಆದಾಯ ಗಳಿಸಿದೆಯೆಂದು ವರದಿಯಾಗಿದೆ. ಬಜೆಟ್ ಮಂಜೂರು ಮಾಡಿದ ಸಬ್ಸಿಡಿ ಕೇವಲ ರೂ. 40,000 ಕೋಟಿ. ಅಂದರೆ ಸರಕಾರ ಜನತೆಯ ಹಿತವನ್ನು ಬಲಿಗೊಟ್ಟು 90,000 ಕೋಟಿ ರೂ. ಲಾಭ ಗಳಿಸಿದೆ!

ಮೂರನೆಯದಾಗಿ, ಸರಕಾರ ತಕ್ಷಣವೇ ಕೇಂದ್ರೀಯ ಗೋದಾಮುಗಳಲ್ಲಿ ಕೊಳೆಯುತ್ತಾ ಬಿದ್ದಿರುವ ಆಹಾರ ಧಾನ್ಯಗಳ ದಾಸ್ತಾನುಗಳನ್ನು ರಾಜ್ಯ ಸರಕಾರಗಳಿಗೆ ಬಿಪಿಎಲ್ ದರಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಹಂಚಲು ಕೊಡಬೇಕು. ಇದು ಆಹಾರವಸ್ತುಗಳ ಬೆಲೆಗಳ ಏರಿಕೆಗೆ ಇರುವ ಒತ್ತಡವನ್ನು ತಗ್ಗಿಸುತ್ತದೆ. ಈಗ, ಸರಕಾರೀ ಗೋದಾಮುಗಳಲ್ಲಿರುವ ಆಹಾರಧಾನ್ಯಗಳ ಪ್ರಮಾಣ 600 ಲಕ್ಷ ಟನ್‌ಗಳಷ್ಟಿದೆ. ಇದು ಖಂಡಿತವಾಗಿಯೂ ಅಗತ್ಯವಿರುವ ದಾಸ್ತಾನಿನ ಎರಡೂವರೆ ಪಟ್ಟಾಗುತ್ತದೆ. ಆದರೂ ಈ ಯುಪಿಎ-2 ಸರಕಾರ ಈ ಕ್ರಮ ಕೈಗೊಳ್ಳಲು ನಿರಾಕರಿಸುತ್ತಿದೆ.

ಸಂಸತ್ತಿನ ಒಳಗೂ, ಹೊರಗೂ

ಕನಿಷ್ಟ ಈ ಮೂರು ಕ್ರಮಗಳನ್ನಾದರೂ ಕೈಗೊಳ್ಳುವ ಬದಲು ಹಣಕಾಸು ಮಂತ್ರಿಗಳ ಹೇಳಿಕೆ 'ಭಾರತದಲ್ಲಿ ಹಣದುಬ್ಬರ ಪರಿಸ್ಥಿತಿ ಕ್ರಮೇಣವಾಗಿ ಉತ್ತಮಗೊಳ್ಳುತ್ತಿದೆ'(!) ಎಂದು ಹೇಳಲು ಹೊರಗಿದೆ. ಹಣದುಬ್ಬರಕ್ಕೆ ಕೊಟ್ಟಿರುವ ಜಾಗತಿಕ ಬೆಳವಣಿಗೆಗಳು ಇತ್ಯಾದಿ ಕಾರಣಗಳಲ್ಲಿ ಬೇಡಿಕೆ ಮತ್ತು ಪೂರೈಕೆಯಲ್ಲಿ ಹೊಂದಾಣಿಕೆ ಇಲ್ಲದಿರುವುದು ಬಹುಮುಖ್ಯ ಸಂಗತಿ ಎಂದು ಎತ್ತಿ ತೋರಿಸಲಾಗಿದೆ. ವಿಚಿತ್ರವೆಂದರೆ, ಹಣಕಾಸು ಮಂತ್ರಿಗಳು "ಇತ್ತೀಚಿನ ವರ್ಷಗಳಲ್ಲಿ ನಿರಂತರ ಉನ್ನತ ಆರ್ಥಿಕ ಬೆಳವಣಿಗೆಯಿಂದಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಕೊಳ್ಳುವ ಶಕ್ತಿ ಉತ್ತಮಗೊಳ್ಳುವಂತಾಗಿದೆ" ಎನ್ನುತ್ತಾರೆ. ಅತ್ತ ಯೋಜನಾ ಆಯೋಗವೇ ಆಹಾರಧಾನ್ಯಗಳು ಮತ್ತು ಬೇಳೆಕಾಳುಗಳ ತಲಾ ಬಳಕೆ ಗ್ರಾಮೀಣ ಪ್ರದೇಶಗಳಲ್ಲಿ 8ಶೇ.ದಷ್ಟು ಮತ್ತು ನಗರ ಪ್ರದೇಶಗಳಲ್ಲಿ 3.3ಶೇ.ದಷ್ಟು ಕಡಿಮೆಯಾಗಿದೆ ಎಂದಿರುವ ಸಮಯದಲ್ಲೇ ಹಣಕಾಸು ಮಂತ್ರಿಗಳು ಇಂತಹ ಹೇಳಿಕೆ ಕೊಡುತ್ತಾರೆ. ಸರಕಾರವೇ ನೇಮಿಸಿದ ಆಯೋಗಗಳೇ 80 ಕೋಟಿಯಷ್ಟು ನಮ್ಮ ಜನಗಳು ಕೇವಲ ದಿನಕ್ಕೆ 20 ರೂ.ಗಳಲ್ಲಿ ಹೇಗೋ ಬದುಕಿದ್ದಾರೆ ಎಂದು ವರದಿ ಮಾಡಿವೆ. ಖಂಡಿತವಾಗಿಯೂ, ಒಂದೋ, ಈ ಸರಕಾರ ಕುರುಡಾಗಿದೆ, ಇಲ್ಲವೇ, ಈ ಬೆಲೆಯೇರಿಕೆಯ ಮೂಲಕ ಜನಗಳ ಮೇಲೆ ಹೇರಿರುವ ಹೊರೆಗಳನ್ನು ಸಮರ್ಥಿಸಿಕೊಳ್ಳಲು ಬೇಕೆಂದೇ ದೇಶವನ್ನು ತಪ್ಪುದಾರಿಗೆಳೆಯುತ್ತಿದೆ.

ಆದ್ದರಿಂದ, ಭಾರತೀಯ ಜನತೆಯ ದುಃಖ-ದುಮ್ಮಾನಗಳನ್ನು ಬಿಂಬಿಸಲು ಹಾಗೂ ಅವರ ಸಂಕಟಗಳ ಪರಿಹಾರಕ್ಕಾಗಿ ಯತ್ನಿಸುತ್ತಿರುವ ಸಿಪಿಐ(ಎಂ), ಸರಕಾರ ನಾಗಾಲೋಟ ಹೂಡಿರುವ ಹಣದುಬ್ಬರವನ್ನು ತಡೆದು ನಿಲ್ಲಿಸಲು ಕನಿಷ್ಟ ಈ ಮೂರು ಕ್ರಮಗಳನ್ನಾದರೂ ಜಾರಿಗೆ ತರುವಂತೆ ಬಲವಂತ ಮಾಡಲು, ಸಂಸತ್ತಿನ ಒಳಗೆ ಮತ್ತು ಹೊರಗೆ ಜನತೆಯ ಹೋರಾಟಗಳ ಮೂಲಕ ಒತ್ತಡ ಹಾಕುತ್ತದೆ.

ಪೆಟ್ರೋಲ್ ಬೆಲೆಗಳು ಮತ್ತು ವಿಶ್ವಾಸಘಾತುಕ ತಂತ್ರಗಳು

'ಮೊದಲು ಜನರಿಗೆ ನೀವು ಎಷ್ಟು ಕೆಟ್ಟದ್ದನ್ನು ಮಾಡಬಲ್ಲಿರಿ ಎಂಬುದನ್ನು ತೋರಿಸಿ, ನಂತರ ಅದನ್ನು ಮೆದುಗೊಳಿಸಿ; ಜನ ಸಮಾಧಾನದ ನಿಟ್ಟುಸಿರು ಬಿಡುತ್ತಾರೆ' ಎಂಬ ಚಾಣಕ್ಯ ತಂತ್ರವನ್ನು ನಮ್ಮ ಯುಪಿಎ-2 ಸರಕಾರ ಅತ್ಯಂತ ವಿಧೇಯತೆಯಿಂದ ನಂಬಿದಂತಿದೆ- ಇದು ಕಳೆದ ವಾರ ತೈಲ ಮಾರಾಟ ಕಂಪನಿಗಳು (ವಾಸ್ತವವಾಗಿ ಕೇಂದ್ರ ಸರಕಾರ) ಪೆಟ್ರೋಲ್ ಬೆಲೆಯನ್ನು ಇಳಿಸಿರುವುದಾಗಿ ಪ್ರಕಟಿಸಿದಾಗ 'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆ ಮಾಡಿರುವ ಸಂಪಾದಕೀಯ ಟಿಪ್ಪಣಿ. ಸರಕಾರದ ಬೊಕ್ಕಸಕ್ಕೆ ಬಹಳ ನಷ್ಟವಾಗುತ್ತಿದೆಯೆಂದು ಪೆಟ್ರೋಲ್ ಬೆಲೆಯೇರಿಸಿ, ಅದಕ್ಕೆ ವ್ಯಾಪಕ ವಿರೋಧ ಬಂದಾಗ, ಏನೇ ಆಗಲಿ, ಅದನ್ನು ಹಿಂತೆಗೆದುಕೊಳ್ಳುವುದಿಲ್ಲ, ಬದಲಿಗೆ ಡೀಸೆಲ್ ಬೆಲೆಗಳ ಮೇಲಿನ ನಿಯಂತ್ರಣವನ್ನು ಕೂಡ ತೆಗೆಯುತ್ತೇವೆ ಎಂದ ಸರಕಾರ ಒಂದೇ ವಾರದ ನಂತರ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆಗಳು ಇಳದಿವೆ ಎಂಬ ಕಾರಣವೊಡ್ಡಿ ಪೆಟ್ರೋಲ್ ಬೆಲೆಯನ್ನು ಇಳಿಸಿತು, ಜನರ ಬಗ್ಗೆ ತಮಗೆಷ್ಟು ಕಾಳಜಿ ಇದೆ ನೋಡಿ ಎಂದು ತನ್ನ ಬೆನ್ನು ತಾನೇ ತಟ್ಟಿಕೊಂಡಿತು.

ವಾಸ್ತವವಾಗಿ, ಇದು ಜನರ ಬಗ್ಗೆ ಕಾಳಜಿಯಲ್ಲ, ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ವಿರೋಧ ಪಕ್ಷಗಳ, ಅದರಲ್ಲೂ ಎಡಪಕ್ಷಗಳ ತೀವ್ರ ದಾಳಿಯನ್ನು ಎದುರಿಸಬೇಕಾಗಿ ಬಂದಿತೆಂಬ ಭಯದಿಂದ ಕೈಗೊಂಡ ಕ್ರಮ ಎಂದು ಯುಪಿಎ 'ಆಮ್ ಆದ್ಮಿ' ವಂಚಕ ರಾಜಕೀಯದ ಅಲ್ಪ-ಸ್ವಲ್ಪ ಅನುಭವವಿದ್ದವರಿಗೂ ತಿಳಿಯುವ ಸಂಗತಿ. ಇದು ಜನತೆಯನ್ನು ವಂಚಿಸುವ, ಅವರ ವಿಶ್ವಾಸವನ್ನು ಘಾಸಿಗೊಳಿಸುವ ತಂತ್ರ. ಏಕೆಂದರೆ, ಈ ಬೆಲೆ ಇಳಿಕೆ ಮಾಡಿದಾಗ ಸರಕಾರ ಹೇಳಿಕೊಂಡಂತೆ, ವಾಸ್ತವವಾಗಿ, ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಇಳಿದಿರಲಿಲ್ಲ, ಬದಲಾಗಿ ಮತ್ತಷ್ಟು ಏರಿತ್ತು.

ನವಂಬರ್ 4 ರಂದು 2ರೂ.ಗಳಷ್ಟು ಏರಿಸಿದ್ದಾಗ ಅದು ಬ್ಯಾರೆಲ್ಲಿಗೆ 112.22 ಡಾಲರ್ ಇತ್ತು. ನವಂಬರ್ 16ರಂದು ಅದು 115.61 ಡಾಲರ್ ಆಯಿತು. ಅಲ್ಲದೆ, ಡಾಲರ್ ಎದುರು ರೂಪಾಯಿ ಬೆಲೆ ಕೂಡಾ ಇಳಿದಿತ್ತು, ಒಂದು ಡಾಲರ್‌ಗೆ 47 ರೂ. ಬದಲು 52 ರೂ. ಕೊಡಬೇಕಾಗಿತ್ತು, ಅಂದರೆ ಸರಕಾರ ಕಚ್ಚಾ ತೈಲಕ್ಕೆ ಇನ್ನೂ ಹೆಚ್ಚು ವಿದೇಶಿ ವಿನಿಮಯ ತೆರಬೇಕಾಗಿದೆ. ಆದರೂ ಸರಕಾರ ಬೆಲೆ ಇಳಿಸುತ್ತದಾದರೆ, ಅದರ ಈ ತರ್ಕದ ಪ್ರಕಾರ ಕಳೆದ ಜನವರಿಯಿಂದ ಪೆಟ್ರೋಲ್ ಬೆಲೆ ಸತತವಾಗಿ ಇಳಿಯಬೇಕಾಗಿತ್ತು. ಜನವರಿ 2011ರಲ್ಲಿ ಪೆಟ್ರೋಲ್ ದರದಲ್ಲಿ ಎರಡೂವರೆ ರೂಪಾಯಿ ಏರಿಕೆ ಮಾಡಿದಾಗ ಕಚ್ಚಾತೈಲದ ಬೆಲೆ ಬ್ಯಾರಲ್ಲಿಗೆ 99 ಡಾಲರ್; ಮೇ 2011ರಲ್ಲಿ 5ರೂ.ಗಳಷ್ಟ ಏರಿಸಿದಾಗ ಅದು 110ರಿಂದ 115 ಡಾಲರ್ ನಡುವೆ ಇತ್ತು; ಸಪ್ಟಂಬರಿನಲ್ಲಿ 3ರೂ.ಗಳಷ್ಟು ಏರಿಸಿದಾಗ 105ರಿಂದ 108 ಡಾಲರ್ ನಡುವೆ ಇತ್ತು. ಅಂದರೆ, ಭಾರತದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಮತ್ತು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಗಳ ನಡುವೆ ನೇರ ಸಂಬಂಧವೇನಿಲ್ಲ. ಯುಪಿಎ-2 ಸರಕಾರ ತೈಲ ಮಾರಾಟ ಕಂಪನಿಗಳ ಮೂಲಕ ಬೆಲೆಯೇರಿಸುವುದು ಮುಖ್ಯವಾಗಿ ತನ್ನ ಬಜೆಟಿನ ಹಣಕಾಸು ಕೊರತೆಯನ್ನು ತುಂಬಿಸುವುದಕ್ಕಾಗಿ ಮಾತ್ರ ಎಂಬುದು ಸ್ಪಷ್ಟ.

★

ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಶರಣಾದ ಪೆನ್ಶನ್ ಮಸೂದೆ

ಯುಪಿಎ-2 ಸಂಪುಟ ಪೆನ್ಶನ್ ವಲಯದಲ್ಲಿ 26% ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗೆ ಅವಕಾಶ ನೀಡಲು ನಿರ್ಧರಿಸಿದೆ. ಇದು ನಡೆಯುತ್ತಿರುವುದು ಇನ್ನಷ್ಟು ಹಣಕಾಸು ಸುಧಾರಣೆಗಳು ಬೇಕೆಂಬ ಕೂಗಿನ ಹಿನ್ನೆಲೆಯಲ್ಲಿ. ಸಂಸತ್ತು ಇದನ್ನು ಅನುಮೋದಿಸಿದರೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಸಟ್ಟಾಕೋರತನಕ್ಕೆ ಭಾರತದ ಕೋಟ್ಯಂತರ ಉದ್ಯೋಗಿಗಳ ಬೆವರಿನಿಂದ ಜಮಾ ಆಗಿರುವ 1200 ಕೋಟಿ ಡಾಲರುಗಳು ಈಡಾಗುತ್ತವೆ. ಭಾರತ ಈಗ 'ಮೂಡಿ ಬರುತ್ತಿರುವ ಆರ್ಥಿಕ' ಎಂಬ ನಿರೀಕ್ಷೆಯಿಂದಾಗಿ ಇಲ್ಲಿ ಸೂಪರ್ ಲಾಭಗಳನ್ನು ಗಿಟ್ಟಿಸಬಹುದು ಎಂಬ ಈ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಸುಲಿಗೆಕೋರ ಆಕಾಂಕ್ಷೆಗಳು, ಅದರಿಂದಾಗಿ ಒತ್ತಡಗಳು ಮತ್ತಷ್ಟು ಹೆಚ್ಚಿವೆ, ಅದಕ್ಕೆ ಯುಪಿಎ-2 ಸರಕಾರ ಶರಣಾಗಿದೆ ಎಂಬುದನ್ನು ಇದು ತೋರಿಸುತ್ತಿದೆ.

ಆರು ವರ್ಷಗಳ ಹಿಂದೆ ಯುಪಿಎ-1 ಸರಕಾರ 'ಪೆನ್ಶನ್ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆ'ಯನ್ನು ಮಂಡಿಸಿತ್ತು. ಆದರೆ ಆಗ ಅದು ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದರಿಂದ ಅದು ಮೂಲೆಯಲ್ಲೇ ಉಳಿಯಿತು. ಇದರಿಂದಾಗಿ ಮತ್ತು ಬ್ಯಾಂಕಿಂಗ್ ಮತ್ತು ವಿಮಾ ವಲಯದಲ್ಲಿ ಉದಾರೀಕರಣ ಕ್ರಮಗಳನ್ನು ಎಡಪಕ್ಷಗಳು ತಡೆದುದರಿಂದಾಗಿ ಜಾಗತಿಕ ಹಣಕಾಸು ಕುಸಿತದ ವಿನಾಶಕಾರಿ ಪ್ರಭಾವದಿಂದ ಭಾರತದ ಆರ್ಥಿಕವನ್ನು ರಕ್ಷಿಸುವುದು ಸಾಧ್ಯವಾಯಿತು. ಅದರಿಂದಾದರೂ ಮತ್ತು ಈ ಜಾಗತಿಕ ಹಣಕಾಸು ಕುಸಿತ ಪಾಶ್ಚಿಮಾತ್ಯ ದೇಶಗಳಲ್ಲಿ ಕೋಟ್ಯಂತರ ದುಡಿಯುವ ಜನಗಳ ಪೆನ್ಶನ್ ಹಣವನ್ನು ನುಂಗಿ ಹಾಕಿದ್ದನ್ನು ಕಂಡ ಮೇಲಾದರೂ ಯುಪಿಎ-2 ಸರಕಾರ ಎಚ್ಚರಗೊಂಡಿರುವಂತೆ ಕಾಣುತ್ತಿಲ್ಲ. ಸಂಸತ್ತಿನ ಸ್ಥಾಯೀ ಸಮಿತಿಯ ಶಿಫಾರಸುಗಳನ್ನೂ ಅದು ನಿರ್ಲಕ್ಷಿಸಿದೆ.

ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತೀಯ ಕಾರ್ಪೊರೇಟ್ ವಲಯದ ಒತ್ತಡಗಳಿಗೆ ಮಣಿದಿರುವ ಯುಪಿಎ-2 ಸರಕಾರ ಈ ಮಸೂದೆಯನ್ನು ಪಾಸು ಮಾಡಿಸಿಕೊಂಡರೆ ಈಗ ಒಂದು ಗ್ಯಾರಂಟಿ ನಿವೃತ್ತಿ ವೇತನದ ಸೌಲಭ್ಯ ಗಳಿಸಿರುವ ಅಸಂಖ್ಯಾತ ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರು ಮತ್ತು ಇತರ ಉದ್ಯೋಗಿಗಳನ್ನು ಹಣಕಾಸು ಬಂಡವಾಳದ ದುರಾಸೆಗಳಿಗೆ ತುತ್ತಾಗಿಸಿದಂತಾಗುತ್ತದೆ. ಆದ್ದರಿಂದ ಈ ಮಸೂದೆಗೆ ಸಂಸತ್ತು ಅಂಗೀಕಾರ ನೀಡಬಾರದು, ಇದನ್ನು ಒಟ್ಟಾಗಿ ಎದುರಿಸಬೇಕು ಎಂದು ಸಿಪಿಐ(ಎಂ) ಎಲ್ಲ ಪ್ರತಿಪಕ್ಷಗಳನ್ನು ವಿನಂತಿಸಿಕೊಂಡಿದೆ. ಆದರೆ ಯುಪಿಎ-2 ಸರಕಾರ ಹಿಂದಿನಂತೆ ಬಿಜೆಪಿಯ ಸಹಾಯದಿಂದ ಈ ಮಸೂದೆಯನ್ನು ಪಾಸು ಮಾಡಿಸಿಕೊಳ್ಳಲು ಪ್ರಯತ್ನಿಸಬಹುದು ಎನ್ನಲಾಗುತ್ತಿದೆ.

★


ವಿದೇಶಿ ಪೂರೈಕೆದಾರರಿಗೆ ಹಗುರಗೊಂಡ ಪರಮಾಣು ಬಾಧ್ಯತೆ ಕಾನೂನು

ಭಾರತದ ಸಂಸತ್ತು ಅಂಗೀಕರಿಸಿರುವ ಪರಮಾಣು ಬಾಧ್ಯತಾ ಕಾನೂನು ಅಮೆರಿಕನ್ ಆಳರಸರ ಕೆಂಗಣ್ಣಿಗೆ ಗುರಿಯಾಗಿತ್ತು. ಅದನ್ನು ಬದಲಾಯಿಸಲು ಸತತ ಒತ್ತಡವನ್ನು ಅವರು ಹಾಕುತ್ತಲೇ ಇದ್ದಾರೆ. ಈಗ ಅದರಲ್ಲಿ ವಿದೇಶಿ ಪೂರೈಕೆದಾರರ ಬಾಧ್ಯತೆಯನ್ನು ಹಗುರಗೊಳಿಸುವ ಮೊದಲ ಪ್ರಯತ್ನವನ್ನು ಯುಪಿಎ-2 ಸರಕಾರ ಮಾಡಿದೆ. ಈ ಕಾನೂನಿನ ಅಡಿಯಲ್ಲಿ ಇರುವ ನಿಯಮಾವಳಿಗಳ ಅಧಿಸೂಚನೆಯ್ನನ್ನು ಈಗ ಪ್ರಕಟಿಸಿದ್ದು, ಇದರಲ್ಲಿ ವಿದೇಶಿ ಪೂರೈಕೆದಾರರಿಂದ ನಷ್ಟಭರ್ತಿ ಕೇಳುವ ಅವಧಿಯನ್ನು ಕಡಿತ ಮಾಡಲಾಗಿದೆ. ಈ ಅವಧಿ ಪರಮಾಣು ರಿಯಾಕ್ಟರಿನ ಮತ್ತು ಅದರ ಸಾಧನೋಪಕರಣಗಳ ಕಾರ್ಯ ನಿರ್ವಹಣೆಯ ಅವಧಿಯಷ್ಟಿರಬೇಕಿತ್ತು. ಈಗ ಅದನ್ನು ಆರಂಭಿಕ ಲೈಸೆನ್ಸ್ ಅವಧಿಗೆ ಅಥವ ಉತ್ಪಾದನೆ ಬಾಧ್ಯತೆ ಅವಧಿಗೆ ಸೀಮಿತಗೊಳಿಸಲಾಗಿದೆ. ಇದು ಸಾಮಾನ್ಯವಾಗಿ ಐದು ವರ್ಷಗಳಷ್ಟಿರುತ್ತದೆ.


ಈ ಅಧಿಸೂಚನೆಯನ್ನು ಪ್ರಕಟಿಸಿರುವುದು ಆಸಿಯಾನ್ ಶೃಂಗ ಸಭೆಯಲ್ಲಿ ಭಾರತದ ಪ್ರಧಾನಿಗಳು ಅಮೆರಿಕನ್ ಪ್ರಧಾನಿಗಳನ್ನು ಭೇಟಿ ಮಾಡಲಿದ್ದ ಹಿಂದಿನ ದಿನ ಎಂಬುದು ಗಮನಾರ್ಹ. ತಮ್ಮ ದೇಶದ ಪರಮಾಣು ಸಾಧನ ಪೂರೈಕೆದಾರರಿಗೆ ಯಾವುದೇ ಬಾಧ್ಯತೆಗಳೇ ಇರಬಾರದು ಎನ್ನುವ ಅಮೆರಿಕನ್ ಆಡಳಿತದ ಆಕ್ಷೇಪಣೆಗಳಿಗೆ ರಿಯಾಯ್ತಿಯಾಗಿ ಇದನ್ನು ಮಾಡಲಾಗಿದೆ ಎಂಬುದು ಸ್ವಯಂವೇದ್ಯ. ನಿಜ. ಇಂತಹ ರಿಯಾಯ್ತಿಗಳಿಂದ ಅಮೆರಿಕನ್ ಆಳರಸರು ತೃಪ್ತರಾಗುವುದಿಲ್ಲ. ಈ ಬಗ್ಗೆ ಮಾತುಕತೆಗಳು ಭಾರತ ಸರಕಾರದೊಂದಿಗೆ ಮುಂದುವರೆಯುತ್ತಿವೆ ಎಂದು ಅಮೆರಿಕನ್ ವಿದೇಶಾಂಗ ಇಲಾಖೆಯ ವಕ್ತಾರೆ ಪುನರುಚ್ಚರಿಸಿದ್ದಾರೆ. ಪರಮಾಣು ಸ್ಥಾವರಗಳನ್ನು ಕುರಿತ ಭಾರತದ ಯಾವುದೇ ಶಾಸನ ತಮ್ಮ ದೇಶದ ನಾಗರಿಕ ಪರಮಾಣು ಉದ್ದಿಮೆದಾರರಿಗೆ ಅನಾನುಕೂಲ ಉಂಟು ಮಾಡುವಂತಿರಬಾರದು ಎಂದೂ ಆಕೆ ಹೇಳಿದ್ದಾರೆ. ಜಗತ್ತಿಗೆ ಮುಕ್ತ ಆರ್ಥಿಕ ಸ್ಪರ್ಧೆಯ ಉಪದೇಶ ನೀಡುವ ಮಂದಿ ಅದರಿಂದ ತಮ್ಮ ದೇಶದ ಬಂಡವಾಳಿಗರಿಗೆ ಅನಾನುಕೂಲ ವಾಗುಂತಹ ಸ್ಪರ್ಧೆಯನ್ನು ಇಷ್ಟಪಡುವುದಿಲ್ಲ, ಮಾತ್ರವಲ್ಲ ಅನುಕೂಲಗಳನ್ನು ನಿರೀಕ್ಷಿಸುತ್ತಾರೆ. ಅವರ ಆಕಾಂಕ್ಷೆಗಳನ್ನು ಈಡೇರಿಸಲು ನಮ್ಮ ಆಳರಸರು ಕಟಿಬದ್ಧರಾಗುತ್ತಾರೆ.

ಕಿಟಕಿ ಮುಚ್ಚಲೇ?

ಈ ಬದಿಯ ಕಿಟಕಿಯನ್ನು ಮುಚ್ಚಿ ಬಿಡೋಣವೇ, ರಾಹುಲ್‌ಜೀ?



'ದಿ ಹಿಂದೂ'ನಲ್ಲಿ ಸುರೇಂದ್ರನ್



ವೇದರಾಜ ಎನ್.ಕೆ.

ಫಾರ್ಮುಲಾ ಒನ್ ಮತ್ತು ಪಾದಚಾರಿಗಳು

ಸಿಪಿಐ(ಎಂ) ಪೊಲಿಟ್‌ಬ್ಯುರೋ ಸದಸ್ಯ ಸೀತಾರಾಂ ಯೆಚುರಿಯವರನ್ನು ಕಳೆದ ವಾರ ಅಮೆರಿಕಾದ ಸ್ಟಾನ್ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಒಂದು ಉಪನ್ಯಾಸ ನೀಡಲು ಆಹ್ವಾನಿಸಲಾಗಿತ್ತು. ಅವರ ಉಪನ್ಯಾಸದ ಹಿಂದಿನ ದಿನ ಯುಪಿಎ-2 ಕಾನೂನು ಮಂತ್ರಿ ಸಲ್ಮಾನ್ ಖುರ್ಷಿದ್ ಅವರ ಉಪನ್ಯಾಸವೂ ಅದೇ ಸ್ಥಳದಲ್ಲಿತ್ತು. ಅಲ್ಲಿ ಅವರು ದಿಲ್ಲಿಯಲ್ಲಿ ಇತ್ತೀಚೆಗೆ ನಡೆದ ಫಾರ್ಮುಲಾ ಒನ್ ಕಾರು ರೇಸನ್ನು ನಡೆಸಲು ಸಾಧ್ಯವಾಗಿರುವುದು ದೇಶದ ಒಂದು ಮಹಾಸಾಧನೆ ಎನ್ನುವಂತೆ ಮಾತಾಡುತ್ತ 'ಇದು ಭಾರತದ ರಂಗಪ್ರವೇಶದ ಸೂಚನೆ' ಎಂದರಂತೆ. ಇದನ್ನು ಪ್ರಸ್ತಾಪಿಸಿದ ಯೆಚುರಿ ನಮ್ಮ ಹಿಂದಿನ ರಾಷ್ಟ್ರಪತಿ ಕೆ.ಆರ್. ನಾರಾಯಣನ್‌ರು ಹೇಳಿದ್ದ ಈ ಒಂದು ಮಾತನ್ನು ಸಭಿಕರಿಗೆ ನೆನಪಿಸಿದರು-"ನಾವು ಮಹಾನ್ ಹೆದ್ದಾರಿಗಳನ್ನು ನಿರ್ಮಿಸುತ್ತಿದ್ದೇವೆ, ಆದರೆ ಅವುಗಳಲ್ಲಿ ಪಾದಚಾರಿಗಳು ದಾಟಲು ಅವಕಾಶಗಳನ್ನೂ ಕಲ್ಪಿಸಬೇಕು ಎಂಬುದು ನೆನಪಿನಲ್ಲಿರಲಿ."


ಜಗದಗಲ

ಶರತ್‌ಚಂದ್ರ

ಮೂರು ಸರ್ಕಾರಗಳ ಬಲಿ ತೆಗೆದುಕೊಂಡ ಯುರೋ ಬಿಕ್ಕಟ್ಟು

ಐಎಂಎಫ್ ಮತ್ತು ಯುರೋಪಿಯನ್ ಒಕ್ಕೂಟದ ಶತ ಪ್ರಯತ್ನಗಳ ನಂತರವೂ ಯುರೋ ಆರ್ಥಿಕ ಬಿಕ್ಕಟ್ಟು ಮುಂದುವರೆಯುತ್ತಿದೆ. ಕಾರ್ಮಿಕರ ಸವಲತ್ತುಗಳನ್ನು ಮತ್ತು ಜನತೆಯ ಕಲ್ಯಾಣ ಯೋಜನೆಗಳನ್ನು ತೀವ್ರ ಕಡಿತ ಮಾಡುತ್ತಿರುವ ಯುರೋ ಸರ್ಕಾರಗಳ ಕ್ರಮಗಳಿಗೆ ತೀವ್ರ ಪ್ರತಿರೋಧ ಕಂಡಿದೆ. ಒಂದು ಕಡೆ ಜನರ ಆಕ್ರೋಶ, ಇನ್ನೊಂದು ಕಡೆ ಐಎಂಎಫ್, ಯುರೋಪಿಯನ್ ಒಕ್ಕೂಟ ಮತ್ತು ಬ್ಯಾಂಕುಗಳ ಒತ್ತಡಗಳ – ಇವುಗಳ ಮಧ್ಯೆ ಸಿಲುಕಿದ ಸರ್ಕಾರಗಳು ರಾಜೀನಾಮೆ ಕೊಡಬೇಕಾಗಿ ಬಂದಿದೆ. ಈಗಾಗಲೇ ಕಳೆದ ಒಂದು ತಿಂಗಳಲ್ಲೇ ಮೂರು ಸರ್ಕಾರಗಳ ಬಲಿಯನ್ನು ಯುರೋ ಬಿಕ್ಕಟ್ಟು ತೆಗೆದುಕೊಂಡಿದೆ. ಅನುಕ್ರಮವಾಗಿ ಗ್ರೀಸ್, ಇಟಲಿ ಮತ್ತು ಸ್ಪಾನಿಷ್ ಸರ್ಕಾರಗಳು ಉರುಳಿವೆ. ಆದರೆ ವಿಪರ್ಯಾಸದ ಸಂಗತಿ ಎಂದರೆ, ಬಂದ ಹೊಸ ಸರ್ಕಾರಗಳೂ ಜನರ ಆಶಯಕ್ಕೆ ಅನುಗುಣವಾಗಿಲ್ಲ. ಜನರ ಸ್ಥಿತಿ ಉರಿಯುತ್ತಿರುವ ಬಾಣಲೆಯಿಂದ ಬೆಂಕಿಗೆ ಬಿದ್ದ ಹಾಗಿದೆ.

ಪಾಪಾಂಡ್ರೋರವರ ಗ್ರೀಕ್ ಸರ್ಕಾರ ರಾಜೀನಾಮೆ ಕೊಡಬೇಕಾಯಿತು. ಐಎಂಎಫ್ ಮತ್ತು ಯುರೋಪಿಯನ್ ಬ್ಯಾಂಕುಗಳ ಒತ್ತಡದಿಂದ ತೀವ್ರ ಕಡಿತಗಳನ್ನು ಪಾರ್ಲಿಮೆಂಟಿನಲ್ಲಿ ಪಾಸು ಮಾಡಿಸಿಕೊಂಡಿತು. ವಿಶ್ವಾಸ ಮತ ಸಹ ಪಡೆಯಿತು. ಆದರೆ ಜನತೆಯ ಆಕ್ರೋಶ ಮುಗಿಲು ಮುಟ್ಟಿದಾಗ ಈ ಕ್ರಮಗಳ ಬಗ್ಗೆ ಜನಮತ ಸಂಗ್ರಹಕ್ಕೆ ಮುಂದಾದರು. ಆದರೆ ಇದಕ್ಕೆ ಯುರೋಪಿಯನ್ ಕಮಿಶನ್ ಮತ್ತು ಬ್ಯಾಂಕುಗಳು ತೀವ್ರ ವಿರೋಧ ವ್ಯಕ್ತ ಪಡಿಸಿದವು. ಅವರ ಪಕ್ಷದಲ್ಲೇ ಮತ್ತು ವಿರೋಧ ಪಕ್ಷಗಳಿಂದ ಅವರ ರಾಜೀನಾಮೆಗೆ ಒತ್ತಡ ಬಂತು. ರಾಜಕೀಯ ಬಿಕ್ಕಟ್ಟು ಎಷ್ಟು ತೀವ್ರವಾಗಿತ್ತೆಂದರೆ, ಫ್ರಾನ್ಸಿನ ಕಾನ್ ನಲ್ಲಿ ನಡೆದ ಜಿ-20 ಶೃಂಗಸಭೆ ಮಸುಕಾಗಿತ್ತು. ಗ್ರೀಸ್ ಸಾಲ ಪಾವತಿ ಮಾಡಲು ನಿರಾಕರಿಸುತ್ತದೆ ಅಥವಾ ಯುರೋ-ಝೋನಿನಿಂದ ಹೊರ ಬರುತ್ತದೆ. ಇದು ಯುರೋ ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ ಎಂಬ ಆತಂಕ ಹರಡಿತ್ತು.



ಈ ತೀವ್ರ ರಾಜಕೀಯ ಬಿಕ್ಕಟ್ಟಿಗೆ ಉತ್ತರವಾಗಿ, ಸರ್ವಪಕ್ಷೀಯ ಐಕ್ಯ ಸರ್ಕಾರ ರಚಿಸಲು ನಿರ್ಧರಿಸಲಾಯಿತು. ರಾಜೀನಾಮೆಯ ನಂತರ 'ಟೆಕ್ನೋಕ್ರಾಟ್' ಪಾಪಾಡೆಮೊಸ್ ಅವರ ನಾಯಕತ್ವದಲ್ಲಿ ಸರ್ಕಾರ ರಚನೆ ಮಾಡಲಾಯಿತು. ಈ ಮಧ್ಯಂತರ ಸರ್ಕಾರ ಕೇವಲ 4 ತಿಂಗಳು ಅಧಿಕಾರದಲ್ಲಿದ್ದು, ಆ ನಂತರ ಚುನಾವಣೆ ನಡೆಯಲಿದೆ. ಈ ಸರ್ಕಾರ ಪಾಪಾಂಡ್ರೋರವರ ಹಿಂದಿನ ಸರ್ಕಾರ ಪಾಸು ಮಾಡಿದ ಕಡಿತಗಳನ್ನು ಜಾರಿ ಮಾಡಬೇಕೆಂದು ಯುರೋಪಿಯನ್ ಕಮಿಶನ್ ಮತ್ತು ಬ್ಯಾಂಕುಗಳು ಒತ್ತಡ ಹಾಕುತ್ತಿವೆ. ಇದಕ್ಕಾಗಿ ಈ ಸರ್ಕಾರ ಹೊಸ ಬಜೆಟ್ ಮತ್ತು ಆರ್ಥಿಕ ಯೋಜನೆಗಳನ್ನು ತಯಾರಿಸಿದೆ. ಗ್ರೀಸ್ ಕಳೆದ 5 ವರ್ಷಗಳಿಂದ ಸತತವಾಗಿ ಆರ್ಥಿಕ ಹಿಂಜರಿತ ಅನುಭವಿಸುತ್ತಿದೆ. ಕಳೆದ ವರ್ಷ ಗ್ರೀಕ್ ಆರ್ಥಿಕ ಶೇ. 5.5 ರಷ್ಟು ಕುಗ್ಗಿದ್ದರೆ, ಈ ವರ್ಷ ಶೇ. 2.8 ರಷ್ಟು ಕುಗ್ಗುವುದು ಎನ್ನಲಾಗಿದೆ.

ಇಟಲಿಯ ಪ್ರಧಾನಿ ಬೆರ್ಲುಸ್ಕೋನಿ ಸರ್ಕಾರ ತಮ್ಮ ಮೂರನೇ ಅವಧಿಯಲ್ಲಿ ಸತತ ಬಿಕ್ಕಟ್ಟು ಎದುರಿಸುತ್ತಾ ಬಂದಿತ್ತು. ಪ್ರಧಾನಿಯ ಭ್ರಷ್ಟಾಚಾರ, ಸೆಕ್ಸ್ ಕಾಂಡಗಳು, ದುರಾಡಳಿತ, ಅಧಿಕಾರ ದುರುಪಯೋಗ ಇಟಲಿಯಲ್ಲಿ ತಾಂಡವವಾಡುತ್ತಿತ್ತು. ಆರ್ಥಿಕ ನಿರ್ವಹಣೆಯ ಅಭಾವದಿಂದ ತೀವ್ರ ಆರ್ಥಿಕ ಬಿಕ್ಕಟ್ಟು ಸಹ ಎದುರಾಯಿತು. ಇಟಲಿಯ ಸಾಲ ಸಹ ಅಗಾಧವಾಗಿ ಏರಿದೆ. ಕೊನೆಗೂ ಅವರ ಸಮ್ಮಿಶ್ರ ಸರ್ಕಾರದ ಪಕ್ಷವೊಂದು ಬೆಂಬಲ ವಾಪಸು ಪಡೆದಿದ್ದರಿಂದ ಅವರ ಸರ್ಕಾರ ಬಿದ್ದು ಹೋಯಿತು. ಅಲ್ಲೂ 'ಟೆಕ್ನೋಕ್ರಾಟ್' ಮಾರಿಯೋ ಮೊಂಟಿ (ಮಾಜಿ ಯುರೋಪಿಯನ್ ಕಮಿಶನರ್) ಪ್ರಧಾನಿ ಅಧಿಕಾರ ವಹಿಸಿಕೊಂಡು ಮಧ್ಯಂತರ ಸರ್ಕಾರ ರಚಿಸಿದ್ದಾರೆ ಎಂಬುದು ಆಕಸ್ಮಿಕವೇನಲ್ಲ.

ಹೊಸ ಸರ್ಕಾರದ ಮೂರನೇ ಒಂದ ಭಾಗದ ಸದಸ್ಯರು ಅವರಂತೆ 'ಟೆಕ್ನೋಕ್ರಾಟ್'ಗಳ ಮೊಂಟಿ ಸರ್ಕಾರ ಸಹ ಸಾಲ ಕಡಿತ ಮಾಡಲು ಜನತೆಯ ಮೇಲೆ ತೀವ್ರ ಕಡಿತ ಹೊರಿಸಲಿದ್ದಾರ ಈಗಾಗಲೇ ಮೊಂಟಿ ಸಕಾರದ ಪ್ರಸ್ತಾವಿ ಕಡಿತಗಳ ವಿರುದ್ಧ ಸಾವಿರಾರು ವಿದ್ಯಾರ್ಥಿಗಳ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದ್ದಾರ ಇಟಲಿ ಮುಂದಿನ ವಾರಗಳಲ್ಲಿ ಏನು ಮಾಡುತ್ತ ಎಂಬುದರ ಮೇಲೆ ಯುರೋ-ಝೋನ ಭವಿಷ್ಯ ನಿರ್ಧಾರಿತವಾಗುತ್ತದೆ ಎಂದು ಅವರ ಹೇಳಿದ್ದಾರೆ.

ಸ್ಪಾನಿಷ್ ಸರ್ಕಾರ ಬದಲಾವಣೆಯದು ಇನ್ನೊಂದು ಕಥೆ. ಇಲ್ಲಿ ಸಹ ಕಡಿತಗಳ ಆರ್ಥಿ ಬಿಕ್ಕಟ್ಟಿನಿಂದ ಉಂಟಾದ ಸತತ ರಾಜಕೀಯ ಬಿಕ್ಕಟ್ಟು ಉಂಟಾಗಿತ್ತು. ಅಲ್ಲಿನ ಹಿಂದಿ ಸೋಶಲಿಸ್ಟ್ ಸರ್ಕಾರ ಈ ರಾಜಕೀಯ ಬಿಕ್ಕಟ್ ಎದುರಿಸಲು ಆರು ತಿಂಗಳ ಮೊದಲ ಚುನಾವಣೆ ನಡೆಸಿತು. ಆದರೆ ಎರಡು ಸತ ಬಾರಿ ಅಧಿಕಾರದಲ್ಲಿ ಇದ್ದ ಸೋಶಲಿಸ್ಟ್ ಸರ್ಕಾ ಚುನಾವಣೆ ಸೋತು ಇನ್ನೂ ಬಲಪಂಥೀಯ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿದೆ. 197 ರಲ್ಲಿ ಫ್ರಾಂಕೊ ಸರ್ವಾಧಿಕಾರಿಯ ಆಡಳಿ ಕೊನೆಗೊಂಡ ನಂತರ ಎಲ್ಲಾ ಚುನಾವಣೆಗಳ ಅತ್ಯಂತ ಕಳಪೆ ಪ್ರದರ್ಶನ ಸೋಶಲಿಸ್ಟರದು ಈ ಬಾರಿ. ಹೊಸ ಬಲಪಂಥೀಯ ಸರ್ಕಾರಕೂ ಇನ್ನಷ್ಟು ಹೆಚ್ಚು ಕಡಿತ ಮತ್ತು ಐಎಂಎಫ್ ಯುರೋಪಿಯನ್ ಒಕ್ಕೂಟ ಮತ್ತು ಬ್ಯಾಂಕುಗ ಶಿಫಾರಸು ಪಾಲಿಸುವುದು ಅನಿವಾರ್ಯ ಎನ್ನುವುದು ಬಿಟ್ಟರೆ ಬೇರೆ ಹೊಸ ಯೋಚನೆಗಳ ಏನು ಇದ್ದ ಹಾಗೆ ಕಾಣುವುದಿಲ್ಲ.

ಹೀಗೆ ಮೂರೂ ದೇಶಗಳಲ್ಲಿ ಸರ್ಕಾ ಬಿದ್ದರೂ, ಜನರ ಸ್ಥಿತಿ ಉರಿಯುತ್ತಿರು ಬಾಣಲೆಯಿಂದ ಬೆಂಕಿಗೆ ಬಿದ್ದ ಹಾಗಿದೆ.

ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ.....

ಸುಳ್ಯ:

ಸುಳ್ಯ ತಾಲೂಕು ಕಚೇರಿ ಎದುರು ಸುಳ್ಯ ತಾಲೂಕು ಬೀಡಿ ಕಾರ್ಮಿಕ ಸಂಘದ ವತಿಯಿಂದ ಪ್ರತಿಭಟನಾಕಾರರು ಸಂಘದ ಕಚೇರಿಯಿಂದ ತಾಲೂಕು ಕಚೇರಿ ವರೆಗೆ ಮೆರವಣಿಗೆಯಲ್ಲಿ ಸಾಗಿ ಧರಣಿ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಪಿ.ರಾಬರ್ಟ್ ಡಿಸೋಜ ಮಾತನಾಡಿದರು. ಸಂಘದ ಅಧ್ಯಕ್ಷ ಕೆ. ಸರಸ್ವತಿ, ರಿಚರ್ಡ್ ಕ್ರಾಸ್ತಾ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ವಿಟ್ಲ :

ವಿಟ್ಲ ಫಿರ್ಕಾ ಬೀಡಿ ಕೆಲಸಗಾರರ ಸಂಘದ ವತಿಯಿಂದ ವಿಟ್ಲ ನಾಡ ಕಚೇರಿಯ ಎದುರು ಪ್ರತಿಭಟನೆ ನಡೆಸಲಾಯಿತು. ಅದಕ್ಕೂ ಮೊದಲು ಸಿಐಟಿಯು ಕಚೇರಿಯಿಂದ ನಾಡ ಕಚೇರಿ ವರೆಗೆ ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿದರು. ಸಂಘದ ಕಾರ್ಯದರ್ಶಿ ರಾಮಣ್ಣ ವಿಟ್ಲ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಂಘದ ಕಾರ್ಯಕರ್ತರಾದ ಪ್ರೇಮ, ಚೆನ್ನಪ್ಪ, ಆನಂದ ಶೆಟ್ಟಿಗಾರ್, ಹಮೀದ್, ದಿನೇಶ್ ಆಚಾರಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿಸಿರೋಡ್: ಬಂಟ್ವಾಳ ಬೀಡಿ ಕೆಲಸಗಾರರ ಸಂಘ ಮತ್ತು ಪಾಣೆ ಮಂಗಳೂರು ಫಿರ್ಕಾ ಬೀಡಿ ಕೆಲಸಗಾರರ ಸಂಘಗಳು ಜಂಟಿಯಾಗಿ ಬಿ.ಸಿ.ರೋಡಿನಲ್ಲಿರುವ ಬಂಟ್ವಾಳ ತಾಲೂಕು ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದವು. ಪ್ರತಿಭಟನಾಕಾರರನ್ನುದ್ದೇಶಿಸಿ ದ.ಕ.ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ಸಂಘಟನೆಗಳ ಮುಖಂಡರಾದ ವಿಮಲ, ಸಂಜೀವ ಬಂಗೇರ, ಮಾರಪ್ಪ, ಜಾನಕಿ ಶಂಭೂರು, ವಾಸು ಗಟ್ಟಿ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಆಶಾ ಕಾರ್ಯಕರ್ತೆಯರ ಬದುಕು ನಿರಾಶೆಯಲ್ಲಿ ಕಮರಿ ಹೋಗಬೇಕೇ?

ಸಂಚಿಕೆ 46 ರ ಲೇಖನದ ಮುಂದುವರಿದ ಭಾಗ

ನಮ್ಮ ರಾಜ್ಯದಲ್ಲಿ ಆಶಾದವರ ಸಂಕಷ್ಟ

ಹಗಲು-ರಾತ್ರೆ ಜನತೆಗೆ ಸ್ಪಂದಿಸಿ, ಸ್ವಂತ ಹಣ ಖರ್ಚು ಮಾಡಿದರೂ ಬಿಲ್ ಪಡೆಯಲಾಗದು. ಹಿರಿಯ ವೈದ್ಯಾಧಿಕಾರಿಗಳ, ಕಿರಿಯ ಆರೋಗ್ಯ ಸಹಾಯಕಿರ ಸಹಿ ಪಡೆಯಲು ಇನ್ನಿಲ್ಲದ ಹಿಂಸೆ ಅನುಭವಿಸುವುದು, ತಾವು ಮಾಡಿದ ಕೆಲಸಕ್ಕೂ ಬೇರೆಯವರಲ್ಲಿ ಕೈ ಚಾಚುವುದು, ಅಪಮಾನ ಸಹಿಸುವುದು ಇವರ ಪಾಡಾಗಿದೆ.

ಕರ್ನಾಟಕದಲ್ಲಿ ಪ್ರಾರಂಭದಲ್ಲಿ ಸರ್ಕಾರ ಗುರುತಿಸಿದ ಬುಡಕಟ್ಟು ಜಿಲ್ಲೆಗಳಾದ ಮೈಸೂರು, ಕೊಡಗು, ಚಾಮರಾಜನಗರಗಳಲ್ಲಿ ಹಾಗೂ ಹಿಂದುಳಿದ ಜಿಲ್ಲೆಗಳಾದ ಬೀದರ, ಗುಲ್ಬರ್ಗ, ಬಾಗಲಕೋಟೆ, ಕೊಪ್ಪಳ, ರಾಯಚೂರು, ಬಿಜಾಪುರ ಜಿಲ್ಲೆಗಳಲ್ಲಿ NRHM ಅಡಿಯಲ್ಲಿ ASHA ನೇಮಕಾತಿ ಪ್ರಕ್ರಿಯೆ 2007 ರಲ್ಲಿ ಪ್ರಾರಂಭವಾಯಿತು. 2007 ರ ಸುತ್ತೋಲೆ ಪ್ರಕಾರ ಎ.ಎನ್ ಎಂ ಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಈಗಾಗಲೇ ಈ ಕೆಲಸ ನಿರ್ವಹಿಸುತ್ತಿದ್ದು, ಆರೋಗ್ಯ ಸಂಬಂಧಿ ಕೆಲಸಗಳ ಒತ್ತಡದಿಂದಾಗಿ ಇದನ್ನು ನಿಲ್ಲಿಸಿ, ಆ ಅಂತರ ನೀಗಿಸಲು ASHA ಯೋಜನೆ ತಂದಿರುವುದಾಗಿ ಹೇಳಿದೆ.

7ನೇ ತರಗತಿ ಪಾಸಾದವರು ಮತ್ತು 2 ಮಕ್ಕಳ ತಾಯಿಯಾಗಿ 5 ವರ್ಷ ಸಂದವರಿಗೆ ಈ ಆಶಾ ನೇಮಕಾತಿ ಮಾಡಬಹುದೆಂದಿದೆ. ಆರೋಗ್ಯ ವಿಜ್ಞಾನದ ಗಂಧ-ಗಾಳಿ ಇಲ್ಲದ ಈ ಮಹಿಳೆಯರಿಗೆ 21 ದಿನಗಳ ತರಬೇತಿಯಷ್ಟೆ. ಸಮುದಾಯಕ್ಕೆ ಹೋದಾಗ ಇವರು ಅನುಭವಿಸುವ ಕಷ್ಟ ಅಷ್ಟಿಷ್ಟಲ್ಲ. ಏಕೆಂದರೆ ಮಾತ್ರೆ ಇಟ್ಟುಕೊಳ್ಳಲಿಕ್ಕೂ ಇನ್ನೂ ಒಂದು ಕಿಟ್‌ನ್ನೂ ಕೊಟ್ಟಿಲ್ಲ. ಕೆಲಸ ಮಾಡುವ ಸ್ಥಳದಲ್ಲಿ ಆಶಾ ಮಾಹಿತಿ ಕೇಂದ್ರವಾಗಲೀ, ಪ್ರತ್ಯೇಕ ಕೊಠಡಿಯಾಗಲೀ, ಆಶಾ ಕೆಲಸ ಹಾಗೂ ಮಾಹಿತಿ ಇಟ್ಟುಕೊಳ್ಳುವ ಭದ್ರತಾ ಕಪಾಟ ಆಗಲೀ, ವಿಶ್ರಾಂತಿ ಕೋಣೆಯಾಗಲೀ ಇಲ್ಲ. ಹಾಗಾಗಿ **'ಆಶಾದ ಕೆಲಸ ನಿರಾಶಾ'** ಸ್ಥಿತಿಯಲ್ಲಿದೆ ಎಂದರೆ ತಪ್ಪಿಲ್ಲ. ಇಷ್ಟು ವಿಧದ ಕೆಲಸ ಮಾಡಿದರೂ ಆರೋಗ್ಯ ಇಲಾಖೆ ಇವರನ್ನು ತನ್ನ ನೌಕರರೆಂದು ಪರಿಗಣಿಸಿಲ್ಲ. ಕೆಲಸದ ಅವಧಿಯಲ್ಲಿ ಅವಘಡ ಸಂಭವಿಸಿದರೆ ಆರೋಗ್ಯ ಇಲಾಖೆ ಜವಾಬ್ದಾರಿ ಹೊರುತ್ತಿಲ್ಲ. ಪ್ರೋತ್ಸಾಹ ಧನದ ಹೊರತೂ ತಿಂಗಳಿಗೆ ಕನಿಷ್ಟ ಕೂಲಿ ಇಲ್ಲ. ಸಮುದಾಯದ ಕೆಲಸಕ್ಕಾಗಿ ಸಂಪರ್ಕಿಸಲು ವಾಹನ ವ್ಯವಸ್ಥೆಗಳಿಲ್ಲ. ಈ ಬೇಡಿಕೆ ಇಟ್ಟರೆ ಒಂದೇ ಉತ್ತರ. **'ನೀನು ಗೌರವ ಸ್ವಯಂ ಸೇವಕಿ'** ಎಂಬುದೇ ಅದು.

ಹೀಗೆ ಸರ್ಕಾರ ಬಡವರ ಜೀವಕ್ಕೆ ಬೆಲೆಯನ್ನೇ ಇಟ್ಟಿಲ್ಲ; ಅವರು ಮಾಡುವ ಕೆಲಸಕ್ಕೆ ಕವಡೆ ಕಾಸನ್ನೂ ನೀಡುತ್ತಿಲ್ಲ. ಈಗಾಗಲೇ ಉದ್ಯೋಗ ಭದ್ರತೆಯಿಲ್ಲದಿರುವ ಗುತ್ತಿಗೆ ಕಾರ್ಮಿಕರು, ಅಂಗನವಾಡಿ, ಬಿಸಿಯೂಟ, ಅಂಗವಿಕಲರ ವಿವಿಧೋದ್ದೇಶ ಕಾರ್ಯಕರ್ತರು, ಪೌರ-ಗ್ರಾಮಪಂಚಾಯ್ತಿ ಕಾರ್ಮಿಕರ ಸಾಲಿಗೆ ಇವರಿಗಿಂತ ನಿಕೃಷ್ಟ ಜೀವನ ಸಾಗಿಸುವಂತಾದ ಆಶಾ ಕಾರ್ಯಕರ್ತರುಗಳ ಪಡೆ ಸೇರಿತು. ಈ ಹಿನ್ನೆಲೆಯಲ್ಲಿ ಸಮುದಾಯದ ಮಧ್ಯೆ ದುಡಿಯುವ ಮಹಿಳೆಯರಾದ ಇವರೆಲ್ಲಾ ಸಂಘಟಿತರಾಗಿ NRHM ಉಳಿವಿಗಾಗಿ, ಅದರಲ್ಲಿ ಕೆಲಸ ಮಾಡುವ ತಮ್ಮ ಉದ್ಯೋಗ ಭದ್ರತಾ ಹಕ್ಕು-ಸೌಲಭ್ಯಗಳಿಗಾಗಿ ಸಂಘಟಿತರಾಗಿ ಹೋರಾಟಗಳನ್ನು ನಡೆಸುತ್ತಿದ್ದಾರೆ.

ಪ್ರಜ್ಞಾವಂತರು ಈ ಎಲ್ಲಾ ಪ್ರಕ್ರಿಯೆಗಳನ್ನು ವೀಕ್ಷಿಸಿ ಕಣ್ಣುಮುಚ್ಚಿ ಕುಳಿತುಕೊಳ್ಳಲಾರರು. ಅವರು ತಮ್ಮ ನ್ಯಾಯಬದ್ಧವಾದ ಹಕ್ಕುಗಳಿಗಾಗಿ ಸಂಘಟಿತರಾಗಿ ಹೋರಾಟದ ಬಾವುಟ ಎತ್ತೇ ಎತ್ತುತ್ತಾರೆ. NRHM ಜನಸಮುದಾಯದ ಒಳಿತಿಗಾಗಿ ಖಾಯಂ ಆಗಿ ಮುಂದುವರಿಯಬೇಕು, **ಆಶಾ ಕಾರ್ಯಕರ್ತೆಯರನ್ನು ಆರೋಗ್ಯ ಇಲಾಖೆಯ ಖಾಯಂ ನೌಕರರಾಗಿ ಎಲ್ಲಾ ಸೌಲಭ್ಯಗಳೊಂದಿಗೆ ಮುಂದುವರೆಸಬೇಕು ಮುಂತಾದ ಪ್ರಮುಖ ಬೇಡಿಕೆಗಳ ಆಧಾರದಲ್ಲಿ ಅವರು ಈಗಾಗಲೇ ಹಲವು ಹಂತದ ಹೋರಾಟಗಳನ್ನು ನಡೆಸಿ ಚಳುವಳಿಯನ್ನು ವಿಸ್ತಿಸುವ ಹಾದಿಯಲ್ಲಿದ್ದಾರೆ.**

ಕರ್ನಾಟಕ ರಾಜ್ಯ ಆಶಾ ಕಾರ್ಯಕರ್ತೆಯರ ಸಂಘ ದ ಮೂಲಕ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ಈ ಚಳುವಳಿಗೆ ನಾಯಕತ್ವ ನೀಡುತ್ತಿದ್ದು ವಿಚಾರ ಸಂಕಿರಣ, ಇತ್ಯಾದಿಗಳ ಮೂಲಕ ಸೈದ್ಧಾಂತಿಕ ತರಬೇತಿ ನೀಡಿ ಗಂಭೀರ ಹೋರಾಟಕ್ಕೆ ಸಜ್ಜುಗೊಳಿಸುತ್ತಿದೆ.

ಮೂವರನ್ನು ಸೋಲಿಸಿ

ಪುಟ 5 ರಿಂದ

ಜಿಲ್ಲೆಯನ್ನ ಈ ರೀತಿಯ ದುಸ್ಥಿಗೆ ತಳ್ಳಿದ ಹಾಗೂ ಜಿಲ್ಲೆಯ ಜನತೆ ನೆರೆ ಹಾವಳಿಯಿಂದ ಅತಿ ವೃಷ್ಟಿಯಿಂದ ವಾರಗಟ್ಟಲೆ ಜೀವವನ್ನ ಕೈಯಲ್ಲಿ ಹಿಡಿದು ಕುಳಿತಿದ್ದಾಗ ಅವರ ನೆರವಿಗೆ ದಾವಿಸದೇ ವೈಯಕ್ತಿಕ ಲಾಭಕ್ಕಾಗಿ ರೆಸಾರ್ಟ್ ರಾಜಕಾರಣದಲ್ಲಿ ತೊಡಗಿದ್ದ ಲೂಟಿ ಕೋರತನವೇ ಅಭಿವೃದ್ಧಿ ಮತ್ತು ರಾಜಕಾರಣವೆಂದುಕೊಂಡಿರುವವರಿಗೆ ಜನಗಳೇಕೆ ಮತ ನೀಡಬೇಕು.

ಬೆಲೆ ಏರಿಕೆಯ ವ್ಯಾಪಕವಾದ ಬೆಂಕಿಯಲ್ಲಿ ಜನರನ್ನ ಬೇಯಿಸುತ್ತಿರುವ ದೇಶದ ಮೂರು ಲಕ್ಷಕ್ಕೂ ಅಧಿಕ ಕೋಟಿ ರೂಗಳನ್ನ ಕೇಂದ್ರ ಸರ್ಕಾರಕ್ಕೆ ನಷ್ಟವಾಗುವಂತೆ ಮಾಡಿರುವ ಹಾಗೂ ತನ್ನ ಇಬ್ಬರು ಮಾಜಿ ಮಂತ್ರಿಗಳು ಜೈಲು ಸೇರುವಂತ ಪರಿಸ್ಥಿತಿ ತಂದುಕೊಂಡು ಜನ ವಿರೋಧಿಯಾಗಿರುವ, ಇಡಿ ದೇಶವನ್ನ ಬಂಡವಾಳದಾರರ ಲೂಟಿಗೆ ಒಳಪಡಿಸುವ ಮತ್ತು ರೈತ-ಕೂಲಿಕಾರರನ್ನ ಆತ್ಮಹತ್ಯೆಗೆ ಹಾಗು ಹಸಿವಿನ ಸಾವಿಗೆ ತಳ್ಳಿರುವ, ಕೋಟ್ಯಾಂತರ ಚಿಲ್ಲರೆ ವ್ಯಾಪಾರಿಗಳನ್ನ ಹಾಗು ಕಾರ್ಮಿಕರನ್ನ ಬೀದಿಗೆ ತಳ್ಳುವ ಮತ್ತು ದೊಡ್ಡ ಬಂಡವಾಳರದಾರರ ಲೂಟಿಗೆ ಗ್ರಾಹಕರನ್ನ ಈಡು ಮಾಡಲು ಹೊರಟಿರುವ ಮತ್ತು ಸಾರ್ವಜನಿಕ ರಂಗದ ನಾಶಕ್ಕೆ ಮುಂದಾಗುತ್ತಿರುವ ಅದೇ ರೀತಿ ಗಣಿ ಸಂಪನ್ಮೂಲವನ್ನ ಮುಂದಿನ ಪೀಳಿಗೆಗೆ ಉಳಿಸಲು ಬೇಕಾದ ಖನಿಜ ನೀತಿ ತಾರದೇ ಲೂಟಿಗೆ ಅವಕಾಶವಾಗುವಂತ ನೀತಿ ಅನುಸರಿಸುವ ಕಾಂಗ್ರೇಸ್ ಪಕ್ಷಕ್ಕೆ ಜನರ ಬಳಿ ತೆರಳಿ ಮತ ಕೇಳುವ ಅರ್ಹತೆ ಇಲ್ಲ.

ಭ್ರಷ್ಟತೆ ಭಂಡತನ, ಲೂಟಿ ಕೋರತನ. ಭೂ ಗಳ್ಳತನದಲ್ಲಿ ತೊಡಗಿರುವ ಹಾಗು ಜನರನ್ನ ವಂಚಿಸಿ ವಿಶ್ವಾಸ ದ್ರೋಹ ಎಸಗಿರುವ ಇವರಿಗೆ ಮತ ಪಡೆಯುವ ಯಾವ ಅರ್ಹತೆಯು ಇಲ್ಲದಿರುವುದರಿಂದ ಇವರೆಲ್ಲರನ್ನು ತಿರಸ್ಕರಿಸಲು ಸಿಪಿಐ(ಎಂ) ಪಕ್ಷ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಮತದಾರರಲ್ಲಿ ಮನವಿ ಮಾಡುತ್ತದೆ.

ಚುನಾವಣೆಯಲ್ಲಿ ಎಲ್ಲಾ ಅಭ್ಯರ್ಥಿಗಳನ್ನು ತಿರಸ್ಕರಿಸಲು ಅವಕಾಶವಿದ್ದು ಮತದಾರ ಬಂಧುಗಳು ಮತ ದಾನ ಕೇಂದ್ರಕ್ಕೆ ತೆರಳಿ ಮತದಾನದ ಕೇಂದ್ರದ ಅಧಿಕಾರಿಗಳಲ್ಲಿ ಎಲ್ಲಾ ಅಭ್ಯರ್ಥಿಗಳ ನಿರಾಕರಣೆಯ ಫಾರಂ ಪಡೆದು ನಿರಾಕರಣೆಯನ್ನ ನೊಂದಾಯಿಸಿ ಬರಲು ಸಿಪಿಐ (ಎಂ). ಬಳ್ಳಾರಿ ಜಿಲ್ಲಾ ಸಮಿತಿ ಮನವಿ ಮಾಡಿದೆ.

(ಯು.ಬಸವರಾಜ್)
ಜಿಲ್ಲಾ ಕಾರ್ಯದರ್ಶಿ

ಚಿಕ್ಕಬಳ್ಳಾಪುರ: ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ಸಮಾವೇಶ

ಪುಟ 4 ರಿಂದ

ಸರ್ಕಾರಕ್ಕೆ ಸಲ್ಲಿಸಿದೆ. ಈ ಆಯೋಗವು ಸರ್ಕಾರ ದೃಢ ತೀರ್ಮಾನಗಳನ್ನು ತೆಗೆದುಕೊಂಡು ಅಭಿವೃದ್ಧಿಯ ಪಾಲುದಾರಾಗಿಸಬೇಕೆಂದು ಒತ್ತಾಯಿಸಿದೆ. ಅದೇ ರೀತಿ ಶಿಕ್ಷಣ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ಶಿಫಾರಸ್ಸು ಮಾಡಿದೆ. ಆದರೆ ಭಾರತ ಸರ್ಕಾರ ಇದರ ಬಗ್ಗೆ ದೃಢವಾದ ತೀರ್ಮಾನ ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ ಎಂದು ಟೀಕಿಸಿದರು. ನಂತರ ಮಾತನಾಡಿದ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಸಮರ್ಪಕ ಮೀಸಲಾತಿ ಸೌಲಭ್ಯ ಸೇರಿದಂತೆ ಇತರ ಸೌಲಭ್ಯಗಳಿಂದ ವಂಚಿತರಾಗಿರುವ ಮುಸ್ಲಿಂ ಸಮುದಾಯ ದೇಶದಲ್ಲಿ ಶೇಕಡಾ 14 ರಷ್ಟಿದೆ. ಕೆಲವು ರಾಜ್ಯಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಶೇಕಡಾ 10 ರಷ್ಟು ಮೀಸಲಾತಿ ಸೌಲಭ್ಯ ಇದ್ದರೆ, ಕರ್ನಾಟಕದಲ್ಲಿ ಶೇಕಡಾ 4 ರಷ್ಟು ಮಾತ್ರ ಮೀಸಲಾತಿ ಸೌಲಭ್ಯ ಇದೆ. ರಾಜ್ಯದಲ್ಲಿ ಶೇಕಡಾ 13 ರಷ್ಟಿರುವ ಮುಸ್ಲಿಂ ಸಮುದಾಯವು ಶೈಕ್ಷಣಿಕ, ಸಮಾಜಿಕ ಮತ್ತು ಆರ್ಥಿಕವಾಗಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ ಎಂದು ವ್ಯಕ್ತಪಡಿಸಿದರು. ನಂತರ ಮಾತನಾಡಿದ ಮುಸ್ಲಿಂ ಹಕ್ಕು ರಾಜ್ಯ ಸಮಿತಿಯ ಸಂಚಾಲಕರಾದ ಮುಜೀಬ್ ದೇಶದಲ್ಲಿ ಮುಸ್ಲಿಂ ಎರಡನೇ ದರ್ಜೆಯ ಪ್ರಜೆ ಎಂಬಂತೆ ಕಾಣಲಾಗುತ್ತಿದೆ. ಸಮಾಜದ ಮುಖ್ಯ ವಾಹಿನಿಗೆ ಬರಲಿಕ್ಕೆ ಅವಕಾಶ ನೀಡುತ್ತಿಲ್ಲ, ಸಮುದಾಯದಲ್ಲಿ ಬಹುತೇಕ ಮಂದಿ ಶಿಕ್ಷಣದಿಂದ ವಂಚಿತರಾಗುತ್ತಿರುವುದರಿಂದ ಶೇಕಡಾ 4 ರಷ್ಟು ಮಂದಿ ಮಾತ್ರ ಉನ್ನತ ವ್ಯಾಸಂಗ ಪೂರೈಸುತ್ತಾರೆ ಎಂದು ತಿಳಿಸಿದರು.

ನಂತರ ಜಿಲ್ಲಾ ಸಂಚಾಲಕರಾದ ಮೊಹಮ್ಮದ್ ಅಕ್ರಂ ಮಾತನಾಡುತ್ತ ಸಾಚಾರ್ ಸಮಿತಿ ಮತ್ತು ರಂಗನಾಥ್ ಮಿಶ್ರ ಸಮಿತಿಯ ಶಿಫಾರಸ್ಸುಗಳನ್ನು ಜಾರಿ ಮಾಡುವುದು ಸೇರಿದಂತೆ ಇತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮುಸ್ಲಿಂ ಅಲ್ಪಸಂಖ್ಯಾತರ ಸಮನ್ವಯ ಸಮಿತಿ ಡಿಸೆಂಬರ್ 01 ರಂದು ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆಯನ್ನು ನಡೆಸಲು ನಿರ್ಧರಿಸಲಾಗಿದೆ. ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ಕೈಗೊಳ್ಳುವುದರ ಮೂಲಕ ಈ ಹೋರಾಟಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು. ಈ ಸಮಾವೇಶದಲ್ಲಿ ಜಿಲ್ಲಾ ಸಮಿತಿಯ ಚಿಂತಾಮಣಿಯ ಜಹೀರ್, ಚಿಕ್ಕಬಳ್ಳಾಪುರದ ಸರ್ದಾರ್, ಗೌರಿಬಿದನೂರಿನ ಮುಷೀರ್, ಬಾಗೇಪಲ್ಲಿ ಮೆಕಾನಿಕ್ ಬಾಬು, ಮಾರ್ಗಾನುಕುಂಟೆ ಬಾಬಾಜಾನ್, ರೋಷನ್ ಹಾರ್ಡ್‌ವೇರ್‌ನ ಷಫಿ, ಜಬೀವುಲ್ಲಾ, ಮದ್ದೇಪಲ್ಲಿಯ ಭಾಷಾ, ಪಾತಪಾಳ್ಯದ ಯೂಸೂಫ್ ಖಾನ್ ಮುಂತದವರು ಪಾಲ್ಗೊಂಡಿದ್ದರು.





ಖ್ಯಾತ ಅರ್ಥಶಾಸ್ತ್ರಜ್ಞೆ ಡಾ. ಉತ್ಸಾ ಪಟ್ನಾಯಕ್ ಅವರು ಅಕ್ಟೋಬರ್ 29-30 ರಂದು ಬೆಂಗಳೂರಿನಲ್ಲಿ ನಡೆದ ರೈತ-ಕೃಷಿಕೂಲಿಕಾರರ ಸಮಾವೇಶ ಉದ್ಘಾಟಿಸಿ ಮಾಡಿದ ಭಾಷಣ

ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ :

ಭಾರತದ ಕೃಷಿ ಭೂಮಿಯ ಮೇಲೆ ಬಹುರಾಷ್ಟ್ರೀಯ ಕಂಪನಿಗಳ ಕಣ್ಣು

– ಉತ್ಸಾ ಪಟ್ನಾಯಕ್

ಡಿಸೆಂಬರ್ 1 ಮತ್ತು 2 ರಂದು ಬೆಂಗಳೂರಿನಲ್ಲಿ ಕೃಷಿಯಲ್ಲಿ ವಿಶ್ವ ಹೂಡಿಕೆದಾರರ ಸಮಾವೇಶ ನಡೆಯುತ್ತಿರುವುದನ್ನು ನಾವು ಪ್ರತಿಭಟಿಸಬೇಕು. ಈ ರೀತಿ ಕೃಷಿಯಲ್ಲಿ ಕಾರ್ಪೋರೇಟ್ ಸಂಸ್ಥೆಗಳು ಬಂಡವಾಳ ಹೂಡುತ್ತಿರುವುದು ಒಂದು ಐತಿಹಾಸಿಕ ಕ್ರಿಯೆ. ಆದ್ದರಿಂದ ಅವರೇಕೆ ಬಂಡವಾಳ ಹೂಡುತ್ತಿದ್ದಾರೆ ? ಅದರ ಪರಿಣಾಮಗಳೇನು ? ಆದರಿಂದ ದೇಶದ ಆಹಾರ ಭದ್ರತೆಯ ಮೇಲೆ ಯಾವ ಪರಿಣಾಮಗಳು ಉಂಟಾಗುತ್ತವೆ ಎಂಬ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ.

ಈ ರೀತಿಯ ಸಮಾವೇಶಗಳ ಮೂಲಕ ನಮ್ಮಂತಹ ಮೂರನೇ ಜಗತ್ತಿನ ದೇಶಗಳ ಲಕ್ಷಾಂತರ ಎಕರೆ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಹಸ್ತಾಂತರಿಸಲಾಗುತ್ತಿದೆ. ಇದರಿಂದ ಆಹಾರ ಭದ್ರತೆ ಮೇಲೆ, ಜನತೆ-ರೈತಾಪಿ ಜನರ ಜೀವನದ ಮೇಲೆ ಮಾರಕವಾದ ಪರಿಣಾಮಗಳುಂಟಾಗುತ್ತವೆ.

ಈ ರೀತಿ ಭೂಮಿಯನ್ನು ಮುಂದುವರಿದ ಬಂಡವಾಳಶಾಹಿ ದೇಶಗಳ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಕೈ ವಶ ಮಾಡಿಕೊಳ್ಳುತ್ತಿರುವುದೇಕೆ ? ಆ ದೇಶಗಳಲ್ಲಿ ಹವಾಮಾನ ವೈಫಲ್ಯದಿಂದಾಗಿ ವರ್ಷ ಪೂರ್ತಿ ಬೆಳೆ ಬೆಳೆಯುವಂತಹ ವಾತಾವರಣ ಇಲ್ಲ. ಭೂಮಿಯೆಲ್ಲಾ ಶೀತಲೀಕರಣಗೊಳ್ಳುತ್ತದೆ. ಮೇ ತಿಂಗಳಿಂದ ಸೆಪ್ಟೆಂಬರ್ ಅವಧಿಯಲ್ಲಿ ಮಾತ್ರ ಕೇವಲ ಹಣ್ಣು, ತರಕಾರಿ ಬೆಳೆಯಬಹುದು. ಹೀಗಾಗಿ ಈ ರಾಷ್ಟ್ರಗಳು ಆಹಾರ ಉತ್ಪಾದನೆಗಳಿಗಾಗಿ ಪ್ರಮುಖವಾಗಿ ಏಷ್ಯಾ ಮತ್ತು ಆಫ್ರಿಕಾದ ದೇಶಗಳನ್ನು ಅವಲಂಬಿಸಿವೆ. ಆಹಾರ ಉತ್ಪಾದಿಸುವಂತಹ ಕಾರ್ಪೋರೇಟ್ ಸಂಸ್ಥೆಗಳಿಗೆ ಅಲ್ಲಿನ ಸರ್ಕಾರಗಳು ಹೆಚ್ಚಿನ 'ಸಬ್ಸಿಡಿ ನೀಡಿ ಪ್ರೋತ್ಸಾಹ ನೀಡುತ್ತಿರುವುದರಿಂದ ಅವು ಭಾರತದಂತಹ ದೇಶದ ಕೃಷಿ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳಲು ಸ್ಪರ್ಧೆಗಿಳಿದಿವೆ.

ಕಾರ್ಪೋರೇಟ್ ಸಂಸ್ಥೆಗಳು ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತಹ ಪ್ರಕ್ರಿಯೆ ಕೇವಲ ಭಾರತಕ್ಕೆ ಸೀಮಿತವಾಗಿಲ್ಲ. ಚೀನಾದ ಕಾರ್ಪೋರೇಟ್ ಸಂಸ್ಥೆಗಳು ತಾಂಜೇನಿಯಾದ ಕೃಷಿ ಭೂಮಿಯ ಮೇಲೆ ಕಣ್ಣಿಟ್ಟಿದ್ದರೆ, ಭಾರತದ ಕಾರ್ಪೋರೇಟ್ ಸಂಸ್ಥೆಗಳು ಇಥಿಯೋಪಿಯಾದ ಭೂಮಿಯನ್ನು ವಶಪಡಿಸಿಕೊಳ್ಳುತ್ತಿವೆ.

ಕಳೆದ 200 ವರ್ಷಗಳು ಅಥವಾ ವಸಾಹತು ಕಾಲದಿಂದಲೂ ಪಾಶ್ಚಾತ್ಯ ರಾಷ್ಟ್ರಗಳು ಭಾರತ ಮತ್ತು ಚೀನಾದ ಆಹಾರ ಉತ್ಪನ್ನಗಳ ಮೇಲೆ ಅವಲಂಬಿತವಾಗಿವೆ. ಈಗ ನಡೆಯುತ್ತಿರುವ ಹೂಡಿಕೆ ಸಮಾವೇಶ ಆಶ್ಚರ್ಯಕರವಲ್ಲ. ಈಗಲೂ ಆ ದೇಶಗಳಲ್ಲಿ ಜೀವ ವೈವಿಧ್ಯತೆ ಇಲ್ಲದಿರುವುದರಿಂದ ಕಾಫಿ ಬೀಜದಿಂದ ಸಕ್ಕರೆ ವರೆಗಿನ ಎಲ್ಲವನ್ನೂ ಆಮದು ಮಾಡಿಕೊಳ್ಳುವ ಸ್ಥಿತಿಯಲ್ಲೇ ಇವೆ.

ಹಿಂದೆ ಆದರೆ ನಮ್ಮಲ್ಲಿನ ಆಹಾರ ಉತ್ಪನ್ನಗಳನ್ನು ಆ ದೇಶಗಳಿಗೆ ಸಾಗಿಸಬೇಕಾದರೆ ಹಡಗುಗಳ ಮೂಲಕ 6-8 ವಾರಗಳ ಕಾಲ ಹಿಡಿಯುತ್ತಿತ್ತು. ಈಗ ಕೇವಲ 6 ಗಂಟೆಗಳಲ್ಲಿ ಅಲ್ಲಿಗೆ ಸಾಗಿಸಬಹುದು. ಆದ್ದರಿಂದ ಅವರು ತಮಗೆ ಬೇಕಾದ ತಾಜಾ ಹಣ್ಣು, ತರಕಾರಿ ಮತ್ತು ಆಹಾರಕ್ಕೆ ನಮ್ಮ ಮೇಲೆಯೇ ಅವಲಂಬಿಸಿದ್ದಾರೆ. ಇಂತಹದ್ದರಿಂದ ನಮ್ಮ ದೇಶದ ರೈತರಿಗೆ ಅನುಕೂಲವಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ವಸಾಹತು ಕಾಲದಲ್ಲಿ ಅವುಗಳನ್ನು ಸಂಗ್ರಹಿಸಿದರು. ನಮ್ಮ ರೈತರ ಮೇಲೆ ದುಬಾರಿ ತೆರಿಗೆ ವಿಧಿಸಿದರು. ಅಕ್ಷರಶ: ಅವರನ್ನು ಕೊಳ್ಳೆ ಹೊಡೆದರು. ಇಂತಹ ಶೋಷಣೆ ಶತಮಾನಗಳ ಕಾಲ ನಡೆಯಿತು. ನಮ್ಮಲ್ಲಿ ಬೆಳೆದದ್ದನ್ನೆಲ್ಲಾ ದೋಚಿದರು. ಇಂತಹದ್ದರ ಪರಿಣಾಮವಾಗಿ ನಮ್ಮಲ್ಲಿ ಆಹಾರ ಕೊರತೆಗಳುಂಟಾದವು. ಬಂಗಾಳ ಕಂಡಂತಹ ಅತ್ಯಂತ ದುರಂತಮಯ ಬರಗಳು ಸಂಭವಿಸಿದವು. ಆದ್ದರಿಂದ ಜನತೆ ಸಿಡಿದೆದ್ದರು. ಚಳುವಳಿಗಳು ಬೆಳೆದು ಬಂದವು.

1900 ರಲ್ಲಿ ನಮಗೆ ಲಭ್ಯವಿದ್ದ ತಲಾವಾರು ಆಹಾರ(ವರ್ಷಕ್ಕೆ) 200 ಕೆ.ಜಿ.ಗಳು. 1940 ಕ್ಕೆ ಅದು ಕೇವಲ 136 ಕೆ.ಜಿ.ಗೆ ಇಳಿಯಿತು. ಇಂತಹದ್ದನ್ನೆಲ್ಲಾ ನೋಡಿದ ನಮ್ಮವರು ಆಹಾರ ಭದ್ರತೆಗಾಗಿ ಶ್ರಮಿಸಿದರು. ಅದರಲ್ಲಿ ನಾವು ಯಶಸ್ವಿಯೂ ಆದೆವು. ಹಾಗಾಗಿ ನಾವು ಕೃಷಿಯಲ್ಲಿ ರಕ್ಷಣಾ ಕ್ರಮಗಳನ್ನು ಕೈಗೊಂಡೆವು.

ಆದ್ದರಿಂದ ನಮ್ಮ ಆಹಾರೋತ್ಪಾದನೆ ಹೆಚ್ಚಾಯಿತು. ತಲಾವಾರು ಆಹಾರ ಲಭ್ಯತೆ 136 ಕೆ.ಜಿ.ಗಳಿಂದ 185 ಕೆ.ಜಿ.ಗಳಿಗೆ ಏರಿತು. ಆದರೂ 1900 ರಲ್ಲಿದ್ದ ಮಟ್ಟಕ್ಕೆ ನಾವು ಏರಲು ಆಗಲಿಲ್ಲ. ಹಾಗಿದ್ದರೂ ಆಹಾರೋತ್ಪಾದನೆಯಲ್ಲಿ ನಾವು ಸ್ವಾವಲಂಬಿಗಳಾದೆವು. ಆದರೆ ಕಳೆದ 20 ವರ್ಷಗಳ ಹೊಸ ಆರ್ಥಿಕ ನೀತಿಗಳು ಅವನ್ನು ತಿರುವು-ಮುರುವು ಮಾಡಿವೆ.

ಕಳೆದ 20 ವರ್ಷಗಳಲ್ಲಿ ನಮ್ಮ ಉತ್ಪಾದನೆ ಕುಸಿಯುತ್ತಿದೆ. ಆದರೆ ಸಂತ್ರಸ್ಥ ಜನತೆ ಇದನ್ನು ನಂಬುತ್ತಿಲ್ಲ. ಅವರು ಕೇವಲ ಶೇ. 10 ರಷ್ಟಿದ್ದಾರೆ. ನಮ್ಮ ಜನಗಳು ಬಡವರಾಗುತ್ತಿದ್ದಾರೆ. ಹಳ್ಳಿಯ ಜನರು, ಸ್ಲಂಗಳಲ್ಲಿ ವಾಸಿಸುವವರು ಹಸಿವಿನಿಂದ ನರಳುತ್ತಿದ್ದಾರೆ. ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಹೊಸ ಆರ್ಥಿಕ ನೀತಿಗಳು ಸಮಸ್ಯೆಗಳನ್ನು ಬಿಕ್ಕಟ್ಟಾಗಿ ಪರಿವರ್ತಿಸಿವೆ. ಬಹಳ ಮುಖ್ಯವಾಗಿ ಈ ನೀತಿಗಳಿಂದಾಗಿ ಕೃಷಿಯಲ್ಲಿ ಯಾವುದೇ ಸಾರ್ವಜನಿಕ ಹೂಡಿಕೆಯಾಗುವುದಿಲ್ಲ. ಎಲ್ಲವನ್ನು ಖಾಸಗಿಗೆ, ಕಾರ್ಪೋರೇಟ್ ವಲಯಕ್ಕೆ ಬಿಡಲಾಗಿದೆ. ಕೃಷಿ ಉತ್ಪನ್ನಗಳಿಗೆ ಬೆಲೆ ಸಿಗುತ್ತಿಲ್ಲ. ಕೃಷಿ ಆದಾಯ ಕುಸಿಯುತ್ತಿದೆ.

ಆದರೆ ಕೇಂದ್ರ ಸರ್ಕಾರ ಈ ಸಮಸ್ಯೆಗಳಿಂದ ಹೊರಬರಲು

ಮುಕ್ತ ವ್ಯಾಪಾರದ ಹಾಗೂ ವಿದೇಶಿ ಹೂಡಿಕೆಯ ಮಾತಾಡುತ್ತದೆ. ಆದರೆ ರೈತರು ಇದರ ನೋವು ಅನುಭವಿಸಬೇಕಾಗಿದೆ. ಆಂಧ್ರ-ಮಹಾರಾಷ್ಟ್ರ-ಕೇರಳದ ವಾಣಿಜ್ಯ ಬೆಳೆಗಳ ರೈತರು ಕೈ ಸುಟ್ಟುಕೊಂಡಿದ್ದಾರೆ. ವಾಣಿಜ್ಯ ಬೆಳೆಗಳನ್ನು ಬೆಳೆಯಲು ಹೆಚ್ಚಿನ ಬಂಡವಾಳ ಬೇಕು-ಆದರೆ ಬ್ಯಾಂಕುಗಳು ಸಾಲ ನೀಡುವುದಿಲ್ಲ. ರೈತರು ಲೇವಾದೇವಿಗಾರರ ಹತ್ತಿರ ದುಬಾರಿ ಬಡ್ಡಿಗೆ ಸಾಲ ತೆಗೆದುಕೊಳ್ಳುತ್ತಾರೆ. ವಾಣಿಜ್ಯ ಬೆಳೆಗಳ ಬೆಲೆ ಕುಸಿದರೆ ರೈತ ದಿವಾಳಿಯಾಗುತ್ತಾನೆ. ಇವುಗಳ ಪರಿಣಾಮವಾಗಿ ಕೇರಳದಲ್ಲಿ 1998 ರಿಂದ ರೈತರ ಆತ್ಮಹತ್ಯೆಗಳು ಆರಂಭವಾದವು. ಏಕೆಂದರೆ ಕೇರಳದ ರೈತರು ತಾವು ಮಾಡಿದ್ದ ಸಾಲ ವಾಪಸ್ಸು ಮಾಡಲು ವಿಫಲರಾಗಿ ಹತಾಶರಾದರು. ಇಡೀ ದೇಶದಲ್ಲಿ ಇದೇ ಪರಿಸ್ಥಿತಿ. ಆದ್ದರಿಂದ 1995-2010ರ ನಡುವೆ 2,56,913 ರೈತರು ಆತ್ಮಹತ್ಯೆ ಮಾಡಿಕೊಂಡರು. ಕರ್ನಾಟಕದಲ್ಲಿ 2009-2010ರ ನಡುವೆ 300 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಉತ್ಪಾದನೆ ಮತ್ತು ಗುಣಮಟ್ಟ ಹೆಚ್ಚಿಸಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ನೀಡಬೇಕು ಎನ್ನಲಾಗುತ್ತದೆ. ಅಮೆರಿಕದ ರೈತರಿಗಿಂತ ಕಡಿಮೆ ವೆಚ್ಚದಲ್ಲಿ ನಮ್ಮ ಬಿಹಾರದ ರೈತರು ಗೋಧಿ ಉತ್ಪಾದನೆ ಮಾಡುತ್ತಾರೆ. ಬಹುರಾಷ್ಟ್ರೀಯ ಕಂಪನಿಗಳು ಅತಿ ಹೆಚ್ಚು ಖರ್ಚು ಮಾಡಿ ಕೃಷಿ ಮಾಡುತ್ತವೆ. ಆದ್ದರಿಂದ ನಮ್ಮ ಸಮಸ್ಯೆಗೆ ಅವು ಪರ್ಯಾಯವಾಗಲಾರವು. ಅವುಗಳಿಂದ ನಮ್ಮ ಕೃಷಿಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಜನತೆಯು ಸರ್ಕಾರಗಳು ಎಂದು ಕರೆಸಿಕೊಂಡ ನಮ್ಮ ಸರ್ಕಾರಗಳು ಪರ್ಯಾಯ ಮಾರ್ಗಗಳನ್ನು ಅನುಸರಿಸುವತ್ತ ಗಮನ ಹರಿಸಬೇಕು. ಆದರೆ ನಮ್ಮ ಸರ್ಕಾರಗಳು ಹುಚ್ಚಾಟ ಆಡುತ್ತಿವೆ.

ಕೃಷಿ ಕ್ಷೇತ್ರಕ್ಕೆ ಕಾರ್ಪೋರೇಟ್ ಸಂಸ್ಥೆಗಳನ್ನು ಬಿಟ್ಟರೆ ಅವರು ಉದ್ಯೋಗವನ್ನೇನನ್ನೂ ಸೃಷ್ಟಿ ಮಾಡುವುದಿಲ್ಲ. ಅದರಲ್ಲಿ ಅವರಿಗೆ ಆಸಕ್ತಿಯೂ ಇಲ್ಲ. ಅವರ ಗಮನವೇನಿದ್ದರೂ ಲಾಭದ ಕಡೆಗೆ. ಇದರಿಂದ ನಮ್ಮ ಜನರಿಗೇನೂ ಲಾಭವಿಲ್ಲ. ಅವರ ಲಾಭದ ಪರಿಯ ಇತಿಹಾಸ ನಮ್ಮ ಮುಂದಿದೆ. ಅವರು ನಮ್ಮ ಅನುಕೂಲಕ್ಕೆ ಬರುತ್ತಾರೆ ಎನ್ನುವುದು ತಪ್ಪು ತಿಳುವಳಿಕೆಯಷ್ಟೆ. ಅವರು ನಮಗಿಂತ ಸಮರ್ಥರೂ ಅಲ್ಲ. ಅವರಿಂದ ನಮಗೆ ಸಮಸ್ಯೆಗಳೇ ಹೆಚ್ಚಾಗುತ್ತವೆ. ಕೇವಲ ಮಾರಲು ಮಾತ್ರ ಅವರು ಉತ್ಪಾದಿಸುತ್ತಾರೆ. ಆಹಾರ ಬೆಳೆಗಳಿಗಿಂತ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಹೆಚ್ಚಿನ ಖರ್ಚು-ಸಾಲ-ಸಾವು ಎಂಬಂತಾಗುತ್ತದೆ. ಅವು ತಮ್ಮ ಬಿಕ್ಕಟ್ಟನ್ನು ರೈತರಿಗೆ ವರ್ಗಾಯಿಸಲು ಯತ್ನಿಸೋಣ.

ಬಹುರಾಷ್ಟ್ರೀಯ ಕಂಪನಿಗಳ ಜೊತೆ ಗುತ್ತಿಗೆ ಕೃಷಿ ಮಾಡಿದ ಪಂಜಾಬ್ ಹರ್ಯಾಣ ರೈತರ ಅನುಭವ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ದೀರ್ಘಾವಧಿಯಲ್ಲಿ ಅವು ರೈತರಿಗೆ ಲಾಭವನ್ನು ತಂದಿಲ್ಲ. ಅವೆಲ್ಲವೂ ಒಂದು ರೀತಿಯ ಹುಚ್ಚಾಟದಂತೆಯೇ ಆಗಿವೆ.

ಇದೇ ರೀತಿಯ ನೀತಿಗಳಿಂದ ಕೇರಳದಲ್ಲಿ

ಪುಟ 12 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R.Nagar, BANGALORE-560027 Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor S.Y.GURUSHANTH